ಪ್ರಜಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಕಾಂತಾರ ಥೀಮ್ ಕೇಕ್

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಕೇಕ್ ಶೋನಲ್ಲಿ ಕಂಡ 'ಕಾಂತಾರ' ಸಿನಿಮಾ ಥೀಮ್ ಕೇಕ್

ಬಿಬಿಎಂಪಿ ಆಚೆಗೂ ಜಿಬಿಎ

ತಿದ್ದುಪಡಿ ಮಸೂದೆ • ಸಂಸ್ಥೆಗಳ ಮರುವಿಂಗಡಣೆಗೆ 3 ತಿಂಗಳು ಗಡುವು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯನ್ನು ಹಿಂದಿನ ಬಿಬಿಎಂಪಿ ವ್ಯಾಪ್ತಿಯ ಆಚೆಗೆ ವಿಸ್ತರಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ 'ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ಮಸೂದೆ-2025' ಅನ್ನು ವಿಧಾನಸಭೆಯಲ್ಲಿ ಗುರುವಾರ ಮಂಡಿಸಲಾಯಿತು.

ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪರವಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಈ ಮಸೂದೆ ಮಂಡಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಹೊಸದಾಗಿ ಸೇರಿಸಲಾದ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಪ್ರದೇಶಗಳ ಮರು ವಿಂಗಡಣೆಗೆ ಮೂರು ತಿಂಗಳ ಕಾಲಮಿತಿ ವಿಧಿಸಲಾಗಿದೆ.



ಜೊತೆಗೆ, ನಗರಪಾಲಿಕೆಯ ಮುಂದಿನ ಸಾರ್ವತ್ರಿಕ ಚುನಾವಣೆಯ ಕನಿಷ್ಠ ಆರು ತಿಂಗಳ ಮೊದಲು ಜನಗಣತಿಯ ಫಲಿತಾಂಶಗಳು ಲಭ್ಯ ಇದ್ದರೆ ಮತ್ತು ಪ್ರತಿ ಜನಗಣತಿಯ ಬಳಿಕ ನಗರಪಾಲಿಕೆಯ ಮುಂದಿನ ಸಾರ್ವತ್ರಿಕ ಚುನಾವಣೆಯ ಮೊದಲು ಹೊಸ ಪುನರ್‌ವಿಂಗಡಣೆ ಪ್ರಕ್ರಿಯೆ ನಡೆಸಬೇಕು ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.

ಗ್ರೇಟರ್ ಬೆಂಗಳೂರು ನಗರಪಾಲಿಕೆಗಳಿಗೆ ನೇಮಕವಾದ ಸದಸ್ಯ ಪದಾವಧಿಯವರೆಗೆ ಆಯಾ ವಿಧಾನಸಭೆ ಕ್ಷೇತ್ರ ಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಗೆ ನಾಮನಿರ್ದೇಶಿತ ಸದಸ್ಯ ಕೂಡ ಆಗಿರುತ್ತಾರೆ ಎಂದೂ ಮಸೂದೆಯಲ್ಲಿದೆ.

ಜಿಬಿಎ ಸದಸ್ಯರ ಸಂಖ್ಯೆ ಹೆಚ್ಚಳ: ಜಿಬಿಎ ಪ್ರದೇಶ ಅಥವಾ ಭಾಗಶಃ ಮತಕ್ಷೇತ್ರ ಬರುವ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರು, ರಾಜ್ಯಸಭೆ, ವಿಧಾನ ಪರಿಷತ್‌ಗೆ ನೇಮಕವಾದ ಸದಸ್ಯರು, ವಿಧಾನ ಪರಿಷತ್ ಶಿಕ್ಷಕರ, ಪದವೀಧರ ಕ್ಷೇತ್ರದಿಂದ ಚುನಾಯಿತರು, ಜಿಬಿಎ ಪ್ರದೇಶದ ಮತದಾರರ ಪಟ್ಟಿಯಲ್ಲಿ ಇರುವ ರಾಜ್ಯಸಭಾ, ವಿಧಾನ ಪರಿಷತ್ ಸದಸ್ಯರು ಪ್ರಾಧಿಕಾರದ ಸದಸ್ಯರಾಗಲಿದ್ದಾರೆ. ಅಲ್ಲದೆ, ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಹಾಗೂ ಆರ್ಥಿಕ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಜಿಬಿಎ ಪದನಿಮಿತ್ತ ಸದಸ್ಯರಾಗಲಿದ್ದಾರೆ ಎಂದೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ನಗರ ಪಾಲಿಕೆಗೆ ನಾಮನಿರ್ದೇಶನ

ಜಿಬಿಎ ವ್ಯಾಪ್ತಿಗೆ ಸೇರಿಸಲಾಗುವ ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವವರೆಗೆ ಪ್ರತಿ 20 ಸಾವಿರ ಜನಸಂಖ್ಯೆಗೆ ಕನಿಷ್ಠ ಒಬ್ಬರಂತೆ ನಿರ್ದಿಷ್ಟ ನಗರಪಾಲಿಕೆಗೆ ಹೆಚ್ಚುವರಿ ಸದಸ್ಯರನ್ನು ನೇಮಿಸಲು ಮಸೂದೆ ಅವಕಾಶ ಕಲ್ಪಿಸಿದೆ.

ಹೀಗೆ ನಾಮನಿರ್ದೇಶನಗೊಳ್ಳುವವರು ಸ್ಥಳೀಯ ಪ್ರದೇಶಕ್ಕೆ ಸೇರಿದವರಾಗಿಬೇಕು. ಹೀಗೆ ನೇಮಕಗೊಂಡವರಿಗೆ ನಗರಪಾಲಿಕೆಯಲ್ಲಿ ಮತದಾನ ಅಧಿಕಾರ ಇರುವುದಿಲ್ಲ. ಹೊಸದಾಗಿ ಸೇರಿಸಲಾದ ಸ್ಥಳೀಯ ಪ್ರದೇಶಕ್ಕೆ ಪುನರ್ ವಿಂಗಡಣೆಯ ನಂತರ ಆ ಪ್ರದೇಶದ ಸೇರ್ಪಡೆಯ ಆರು ತಿಂಗಳ ಒಳಗೆ ಚುನಾವಣೆ ನಡೆಸಬೇಕು. ಚುನಾಯಿತರಾದವರು ಹೊಸದಾಗಿ ಸೇರಿಸಲಾದ ಸ್ಥಳೀಯ ಪ್ರದೇಶವನ್ನು ಹೊಂದಿದ ನಗರಪಾಲಿಕೆಯ ಉಳಿದ ಅವಧಿವರೆಗೆ ಮಾತ್ರ ಸ್ಥಾನ ಹೊಂದಿರುತ್ತಾರೆ. ಆ ನಗರಪಾಲಿಕೆಯ ಸದಸ್ಯರ ಪದಾವಧಿ ಆರು ತಿಂಗಳ ಅವಧಿಯೊಳಗೆ ಅಂತ್ಯ ಆಗುವುದಾದರೆ ಹೊಸದಾಗಿ ಸೇರಿಸಿದ ಪ್ರದೇಶಕ್ಕೆ ಚುನಾವಣೆ ಬೇಡವೆಂದು ಮಸೂದೆಯಲ್ಲಿ ವಿವರಿಸಲಾಗಿದೆ.

ಭೋಜನಕೂಟ: ಡಿಕೆಶಿ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಬಣವು ಚಟುವಟಿಕೆ ಆರಂಭಿಸಿದ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಔತಣಕೂಟದ ನೆಪದಲ್ಲಿ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಬೆಳಗಾವಿಯ ಹೊರ ವಲಯದಲ್ಲಿ ಇರುವ ಫಾರ್ಮ್‌ಹೌಸ್‌ನಲ್ಲಿ ಡಿ.ಕೆ.ಶಿವಕುಮಾರ್ ಅವರು ತಡರಾತ್ರಿ ಏರ್ಪಡಿಸಿದ್ದ ಔತಣಕೂಟದಲ್ಲಿ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಮೀನುಗಾರಿಕೆ ಮತ್ತು ಬಂದರು ಸಚಿವ ಮಂಕಾಳ ವೈದ್ಯ, ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಅಧ್ಯಕ್ಷ ಅಪ್ಪಾಜಿ ನಾಡಗೌಡ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ.ಹ್ಯಾರಿಸ್ ಸೇರಿದಂತೆ ಸುಮಾರು 25 ಶಾಸಕರು ಪಾಲ್ಗೊಂಡಿದ್ದರು ಎಂದು ಗೊತ್ತಾಗಿದೆ. ಬಿಜೆಪಿಯಿಂದ ಉಚ್ಚಾಟಿತರಾದ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಈ ಔತಣಕೂಟದಲ್ಲಿ ಪಾಲ್ಗೊಂಡಿರುವುದಾಗಿ ತಿಳಿದುಬಂದಿದೆ.

ಬೆಳಗಾವಿಯ ಮಾಜಿ ಶಾಸಕ ಫಿರೋಜ್ ಸೇಠ್ ಬುಧವಾರ ರಾತ್ರಿ ತಮ್ಮ ಮನೆಯಲ್ಲಿ ಆಯೋಜಿಸಿದ್ದ ಭೋಜನಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಬಲಿಗರು ಪಾಲ್ಗೊಂಡಿದ್ದರು. ಸತೀಶ ಜಾರಕಿಹೊಳಿ, ಎಚ್.ಸಿ.ಮಹದೇವಪ್ಪ, ಜಮೀರ್ ಅಹಮದ್ ಖಾನ್, ಎನ್.ಎ. ಹ್ಯಾರಿಸ್, ಆಸಿಫ್ ಸೇಠ್ ಸೇರಿ ಹಲವರು ಭಾಗಿಯಾಗಿದ್ದರು. ಈ ಭೋಜನ ಕೂಟ ಮುಗಿದ ಬಳಿಕ ಬೆಳಗಾವಿಯ ಹೋಟೆಲ್ ಒಂದರಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನೇತೃತ್ವದಲ್ಲಿ ಸಭೆ ಸೇರಿದ್ದ ವಾಲ್ಮೀಕಿ ಸಮುದಾಯದ ಶಾಸಕರು ಸುದೀರ್ಘ ಚರ್ಚೆ ನಡೆಸಿದ್ದರು.

ಮುಖ್ಯಮಂತ್ರಿ ಅವರ ಮಗ ಯತೀಂದ್ರ ಸಿದ್ದರಾಮಯ್ಯ ಗುರುವಾರ ಬೆಳಿಗ್ಗೆ ಸುದ್ದಿಗಾರರ ಜತೆ ಮಾತನಾಡಿ, 'ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿ ಮುಂದುವರೆಯಲಿದ್ದಾರೆ' ಎಂದು ಪ್ರತಿಪಾದಿಸಿದ್ದರು.

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ ತಮ್ಮ ಬಲ ಪ್ರದರ್ಶನಕ್ಕೆ ಮುಂದಾದ ಡಿ.ಕೆ.ಶಿವಕುಮಾರ್ ಭೋಜನಕೂಟದ ನೆಪದಲ್ಲಿ, ತಮ್ಮ ಜತೆಗಿರುವ ಶಾಸಕರನ್ನು ಒಗ್ಗೂಡಿಸುವ ಯತ್ನ ನಡೆಸಿದ್ದಾರೆ.

ಭೋಜನಕೂಟದಲ್ಲಿ ಇದ್ದವರು...

ಶಾಸಕರಾದ ಶ್ರೀರಂಗಪಟ್ಟಣದ ರಮೇಶ್ ಬಂಡಿ ಸಿದ್ದೇಗೌಡ, ಕೋಲಾರದ ಕೊತ್ತೂರು ಮಂಜುನಾಥ್, ಮಾಲೂರು ಕೆ.ವೈ.ನಂಜೇಗೌಡ, ಮಾಗಡಿಯ ಎಚ್.ಸಿ.ಬಾಲಕೃಷ್ಣ, ಮದ್ದೂರಿನ ಉದಯ್‌ಗೌಡ ಕದಲೂರು, ಪುತ್ತೂರಿನ ಅಶೋಕ್ ಕುಮಾರ್ ರೈ, ನೆಲಮಂಗಲದ ಎನ್.ಟಿ.ಶ್ರೀನಿವಾಸ್, ಪುಲಕೇಶಿ ನಗರದ ಎ.ಸಿ.ಶ್ರೀನಿವಾಸ್, ಆನೇಕಲ್ ಶಿವಣ್ಣ, ಶೃಂಗೇರಿಯ ಟಿ.ಡಿ.ರಾಜೇಗೌಡ, ರಾಮನಗರದ ಇಕ್ಬಾಲ್ ಹುಸೇನ್, ಕುಣಿಗಲ್‌ನ ಎಚ್.ಡಿ.ರಂಗನಾಥ್, ಸುರಪುರದ ರಾಜಾ ವೆಂಕಟಪ್ಪ ನಾಯಕ್, ಚನ್ನಪಟ್ಟಣದ ಸಿ.ಪಿ.ಯೋಗೇಶ್ವರ್, ಚಾಮರಾಜದ ಕೆ.ಹರೀಶ್‌ಗೌಡ, ಹರಪನಹಳ್ಳಿಯ ಲತಾ ಮಲ್ಲಿಕಾರ್ಜುನ, ಮಡಿಕೇರಿಯ ಮಂಥರ್ ಗೌಡ ಮತ್ತಿತರರು ಇದ್ದರು ಎಂದು ಗೊತ್ತಾಗಿದೆ.

‘ಪಾರಂಪರಿಕ ತಾಣ’ ರದ್ದು

ಕಂಟೋನ್ಮೆಂಟ್: ಮೂರು ತಿಂಗಳಲ್ಲೇ ಅರಣ್ಯ ಇಲಾಖೆಯ ನಿರ್ಧಾರ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿ 371 ಮರಗಳಿರುವ 8.61 ಎಕರೆ ಪ್ರದೇಶವನ್ನು ‘ಜೀವವೈವಿಧ್ಯ ಪಾರಂಪರಿಕ ತಾಣ’ ಎಂದು ಘೋಷಿಸಿ ಮೂರು ತಿಂಗಳ ಹಿಂದೆ ಹೊರಡಿಸಿದ್ದ ಆದೇಶವನ್ನು ಯಾವುದೇ ಕಾರಣ ನೀಡದೆ ಈ ತಿಂಗಳ 6ರಂದು ಅರಣ್ಯ ಇಲಾಖೆಯು ಹಿಂಪಡೆದಿದೆ.

ವಸಂತನಗರದ ದಂಡು ಪ್ರದೇಶದ ಬಳಿಯ ರೈಲ್ವೆ ಕಾಲೊನಿಯಲ್ಲಿ 371 ಮರಗಳಿರುವ ಈ ಪ್ರದೇಶವನ್ನು ‘ಜೀವವೈವಿಧ್ಯ ಪಾರಂಪರಿಕ ತಾಣ’ ಎಂದು 2025ರ ಸೆಪ್ಟೆಂಬರ್ 10ರಂದು ಘೋಷಿಸಲಾಗಿತ್ತು. ಆದರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಏಕಾಏಕಿ ಈ ಆದೇಶವನ್ನು ವಾಪಸ್ ಪಡೆದಿದ್ದು, ಇದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಈ ಜಾಗದಲ್ಲಿನ ಮರಗಳನ್ನು ತೆರವುಗೊಳಿಸಿ ವಾಣಿಜ್ಯ ಕೇಂದ್ರ ಅಭಿವೃದ್ಧಿಪಡಿಸುವುದಕ್ಕೆ ಪರಿಸರ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿ, ಹೋರಾಟ ನಡೆಸಿದ್ದರು. ಆಗ, ಇದಕ್ಕೆ ಸ್ಪಂದಿಸಿದ ರಾಜ್ಯ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರೂ ಆಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ, ಮಂಡಳಿಯ ವಿಶೇಷ ಸಭೆ ನಡೆಸಿ, ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ಹೊಂದಿಕೊಂಡಿರುವ ಈ ಪ್ರದೇಶವನ್ನು ಹಸಿರು ವಲಯವನ್ನಾಗಿ ಪರಿಗಣಿಸಲಾಗಿತ್ತು. ಜೀವ ವೈವಿಧ್ಯ ಕಾಯ್ದೆ–2002 ನಿಬಂಧನೆಗಳ ಅಡಿಯಲ್ಲಿ ಈ ಸ್ಥಳವನ್ನು ‘ಜೀವವೈವಿಧ್ಯ ಪಾರಂಪರಿಕ ತಾಣ’ (ಬಿಎಚ್‌ಎಸ್) ಎಂದು ಘೋಷಿಸಿ ಅಧಿಸೂಚನೆ ಹೊರಡಿಸಲಾಗಿತ್ತು.

‘ಈ ಪ್ರದೇಶವು ಸಸ್ಯ ಸಂಕುಲ, ಪಕ್ಷಿ ಸಂಕುಲ ಮತ್ತು ಕೀಟ ಸಂಕುಲದ ತಾಣವಷ್ಟೇ ಅಲ್ಲದೆ ಬೆಂಗಳೂರು ನಗರಕ್ಕೆ ಅತ್ಯಗತ್ಯವಾದ ಶ್ವಾಸತಾಣವಾಗಿದೆ. 50-60 ವರ್ಷಗಳಿಂದ ಬೆಳೆದ ಬೃಹತ್ ಮರಗಳಿರುವ ಪ್ರದೇಶವನ್ನು ಬೆಂಗಳೂರು ಉಪನಗರ ರೈಲ್ವೆ ಯೋಜನೆಗೆ ನಿಧಿ ಸಂಗ್ರಹಿಸುವ ಉದ್ದೇಶದಿಂದ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರ ಖಾಸಗಿ ಸಂಸ್ಥೆಯೊಂದಕ್ಕೆ 60 ವರ್ಷಗಳ ದೀರ್ಘಾವಧಿಗೆ ಗುತ್ತಿಗೆ ನೀಡಿತ್ತು.

ಗುತ್ತಿಗೆ ಪಡೆದ ಸಂಸ್ಥೆ ಇಲ್ಲಿರುವ 368 ಮರಗಳನ್ನು ಕಡಿಯಲು ಅನುಮತಿ ಕೋರಿತ್ತು. ಇದಕ್ಕೆ ಪರಿಸರ ಪ್ರೇಮಿಗಳು, ವೃಕ್ಷ ಪ್ರೇಮಿಗಳು, ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗಿತ್ತು.

ಯಾವುದೇ ವಿವರಣೆ ಇಲ್ಲ: ‘ಮರಗಳನ್ನು ಉಳಿಸಿಕೊಳ್ಳಲು ಆ ಪ್ರದೇಶವನ್ನು ಪಾರಂಪರಿಕ ತಾಣವನ್ನಾಗಿಸಲಾಗಿತ್ತು. ಇದಕ್ಕಾಗಿ ಸಾಕಷ್ಟು ಮಂದಿ ಹೋರಾಟ ನಡೆಸಿದ್ದರು. ಮರಗಳ ರಕ್ಷಣೆಯಾಯಿತು ಎಂಬ ಸಂತಸ ಇನ್ನೂ ಮಾಸದ ಸಮಯದಲ್ಲೇ ಯಾವುದೇ ವಿವರಣೆ ಇಲ್ಲದೆ ಅಧಿಸೂಚನೆ ವಾಪಸ್ ಪಡೆದಿರುವುದು ಸರಿಯಲ್ಲ. ಹೋರಾಟ ಮುಂದುವರಿಸುತ್ತೇವೆ’ ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಹೇಳಿದರು.

ರೈಲ್ವೆ ಕಾಲೊನಿಯಲ್ಲಿ 371 ಮರಗಳಿರುವ ಪ್ರದೇಶ

ಲಾಬಿಗೆ ಮಣಿದ ಸಚಿವ: ರಾಮಸ್ವಾಮಿ

‘ಕಂಟೋನ್ಮೆಂಟ್‌ನಲ್ಲಿ ನೂರಾರು ವರ್ಷಗಳಷ್ಟು ಹಳೆಯ 368 ಮರ ಕಡಿಯದಂತೆ ಪರಿಸರಕ್ಕಾಗಿ ನಾವು ಸಂಘಟನೆ ಸೇರಿದಂತೆ ಹಲವು ಪರಿಸರ ಕಾರ್ಯಕರ್ತರು 2025ರ ಏಪ್ರಿಲ್‌ನಿಂದ ಮಾಡಿದ ಹೋರಾಟಕ್ಕೆ ಸೆಪ್ಟೆಂಬರ್‌ನಲ್ಲಿ ಫಲ ಸಿಕ್ಕಿತ್ತು. ಆದರೆ, ಅರಣ್ಯ ಸಚಿವರು ಮರಗಳನ್ನು ರಕ್ಷಿಸುವ ತಮ್ಮ ಭರವಸೆಯ ಮಾತಿನಿಂದ ಹಿಂದೆ ಸರಿದು, ರಿಯಲ್ ಎಸ್ಟೇಟ್ ಲಾಬಿಗೆ ಮಣಿದ್ದಾರೆ’ ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಆರೋಪಿಸಿದರು.

‘ಆಡಳಿತ ನಡೆಸುವವರು ದುಡ್ಡಿನ ದುರಾಸೆಯಿಂದ 368 ಮರಗಳನ್ನು ಕೊಲೆ ಮಾಡಲು ಹೊರಟಿದ್ದಾರೆ. ತಾಪಮಾನ ಹೆಚ್ಚಾಗಿ, ಭೂಮಿ ಬಿಸಿಯಾಗಿದ್ದು, ಬರ, ನೆರೆ, ಭೂಕಂಪಗಳು ಹೆಚ್ಚಾಗುತ್ತಿವೆ. ಹವಾಮಾನ ವೈಪರೀತ್ಯದ ಸಂದರ್ಭದಲ್ಲಿ ಪರಿಸರವನ್ನು ಉಳಿಸಿಕೊಂಡು, ಸಂರಕ್ಷಿಸಿದರೆ ಮುಂದಿನ ಪೀಳಿಗೆಗೆ ಹಸಿರಿನ ಸಂಪತ್ತು ನೀಡಬಹುದು. ಆದರೆ ಈ ಬಗ್ಗೆ ಸರ್ಕಾರಕ್ಕೆ ಕಾಳಜಿಯೇ ಇಲ್ಲ’ ಎಂದು ದೂರಿದರು.

‘ರೈಲ್ ಲ್ಯಾಂಡ್ ಡೆವಲಪ್‌ಮೆಂಟ್ ಅಥಾರಿಟಿ’ಯವರು, ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ಸುಮಾರು ಐದು ಎಕರೆ ಜಾಗವನ್ನು ಬಾಗ್ಮನೆ ಐಟಿ ಕಂಪನಿಯವರಿಗೆ ಗುತ್ತಿಗೆ ಕೊಡುತ್ತಿದ್ದಾರೆ.

ಇದನ್ನು ನಾವೆಲ್ಲ ಪ್ರತಿಭಟಿಸಿದಾಗ ನಮ್ಮ ಕಣ್ಣೊರೆಸಲು ಆ ಜಾಗವನ್ನು ‘ಜೀವವೈವಿಧ್ಯ ಪಾರಂಪರಿಕ ತಾಣ’ ಎಂದು ಘೋಷಿಸಿದ್ದರು ಎನಿಸುತ್ತದೆ. ಈಗ ಅವರ ನಿಜ ಬಣ್ಣ ಬಯಲಾಗಿದೆ.

ಕಂಟೋನ್ಮೆಂಟ್‌ನ 371 ಮರಗಳನ್ನು ಉಳಿಸಿ, ‘ಜೀವವೈವಿಧ್ಯ ಪಾರಂಪರಿಕ ತಾಣ’ ಎಂಬ ಆದೇಶವನ್ನು ಮರು ಜಾರಿಗೊಳಿಸದಿದ್ದರೆ ತೀವ್ರ ಹೋರಾಟ ನಡೆಸಲಾಗುತ್ತದೆ’ ಎಂದರು.

ನಕ್ಷೆ ನೀಡುವ ಅಧಿಕಾರಿಗಳೇ ಅಕ್ರಮ ತಡೆಯಲಿ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಕ್ಷೆ ನೀಡುವುದು, ನಕ್ಷೆ ಉಲ್ಲಂಘಿಸಿ ನಿರ್ಮಾಣ ಮಾಡುವ ಪ್ರಕರಣ ಸೇರಿದಂತೆ ಅನಧಿಕೃತ ನಿರ್ಮಾಣದ ಮೇಲೆ ಕ್ರಮ ಕೈಗೊಳ್ಳುವ ಜವಾಬ್ದಾರಿಯನ್ನು ನಗರ ಯೋಜನೆ ಇಲಾಖೆಯ ಅಧಿಕಾರಿಗಳಿಗೇ ವಹಿಸಬೇಕು ಎಂದು ಒತ್ತಾಯಿಸಲಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ–ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಈ ಬಗ್ಗೆ ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದು, ಬಿಬಿಎಂಪಿ ಕಾಯ್ದೆ–2020 ವೃಂದ ನೇಮಕಾತಿ ನಿಯಮ, ಬಿಬಿಎಂಪಿ ಆಯುಕ್ತರ ಎಸ್‌ಒಪಿ ಆದೇಶ, ಕರ್ನಾಟಕ ಲೋಕೋಪಯೋಗಿ ಇಲಾಖೆಯ ಕೋಡ್, ರಾಷ್ಟ್ರೀಯ ಕಟ್ಟಡ ಕೋಡ್–2016 ಅನ್ನು ಉಲ್ಲೇಖಿಸಿ, ಕ್ರಮ ಕೈಗೊಳ್ಳಲು ಮನವಿ ಮಾಡಿದೆ.

ಕಟ್ಟಡ ನಿರ್ಮಾಣ ನಕ್ಷೆ ಮಂಜೂರಾತಿ ಮತ್ತು ನಕ್ಷೆ ಉಲ್ಲಂಘನೆ, ಅನಧಿಕೃತ ನಿರ್ಮಾಣದ ಪ್ರಕರಣಗಳಲ್ಲಿ ಕಾರ್ಯ-ನಿರ್ವಹಣೆ ಜವಾಬ್ದಾರಿಯನ್ನು ನಗರ ಯೋಜನೆ ವಿಭಾಗದ ಅಧಿಕಾರಿಗಳಿಗೇ ವಹಿಸಬೇಕು. ವಾರ್ಡ್ ಮಟ್ಟದ ಎಂಜಿನಿಯರ್‌ಗಳನ್ನು ಈ ಜವಾಬ್ದಾರಿಯಿಂದ ಮುಕ್ತಗೊಳಿಸಬೇಕು ಎಂದು ವಿನಂತಿಸಲಾಗಿದೆ.

ಜಿಬಿಎ ವ್ಯಾಪ್ತಿಯ ಐದೂ ನಗರ ಪಾಲಿಕೆಗಳಲ್ಲಿ ಕಾರ್ಯಾಚರಣೆಯನ್ನು ಒಂದೇ ರೀತಿ ಇರುವಂತೆ ಮಾಡಬೇಕು. ತಾಂತ್ರಿಕ ಸಿಬ್ಬಂದಿಯನ್ನು ದಕ್ಷ ರೀತಿಯಲ್ಲಿ ಬಳಸಿಕೊಳ್ಳಬೇಕು. ನಾಗರಿಕರಿಗೆ ಸೇವೆಯನ್ನು ವಿತರಿಸಲು ಕಾರ್ಯ ನಿರ್ವಹಣೆಯನ್ನು ಅಭಿವೃದ್ಧಿಗೊಳಿಸಬೇಕು. ವಾರ್ಡ್ ಮಟ್ಟದ ಎಂಜಿನಿಯರ್‌ಗಳ ವೃತ್ತಿಪರತೆಯನ್ನು ರಕ್ಷಿಸಿ, ಮಾನಸಿಕ ಒತ್ತಡವನ್ನು ಕಡಿಮೆ ಮಾಡಬೇಕು ಎಂದು ಮನವಿ ಮಾಡಲಾಗಿದೆ.

ಬಿಬಿಎಂಪಿ ಕಾಯ್ದೆಗೆ ಮುನ್ನ, ಕಟ್ಟಡ ನಕ್ಷೆ, ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲು ಬಿ.ಇ ಪದವೀಧರರನ್ನು ಸಿವಿಲ್ ಎಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಬಿಬಿಎಂಪಿ–2020 ಕಾಯ್ದೆಯ ನಂತರ, ನಗರ ಯೋಜನೆ ವಿಭಾಗವನ್ನು ರಚಿಸಲಾಯಿತು. ಇದರಲ್ಲಿ ನಗರ ಯೋಜಕ, ಉಪ ನಗರ ಯೋಜಕ, ಜಂಟಿ ನಿರ್ದೇಶಕ, ಹೆಚ್ಚುವರಿ ನಿರ್ದೇಶಕ, ಮುಖ್ಯ ನಗರ ಯೋಜಕ ಎಂಬ ಹುದ್ದೆಗಳಿವೆ. 2022ರಲ್ಲಿ ಬಿಬಿಎಂಪಿ ಆಯುಕ್ತರು ಈ ವಿಭಾಗಕ್ಕೆ, ಕಟ್ಟಡ ನಿರ್ಮಾಣ ನಕ್ಷೆ ಮಂಜೂರಾತಿ ಮತ್ತು ಅದರ ಉಲ್ಲಂಘನೆ ನಿಯಂತ್ರಣದ ಜವಾಬ್ದಾರಿಯನ್ನು ವಹಿಸಿ ಆದೇಶ ಹೊರಡಿಸಿದ್ದಾರೆ.

ಮೂರು ವರ್ಷಗಳಿಗೂ ಹೆಚ್ಚು ಕಾಲ ನಗರ ಯೋಜನೆ ವಿಭಾಗವೇ ಅನಧಿಕೃತ ನಿರ್ಮಾಣವನ್ನು ದಕ್ಷವಾಗಿ ನಿಯಂತ್ರಿಸುತ್ತಿದ್ದು, ಸ್ವತಂತ್ರವಾಗಿ ಯಾವುದೇ ಒತ್ತಡಕ್ಕೆ ಮಣಿಯದೆ ಕಾರ್ಯನಿರ್ವಹಿಸುತ್ತಿದೆ. ಹೀಗಾಗಿ, ಆ ವಿಭಾಗಕ್ಕೆ ಎಲ್ಲ ಜವಾಬ್ದಾರಿಯನ್ನು ಐದು ನಗರ ಪಾಲಿಕೆಗಳಲ್ಲಿ ವಹಿಸಬೇಕು ಎಂದು ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಮನವಿ ಮಾಡಿದ್ದಾರೆ. ಬೆಂಗಳೂರು ನಗರ ಕೇಂದ್ರ ಪಾಲಿಕೆ ಹೊರತು ಪಡಿಸಿದಂತೆ, ಉಳಿದ ನಾಲ್ಕು ನಗರ ಪಾಲಿಕೆಗಳಲ್ಲಿ ಕಟ್ಟಡ ನಕ್ಷೆ ಮಂಜೂರು ಪ್ರಕ್ರಿಯೆಯನ್ನು ಹೊರತುಪಡಿಸಿ, ಉಳಿದೆಲ್ಲ ಅಕ್ರಮಗಳು, ಉಲ್ಲಂಘನೆಗಳನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ವಾರ್ಡ್ ಎಂಜಿನಿಯರ್‌ಗಳ ಮೇಲೆ ಹೊರಿಸಿ ಆದೇಶವನ್ನು ಹೊರಡಿಸಲಾಗಿತ್ತು.

ಚುಟುಕು ಸುದ್ದಿ

ಲಯನ್ಸ್ ಪ್ರಾಂತೀಯ ಸಮ್ಮೇಳನ ನಾಳೆ

ಬೆಂಗಳೂರು: ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಇದೇ 13ರಂದು ವಿಜಯನಗರದಲ್ಲಿರುವ ಕಾಸಿಯಾ ಸಭಾಂಗಣದಲ್ಲಿ ಲಯನ್ಸ್ ಇಂಟರ್ ನ್ಯಾಷನಲ್–317ಎ ಪ್ರಾಂತೀಯ ಸಮ್ಮೇಳನ ನಡೆಯಲಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಾಂತೀಯ ಅಧ್ಯಕ್ಷ ರಾಜಾ ನಂಜುಂಡಯ್ಯ, ‘ಸೇನೆ ಹಾಗೂ ಸೇವೆ ಘೋಷ ವಾಕ್ಯದೊಂದಿಗೆ ಪ್ರಾಂತೀಯ ಸಮ್ಮೇಳನವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಸಮ್ಮೇಳನವನ್ನು ಡಾ.ಬಿ.ಬಿ. ರಘುನಾಥ್ ಅವರು ಉದ್ಘಾಟಿಸಲಿದ್ದಾರೆ. ಗುಬ್ಬಿ ಲಯನ್ಸ್ ಕ್ಲಬ್ ವತಿಯಿಂದ ₹10 ಲಕ್ಷ ಮೌಲ್ಯದ ಮೋಕ್ಷ ವಾಹನ (ಶವ ತೆಗೆದುಕೊಂಡು ಹೋಗುವ) ಲೋಕಾರ್ಪಣೆ ಮಾಡಲಾಗುತ್ತದೆ. ಇದರ ಜೊತೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ’ ಎಂದು ತಿಳಿಸಿದರು.ಗಾಯತ್ರಿ ಗಿರೀಶ್, ಗೋಪಾಲಕೃಷ್ಣ ಮನುವಾಚಾರ್ಯ ಸುದ್ದಿಗೋಷ್ಠಿಯಲ್ಲಿದ್ದರು

ಕಾವ್ಯ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಅಂಧರ ಸಾಹಿತ್ಯ ಪರಿಷತ್ತಿನ ವತಿಯಿಂದ ಪ್ರತಿಭಾ ನಂದಕುಮಾರ್ ಕಾವ್ಯ ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಲಾಗಿದೆ. ‘ಕವನ ಸಂಕಲನವು ಅಂಧ ಬರಹಗಾರರ ಸ್ವರಚಿತ ಅಥವಾ ಸಂಪಾದಿತ ಕೃತಿಯಾಗಿರಬೇಕು. ಇತರೆ ಭಾಷೆಗಳಿಂದ ಅನುವಾದಿಸಿರುವ ಕೃತಿಗಳನ್ನು ಪರಿಗಣಿಸಲಾಗುತ್ತದೆ. 2025ರಲ್ಲಿ ಕವನ ಸಂಕಲನಗಳು ಲಭ್ಯವಾಗದ ಸಂದರ್ಭದಲ್ಲಿ 2024ರ ಪ್ರಕಟಗೊಂಡ ಕೃತಿಗಳನ್ನು ಪರಿಗಣಿಸ-ಲಾಗುತ್ತದೆ. ಈ ಪ್ರಶಸ್ತಿಯನ್ನು ಅಖಿಲ ಕರ್ನಾಟಕ ಅಂಧರ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಆಸಕ್ತರು ಇದೇ 20ರೊಳಗೆ ಕೃತಿಗಳನ್ನು ಕಳುಹಿಸಬೇಕು’ ಎಂದು ಪರಿಷತ್ತಿನ ಅಧ್ಯಕ್ಷ ಮುದಿಗೆರೆ ರಮೇಶ್ ಕುಮಾರ್ ತಿಳಿಸಿದ್ದಾರೆ.

ವಿಳಾಸ: ಮಮತಾ ಜಿ. ಸಾಗರ್, ಡೋರ್ ನಂಬರ್–619, 7ನೇ ಕ್ರಾಸ್, ಒಂದನೇ ಮೇನ್, ನಾಲ್ಕನೇ ಹಂತ ಬಿಇಎಂಎಲ್, ಆರ್.ಆರ್. ನಗರ ಬೆಂಗಳೂರು–98.

ಮಾಹಿತಿಗೆ: 98447 69007–

ಸಂಕ್ಷಿಪ್ತ ಸುದ್ದಿ

ಹೂಡಿ: ‘ಬ್ಲ್ಯಾಕ್ ಸ್ಪಾಟ್’ ತೆರವು

ಪಾಲಿಕೆ ಸಿಬ್ಬಂದಿ ಬ್ಲ್ಯಾಕ್ ಸ್ಪಾಟ್' ತೆರವುಗೊಳಿಸಿದರು

ಕೆ.ಆರ್.ಪುರ: ಹೂಡಿ ಗ್ರಾಮದ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಗರ ಪಾಲಿಕೆ ಸಿಬ್ಬಂದಿ ಗುರುವಾರ ಸ್ವಚ್ಛತಾ ಕಾರ್ಯ ಕೈಗೊಂಡರು.

‘ಹೂಡಿಯಲ್ಲಿ ಹೆಚ್ಚಾದ 'ಬ್ಲ್ಯಾಕ್ ಸ್ಪಾಟ್’ ವರದಿಯು ‘ಪ್ರಜಾವಾಣಿ’ಯಲ್ಲಿ ಬುಧವಾರ ಪ್ರಕಟವಾಗಿತ್ತು. ಇದಕ್ಕೆ ಸ್ಪಂದಿಸಿದ ನಗರ ಪಾಲಿಕೆ ಅಧಿಕಾರಿಗಳು ಸ್ವಚ್ಛತಾ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿನ ತ್ಯಾಜ್ಯವನ್ನು ಸ್ವಚ್ಛಗೊಳಿಸಿದರು. ‘ಹೂಡಿ ಗ್ರಾಮದ ಪ್ರಮುಖ ರಸ್ತೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಸುರಿಯುತ್ತಿರುವ ಕುರಿತು ‘ಪ್ರಜಾವಾಣಿ’ ಮೂಲಕ ಗಮನಕ್ಕೆ ಬಂದಿತು. ಹೀಗಾಗಿ, ಸಿಬ್ಬಂದಿ ಮೂಲಕ ಕಸ ತೆರವುಗೊಳಿಸುವ ಕೆಲಸ ಮಾಡಿದ್ದೇವೆ. ಹೂಡಿ, ಹೂಡಿ ಮುಖ್ಯರಸ್ತೆ, ವೈಟ್‌ಫೀಲ್ಡ್ ರಸ್ತೆ, ಒಂದನೇ ಅಡ್ಡರಸ್ತೆ, ಮಾರಮ್ಮ ದೇವಸ್ಥಾನದ ರಸ್ತೆಗಳಲ್ಲಿ ಬಿದ್ದಿದ್ದ ಕಸದ ರಾಶಿಯನ್ನು ತೆರವುಗೊಳಿಸಲಾಗಿದೆ’ ಎಂದು ಪೂರ್ವ ನಗರ ಪಾಲಿಕೆ ಅಧಿಕಾರಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜ್ಯೋತಿ ಹೇಳಿದರು.

ಕನ್ನಡ ಡಿಂಡಿಮ ಪ್ರಶಸ್ತಿ ಪ್ರದಾನ 14ಕ್ಕೆ

ಬೆಂಗಳೂರು: ಕನ್ನಡ ಡಿಂಡಿಮ ಪ್ರತಿಷ್ಠಾನದ ವತಿಯಿಂದ ಇದೇ 14ರಂದು ಅಗ್ರಹಾರ ದಾಸರಹಳ್ಳಿ-ಯಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸಹಸ್ರ ಕಂಠ ಗಾನ ವೈಭವ ಹಾಗೂ ಕನ್ನಡ ಡಿಂಡಿಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ. ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಯುರ್ ಆಶ್ರಮದ ವಿದ್ಯಾ ವಾಚಸ್ಪತಿ ವಿಶ್ವ ಸಂತೋಷ ಭಾರತಿ ಸ್ವಾಮೀಜಿ, ‘ಚಲನಚಿತ್ರ ನಟ ಡಾ. ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ಕನ್ನಡ ಡಿಂಡಿಮ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಪ್ರಶಸ್ತಿಯನ್ನು ಚಿತ್ರನಟ ಶಿವರಾಜ್‌ಕುಮಾರ್ ಅವರು ಸ್ವೀಕರಿಸಲಿದ್ದಾರೆ’ ಎಂದು ತಿಳಿಸಿದರು.

‘ಮಹಿಳೆಯರು, ಮಕ್ಕಳು, ಪುರುಷರು ಸೇರಿದಂತೆ ಸುಮಾರು ಮೂರು ಸಾವಿರ ಗಾಯಕರು ಒಂದೇ ವೇದಿಕೆಯಲ್ಲಿ ಕನ್ನಡ ನಾಡ ಗೀತೆಗಳು, ದಾಸರ ಪದಗಳು, ಶಿವಶರಣರ ಹಾಡುಗಳು, ಕಗ್ಗ ತತ್ವ ಪದಗಳು, ಜಾನಪದ ರೈತ ಗೀತೆಗಳನ್ನು ಹಾಡಲಿದ್ದಾರೆ’ ಎಂದು ತಿಳಿಸಿದರು.

ಸರ್ಕಾರ ಸೂಕ್ತ ಪ್ರಕ್ರಿಯೆ ನಿಗದಿಪಡಿಸಬೇಕು: ಹೈಕೋರ್ಟ್ ಆದೇಶ

ರೌಡಿ ಶೀಟರ್: ಮೌಖಿಕ ಬುಲಾವ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್‌ಗಳನ್ನು ಮೌಖಿಕ ಆದೇಶ ಅಥವಾ ಮೌಖಿಕ ಸೂಚನೆ ಮೂಲಕ ಪೊಲೀಸ್ ಠಾಣೆಗೆ ಕರೆಸಿಕೊಳ್ಳುವ ಪದ್ಧತಿಗೆ ತಡೆ ಹಾಕಿರುವ ಹೈಕೋರ್ಟ್, ‘ರೌಡಿ ಶೀಟರ್‌ಗಳನ್ನು ಪೊಲೀಸ್ ಠಾಣೆಗೆ ಕರೆಸಿಕೊಳ್ಳುವ ದಿಸೆಯಲ್ಲಿ ರಾಜ್ಯ ಸರ್ಕಾರ ಸೂಕ್ತ ಪ್ರಕ್ರಿಯೆ ನಿಗದಿಪಡಿಸ-ಬೇಕು. ಅಲ್ಲಿಯವರೆಗೂ ಎಸ್‌ಎಂಎಸ್, ವಾಟ್ಸ್ ಆ್ಯಪ್ ಮೂಲಕ ಸಂದೇಶ ನೀಡಿ ಠಾಣೆಗೆ ಕರೆಯಿಸಬಹುದು’ ಎಂದು ಆದೇಶಿಸಿದೆ.

ರೌಡಿಗಳನ್ನು ತನಿಖೆ ಅಥವಾ ವಿಚಾರಣೆಗಾಗಿ ಪೊಲೀಸ್ ಠಾಣೆಗಳಿಗೆ ಕರೆಯಿಸುವ ದಿಸೆಯಲ್ಲಿ ಸೂಕ್ತ ನಿರ್ದೇಶನ ನೀಡುವಂತೆ ಕೋರಿ

ರೌಡಿಶೀಟರ್ ಸುನಿಲ್ ಕುಮಾರ್ ಅಲಿಯಾಸ್ ಸೈಲೆಂಟ್ ಸುನೀಲ್ ಸಲ್ಲಿಸಿದ್ದ ಅರ್ಜಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಮೂರ್ತಿ ಆರ್.ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಕೇವಲ ರೌಡಿ ಪಟ್ಟಿಯಲ್ಲಿ ಹೆಸರಿದೆ ಎಂಬ ಕಾರಣಕ್ಕಾಗಿ ಪೊಲೀಸರು ಅವರನ್ನು ಆಗಾಗ್ಗೆ ಮೌಖಿಕ ಸೂಚನೆ ನೀಡಿ ಕರೆಸಿಕೊಳ್ಳಬಾರದು. ಈ ಸಂಬಂಧ ಸರ್ಕಾರ ಸೂಕ್ತ ನಿಯಮಗಳನ್ನು ರೂಪಿಸಬೇಕು. ಅಲ್ಲಿಯವರೆಗೂ ರೌಡಿ ಶೀಟರ್‌ಗಳು ಪೊಲೀಸರಿಗೆ ತಮ್ಮ ಮೊಬೈಲ್ ನಂಬರ್ ನೀಡಬೇಕು. ಪೊಲೀಸರು ಅವರನ್ನು ಮೌಖಿಕವಾಗಿ ಸೂಚನೆ ನೀಡಿ ಕರೆಯಿಸಿಕೊಳ್ಳುವ ಬದಲಿಗೆ ಎಸ್‌ಎಂಎಸ್, ವಾಟ್ಸ್ ಆ್ಯಪ್ ಸಂದೇಶ ಕಳುಹಿಸಿ ಠಾಣೆಗೆ ಯಾವಾಗ ಹಾಜರಾಗಬೇಕೆಂದು ಸೂಚನೆ ನೀಡಬೇಕು. ಆಗಲೂ ಬರದಿದ್ದರೆ ಅವರ ಮನೆಗೆ ಹೋಗಬಹುದು’ ಎಂದು ನಿರ್ದೇಶಿಸಿದೆ.

ಆಕ್ಷೇಪ ಏನು?: ‘ನನ್ನ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 24 ಪ್ರಕರಣಗಳಲ್ಲಿ ಈಗಾಗಲೇ ನಾನು ಬಿಡುಗಡೆ ಹೊಂದಿದ್ದೇನೆ. ರೌಡಿ ಶೀಟ್ ಹೊರತುಪಡಿಸಿ, ನನ್ನ ವಿರುದ್ಧ ಯಾವುದೇ ಪ್ರಕರಣ ಬಾಕಿ ಉಳಿದಿಲ್ಲ. ಆದರೂ, ನನ್ನ ಮೇಲೆ ನಿಗಾ ಇಡುವ ನೆಪದಲ್ಲಿ, ಸಕಾರಣವಿಲ್ಲದೆ ಬಂಧಿಸುವುದರ ಜೊತೆಗೆ ಮೌಖಿಕವಾಗಿ ಸಮನ್ ಮಾಡಿ ನಿಂದಿಸಲಾಗುತ್ತಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

‘ಕರ್ನಾಟಕ ಪೊಲೀಸ್ ಕೈಪಿಡಿ–1965 ಅಥವಾ ಭಾರತೀಯ ನ್ಯಾಯ ಸಂಹಿತಾ–2023ರ ಅನುಸಾರ ರೌಡಿ ಪಟ್ಟಿಯಲ್ಲಿ ಹೆಸರು ಇರುವ ವ್ಯಕ್ತಿಗೆ ಸಮನ್ಸ್ ಜಾರಿ ಮಾಡುವ ವಿಧಾನದ ಬಗ್ಗೆ ಯಾವುದೇ ಕಾರ್ಯ-ವಿಧಾನವಿಲ್ಲ. ಆದರೂ, ಪ್ರತಿವಾದಿಗಳು ನನಗೆ ಮೌಖಿಕವಾಗಿ ಸಮನ್ ಮಾಡಿ ಕರೆಸಿಕೊಳ್ಳುತ್ತಿದ್ದಾರೆ’ ಎಂದು ದೂರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

prajavani.net prajavani | ಶುಕ್ರವಾರ, ಡಿಸೆಂಬರ್ 12, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 342 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆಯುಷ್ ನಾಯಕ
ದುಬೈನಲ್ಲಿ ನಡೆಯಲಿರುವ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡವನ್ನು ಆಯುಷ್ ಮ್ಹಾತ್ರೆ ಮುನ್ನಡೆಸಲಿದ್ದಾರೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 84,818 | ನಿಫ್ಟಿ 25,898 | $/₹ 90.32 | ಚಿನ್ನ (Std. 10g) ₹1,34,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,01,880 (ಬೆಂಗಳೂರು)

‘ಕೈ’ಬಣ ಜಗಳ: ಮತ್ತೆ ಬೀದಿಗೆ

ಅಗ್ನಿ ಅವಘಡ: ಲೂಥ್ರಾ ಸಹೋದರರ ಬಂಧನ

ಪಣಜಿ (ಪಿಟಿಐ): ಗೋವಾದ ನೈಟ್‌ಕ್ಲಬ್ ಅಗ್ನಿ ಅವಘಡದ ಬಳಿಕ ಥಾಯ್ಲೆಂಡ್‌ಗೆ ಪರಾರಿಯಾಗಿದ್ದ ಮಾಲೀಕರಾದ ಸೌರಭ್ ಹಾಗೂ ಗೌರವ್ ಲೂಥ್ರಾ ಅವರನ್ನು ಅಲ್ಲಿನ ಪೊಲೀಸರು ಫುಕೆಟ್‌ನಲ್ಲಿ ಗುರುವಾರ ಬಂಧಿಸಿದ್ದಾರೆ.

ವಿವರ 11

ಸಿ.ಎಂ ಬದಲಾವಣೆ ಇಲ್ಲ: ಯತೀಂದ್ರ ಹೇಳಿಕೆಗೆ ಡಿ.ಕೆ. ಶಿವಕುಮಾರ್ ತಿರುಗೇಟು

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕೆಲವು ದಿನಗಳಿಂದ ಬದಿಗೆ ಸರಿದಿದ್ದ ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಬಣ ಜಗಳ, ಇಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ನಡುವೆಯೇ ಬಿರುಸುಗೊಂಡಿದೆ.

ಯತೀಂದ್ರ ಮಾತಿಗೆ ಮೊದಲ ಬಾರಿಗೆ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದರೆ, ಸಿದ್ದರಾಮಯ್ಯ ಮತ್ತೆ ಹೈಕಮಾಂಡ್ ಕಡೆಗೆ ಬೊಟ್ಟು ಮಾಡಿದ್ದಾರೆ.

ಶಿವಕುಮಾರ್ ಅವರ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕರು, ಈ ಬೆಳವಣಿಗೆಗಳ ನಂತರ, ವಿಧಾನಸಭೆಯ ಮೊಗಸಾಲೆಯಲ್ಲಿ ಚರ್ಚೆ ನಡೆಸಿದರು. ಆದರೆ, ಯಾರೊಬ್ಬರೂ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯೆ ನೀಡಿಲ್ಲ.

ವಿಧಾನಸಭೆಯ ಕಲಾಪ ಮಧ್ಯಾಹ್ನಕ್ಕೆ ಮುಂದೂಡಿಕೆ ಆದರೂ ಡಿ.ಕೆ. ಶಿವಕುಮಾರ್ ಅವರು ಸದನದ ಒಳಗೇ ಕುಳಿತಿದ್ದರು. ಸಚಿವ ಪ್ರಿಯಾಂಕ್ ಖರ್ಗೆ, ಶಾಸಕರಾದ ಗಣಿಗ ರವಿ, ಎನ್.ಎ. ಹ್ಯಾರಿಸ್, ರೂಪಾ ಶಶಿಧರ್, ಶಿವಣ್ಣ ಅವರು ಶಿವಕುಮಾರ್ ಅವರ ಬಳಿ ತೆರಳಿ ಕೆಲಹೊತ್ತು ಚರ್ಚಿಸಿದರು. ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಬೆಳಿಗ್ಗೆಯೇ ಸರ್ಕೀಟ್ ಹೌಸ್‌ನಲ್ಲಿ ಶಿವಕುಮಾರ್ ಅವರನ್ನು ಭೇಟಿ ಮಾಡಿ ಸುಮಾರು ಒಂದು ತಾಸು ಚರ್ಚಿಸಿದ್ದರು.

6

ಕುರ್ಚಿ ಭದ್ರವಾಗಿದೆ: ಸಿದ್ದರಾಮಯ್ಯ

‘ನನ್ನ ಕುರ್ಚಿ ಭದ್ರವಾಗಿದೆ. ನಿಮ್ಮ ಕುರ್ಚಿಯನ್ನು ಮೊದಲು ಭದ್ರ ಮಾಡಿಕೊಳ್ಳಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಪರಿಷತ್‌ನಲ್ಲಿ ಸಿದ್ದರಾಮಯ್ಯ ಅವರು ಗುರುವಾರ ಮಾತನಾಡುವಾಗ ಮೈಕ್ ಸಮಸ್ಯೆಯಾಯಿತು. ಆಗ, ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ, ‘ನಿಮ್ಮ ಕುರ್ಚಿಯಲ್ಲೇ ಈ ರೀತಿಯಾದರೆ ಉಳಿದವರ ಗತಿ ಏನು? ಮೊದಲೇ ನಿಮ್ಮ ಕುರ್ಚಿ ಅಲುಗಾಡುತ್ತಿದೆ’ ಎಂದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಸಂಭಾಷಣೆಯನ್ನು ಮೌನವಾಗಿ ಆಲಿಸುತ್ತಾ ಕುಳಿತಿದ್ದರು.

ನಂತರ ಚರ್ಚೆ ಮುಂದುವರಿಸಿದ ಬಿಜೆಪಿಯ ಶಶೀಲ್ ನಮೋಶಿ, ‘ಸದಸ್ಯರು ಕುಳಿತುಕೊಳ್ಳುವ ಕುರ್ಚಿಗಳೂ ಸರಿ ಇಲ್ಲ. ದಾಖಲೆಗಳನ್ನು ಇಟ್ಟುಕೊಳ್ಳುವ ಟೇಬಲ್ ಹಾಗೂ ಕುರ್ಚಿ ಮಧ್ಯೆ ಜಾಗ ಜಾಸ್ತಿ ಇದೆ. ಪ್ರತಿ ಬಾರಿಯೂ ಸಮಸ್ಯೆ ಎದುರಿಸುತ್ತಿದ್ದೇವೆ’ ಎಂದು ಅಳಲು ತೋಡಿಕೊಂಡರು. ಅದಕ್ಕೆ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಧ್ವನಿಗೂಡಿಸಿದರು.

ದಿನದ ಬೆಳವಣಿಗೆ

ಮೊದಲು:
ಮುಖ್ಯಮಂತ್ರಿ ಬದಲಾವಣೆಗೆ ಹೈಕಮಾಂಡ್ ಒಪ್ಪಿಯೇ ಇಲ್ಲ. ಐದೂ ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ
ಯತೀಂದ್ರ ಸಿದ್ದರಾಮಯ್ಯ, ಪರಿಷತ್ತಿನ ಕಾಂಗ್ರೆಸ್ ಸದಸ್ಯ

ಆಮೇಲೆ:
ಯತೀಂದ್ರ ಅವರ ಹೇಳಿಕೆ ಬಗ್ಗೆ ಸಿದ್ದರಾಮಯ್ಯ ಅವರು ಉತ್ತರಿಸುತ್ತಾರೆ. ನಾನಲ್ಲ
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಕೊನೆಗೆ:
ಈ ವಿಚಾರದಲ್ಲಿ ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ ಎಂದು ಈ ಹಿಂದೆಯೇ ಹೇಳಿದ್ದೇನೆ. ಪದೇ–ಪದೇ ಅದನ್ನೇ ಏಕೆ ಕೇಳುತ್ತೀರಿ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಿ.ಎಂ ಬದಲಿಸುವ ಗಟ್ಸ್ ಯಾರಿಗಿದೆ: ಜಮೀರ್



‘ಸಿದ್ದರಾಮಯ್ಯ ಅವರನ್ನು ಬದಲಿಸುವ ಗಟ್ಸ್ (ಧೈರ್ಯ) ಯಾರಿಗೆ ಇದೆ? ಅದು ಇರುವುದು ಹೈಕಮಾಂಡ್‌ಗೆ ಮಾತ್ರ. ಹೈಕಮಾಂಡ್ ಹೇಳಿದ ಹಾಗೆ ಕೇಳುತ್ತೇವೆ ಎಂದು ಅವರೇ ಹೇಳಿದ್ದಾರೆ. ಹೀಗಿರುವಾಗ ಕುರ್ಚಿ ಬದಲಾವಣೆ ಚರ್ಚೆ ಏಕೆ’ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಪ್ರಶ್ನಿಸಿದರು.

‘ಯತೀಂದ್ರ ಅವರು ಹೇಳಿದ ತಕ್ಷಣ ಏನೂ ಬದಲಾಗುವುದಿಲ್ಲ. ಯಾರು ಹೇಳಿದರೂ ಬದಲಾಗುವುದಿಲ್ಲ. ಹೈಕಮಾಂಡ್ ಹಾಕುವ ಗೆರೆಯನ್ನು ನಾವು ದಾಟುವುದಿಲ್ಲ’ ಎಂದರು.

ವಾಲ್ಮೀಕಿ ನಾಯಕರ ಸಭೆ

ಸಚಿವ ಸತೀಶ ಜಾರಕಿಹೊಳಿ ಅವರ ನೇತೃತ್ವದಲ್ಲಿ ವಾಲ್ಮೀಕಿ ಸಮುದಾಯದ ನಾಯಕರು ಬುಧವಾರ ರಾತ್ರಿ ನಗರದ ಹೋಟೆಲ್ ಒಂದರಲ್ಲಿ ಸಭೆ ನಡೆಸಿದ್ದಾರೆ.

6

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸಿ.ಎಂ ಯಾನಕ್ಕೆ ₹47 ಕೋಟಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎರಡೂವರೆ ವರ್ಷಗಳಲ್ಲಿ ಬಳಸಿದ ಹೆಲಿಕಾಪ್ಟರ್ ಹಾಗೂ ವಿಶೇಷ ವಿಮಾನಗಳ ಹಾರಾಟಕ್ಕೆ ₹47.15 ಕೋಟಿ ವೆಚ್ಚ ಮಾಡಲಾಗಿದೆ.

ಒಟ್ಟು 180 ಬಾರಿ ಸಿದ್ದರಾಮಯ್ಯ ಪ್ರಯಾಣ ಮಾಡಿದ್ದಾರೆ. ಅದರಲ್ಲಿ 25 ಬಾರಿ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಬೆಳೆಸಿದ್ದಾರೆ. ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಒದಗಿಸಿರುವ ಮಾಹಿತಿಯಲ್ಲಿ ಈ ವಿವರಗಳಿವೆ.

6

ವರ್ಷವಾರು ವೆಚ್ಚ (ಕೋಟಿಗಳಲ್ಲಿ)

‘ಹೆಚ್ಚುವರಿ ಪರಿಹಾರವಾಗಿ ₹10 ಸಾವಿರದ ವೋಚರ್’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ‘ಡಿ. 3, 4 ಮತ್ತು 5ರಂದು ನಮ್ಮ ವಿಮಾನಗಳ ಹಾರಾಟ ರದ್ದಾದ ಮತ್ತು ವಿಳಂಬವಾದ ಕಾರಣ ಬಹಳ ಹೊತ್ತಿನವರೆಗೆ ವಿಮಾನ ನಿಲ್ದಾಣಗಳಲ್ಲಿಯೇ ಸಿಲುಕಿದ್ದ ಪ್ರತಿಯೊಬ್ಬ ಪ್ರಯಾಣಿಕನಿಗೂ ₹10 ಸಾವಿರ ಮೊತ್ತದ ವೋಚರ್ ನೀಡಲಾಗುವುದು’ ಎಂದು ಇಂಡಿಗೊ ಸಂಸ್ಥೆಯು ಗುರುವಾರ ಘೋಷಿಸಿದೆ.

‘ನಮ್ಮ ಕಾರಣದಿಂದ ತೀವ್ರ ತೊಂದರೆಗೆ ಒಳಗಾದ ಪ್ರಯಾಣಿಕರಿಗಾಗಿಯೇ ಈ ವೋಚರ್ ನೀಡಲಾಗುತ್ತಿದೆ. ಈ ವೋಚರ್ ಅನ್ನು ಮುಂದಿನ 12 ತಿಂಗಳ ಒಳಗಾಗಿ ಬಳಕೆ ಮಾಡಿಕೊಳ್ಳಬಹುದು. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ನಿಯಮಗಳ ಅನ್ವಯ ನೀಡುತ್ತಿರುವ ಪರಿಹಾರದ ಜೊತೆಗೆ ನೀಡುತ್ತಿರುವ ಹೆಚ್ಚುವರಿ ಪರಿಹಾರ ಇದಾಗಿದೆ’ ಎಂದೂ ಸಂಸ್ಥೆ ಹೇಳಿದೆ.

10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

PUBLIC NOTICE

Publics are hereby informed that my client **M/s DS-Max Properties Pvt. Ltd.**, having its office at No. 1854, 17th Main, 30th 'B' Cross, HBR Layout, 1st Stage, 5th Block, Bangalore- 43 and intend to enter into Agreement of Sale and GPA or Absolute Sale Deed with Owner **Smt Anjalamma** D/o Late Venkataramanappa is the absolute owner of Agricultural land property bearing Sy. No. **57/1**, which measuring **07 guntas**, situated at **Bagur Village**, Anugondanahalli Hobli, Hoskote Taluk, Bangalore Rural District and whereas **Sri B.V.Nagappa** s/o Late Venkatagiriyappa is the absolute owner of Agricultural land property bearing Sy.No. **57/1**, which measuring **08 guntas**, situated at **Bagur Village**, Anugondanahalli Hobli, Hoskote Taluk, Bangalore Rural District, which total measuring **07 guntas + 08 guntas = 15 guntas** and commonly bounded on **East by:** Remaining portion of same Sy.No.57/1, **West by:** Land in Sy. No. 106, **North by:** Road, **South by:** Remaining land in Sy. No. 57/1 and referred to as schedule property of **Item No. I**.

WHEREAS Sri B.V.Nagappa s/o Sri Venkatagiriyappa, Sri Bajjappa and Sri Thimmakka w/o Late Krishnappa are the absolute owner/s of Agricultural land property bearing Sy. No. **106/2**, which measuring **05.08 guntas** and exclusive of **01 guntas 'B'** kharab land, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 57, **West by:** Land in Sy. No. 105, **North by:** Land in Sy. No. 106/1, **South by:** Land in Sy. No. 106/3 and referred to as schedule property of **Item No. II**.

WHEREAS Sri B.V.Nagappa s/o Sri Venkatagiriyappa is the absolute owner of Agricultural land property bearing Sy. No. **106/3**, which measuring **05 guntas**, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 57, **West by:** Land in Sy. No. 105 and Private Property, **North by:** Land in Sy. No. 106/2, **South by:** Land in Sy. No. 106/4 and referred to as schedule property of **Item No. III**.

WHEREAS Sri C.Guruswamy s/o Late Chikkavenkatappa is the absolute owner of Agricultural land property bearing Sy. No. **101/1**, which measuring **17 guntas**, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 99, **West by:** Raja Kaluve, **North by:** Land in Sy. No. 105, **South by:** Land in Sy. No. 101/2 and referred to as schedule property of **Item No. IV**.

WHEREAS Sri T.Krishnappa s/o Sri Thammaiah is the absolute owner of Agricultural land property bearing Sy. No. **101/2**, which measuring **16 guntas**, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 99, **West by:** Raja Kaluve, **North by:** Land in Sy. No. 105/1, **South by:** Land in Sy. No. 101/3 and referred to as schedule property of **Item No. V**.

WHEREAS Sri T.Krishnappa s/o Sri Thammaiah is the absolute owner of Agricultural land property bearing Sy. No. **101/3**, which measuring **16 guntas**, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 99, **West by:** Raja Kaluve, **North by:** Land in Sy. No. 105/2, **South by:** Land in Sy. No. 101/4 and referred to as schedule property of **Item No. VI**.

WHEREAS Sri T.Krishnappa s/o Sri Thammaiah is the absolute owner of Agricultural land property bearing Sy. No. **101/4**, which measuring **17 guntas**, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 96, **West by:** Raja Kaluve, **North by:** Land in Sy. No. 105/3, **South by:** Land in Sy. No. 100 and referred to as schedule property of **Item No. VII**.

WHEREAS Sri Muniyappa s/o Late Ramaiah is the absolute owner of Agricultural land property bearing Sy. No. **105/1**, which measuring **15 guntas** and exclusive of **0.12 guntas 'B'** kharab land, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 105/2, **West by:** Raja Kaluve, **North by:** Land in Sy. No. 107, **South by:** Land in Sy. No. 101 & 99 and referred to as schedule property of **Item No. VIII**.

WHEREAS Sri M.Nagaraja s/o Sri D.Munireddy is the absolute owner of Agricultural land property bearing Sy. No. **105/2**, which measuring **1 acre 27 guntas** and exclusive of **0.04 guntas 'B'** kharab land, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Land in Sy. No. 106, **West by:** Land in Sy. No. 105/1, **North by:** Land in Sy. No. 107, **South by:** Land in Sy. No. 101 & 99 and referred to as schedule property of **Item No. IX**.

WHEREAS Sri Karagapa s/o Late Bolappa @ Kalappa, Smt Munilakshmamma d/o Late Bolappa @ Kalappa is the absolute owner of Agricultural land property bearing Sy. No. **107**, which measuring **15 guntas**, out of **1 acre 23 guntas** and exclusive of **14 guntas 'B'** kharab land, situated at **Bagur Village**, Anugondanahalli Hobli, Hoskote Taluk, Bangalore Rural District and bounded on **East by:** Property of Sri. Kallupillappa, **West by:** Property of Sri. Chikka Rangappa, **North by:** Road, **South by:** Land in Sy. No. 105/1,2 and referred to as schedule property of **Item No. X**.

which total measuring of **Item.No.I to X = 4 acre 28.08 guntas** and exclusive of **16 Guntas** of **'B'** Kharab land referred to as **"Schedule Property of Item.No.I to X"**.

Any person or Any Authority or Any promoters having any asserting right, title, interest and claims to oppose for Agreement of Sale and GPA or Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **15** days from the date of this notice, if any objections fails to comply, my client shall take further steps and deemed for entering into Agreement of Sale or GPA or Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

'ಪ್ರಜಾವಾಣಿ' ವಲಯ ಮಟ್ಟದ ಕ್ವಿಜ್ 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಲಯ ಮಟ್ಟದ 'ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್' ಡಿಸೆಂಬರ್ 15ರಂದು ಜಯನಗರದಲ್ಲಿರುವ ರಾಷ್ಟ್ರೀಯ ವಿದ್ಯಾಲಯದ ಆರ್.ವಿ. ಆಡಿಟೋರಿಯಂನಲ್ಲಿ ನಡೆಯಲಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಬಹುದು.

ಬೆಂಗಳೂರು ನಗರ, ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು.

ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು. ಒಂದು ಶಾಲೆಯಿಂದ ಎಷ್ಟು ತಂಡಗಳು ಬೇಕಾದರೂ ಇರಬಹುದು. ಕ್ವಿಜ್‌ಗೆ ಎಲ್ಲರಿಗೂ ಉಚಿತ ಪ್ರವೇಶವಿದೆ. ಸ್ಪರ್ಧೆ ನಡೆಯುವ ಸ್ಥಳದಲ್ಲೂ ಹೆಸರು ನೋಂದಾಯಿಸಲು ಅವಕಾಶವಿದೆ. ಈ ವಲಯದಲ್ಲಿ ವಿಜೇತರಾದವರು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗುತ್ತಾರೆ. ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಯುತ್ತದೆ.

ಹೆಚ್ಚಿನ ಮಾಹಿತಿಗೆ ಬೆಳಿಗ್ಗೆ 10ರಿಂದ ಸಂಜೆ 5ರೊಳಗೆ ಸಂಪರ್ಕಿಸಬೇಕಾದ ದೂರವಾಣಿ: 7338018541.

ಕ್ಯೂ ಆರ್ ಕೋಡ್

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

PUBLIC NOTICE

The general public are hereby informed that our Client is desirous to purchase properties situated at Narasayyanagrahra Village, Madure Hobli, Doddaballapura Taluk, Bengaluru Rural District in all measuring 7 Acres 10 guntas, (more fully described in the Schedule hereunder and referred to as **'Schedule Property'**), from its various Owners.

Any person/s having any right, title, interest or claim in the Schedule Property or any part thereof in any manner or having any claim on or against the Schedule Property or the documents thereof or against the Owners or objecting to such sale should lodge their objections and/or claims in writing along with documentary evidence for asserting his/her/their right/s with regard to the Schedule Property or any part thereof, with the undersigned **within 21 days** from the date of publication of this notice, after which period our Client shall proceed on the basis that there are no claim/s of whatsoever nature with regard to the Schedule Property.

SCHEDULE PROPERTY

Sl. No.	New Sy.No.	Old Sy.No.	Extent		Owner's name	Boundaries			
			Acres	Guntas		East	West	North	South
1	96	19 (previously 19/P3)	2	-	M. Praveen Kumar	Remaining Land in Sy.No. 19	Remaining Land in Sy. No. 19	Road	Road
2	95	18/P3	2	-	Savithramma	Remaining Land in Sy.No. 18	Remaining Land in Sy. No. 18	Remaining Land in Sy. No. 18	Road
3	-	19/P1	2	-	Soubhagya	Land belongs to Krishnamurthy	Land belongs to Savithramma	Remaining land in Sy.No.18	Road
4	94	18 (previously 18/P2)	1	10	Krishnamurthy	40 Feet Road and Remaining land in Sy.No.18	Remaining land in Sy.No.18	Land belongs to Gangadarappa	Road
		Total :	7 Acres10 Guntas						

All the above mentioned properties are situated at Narasayyanagrahra Village, Madure Hobli, Doddaballapura Taluk, Bengaluru Rural District

Sreevatsa Associates, Advocates
Tel: (080)-25252898, 97417 36679 E Mail:udita_adv@outlook.com

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ॥, ರಾಮನಗರ ಜಿಲ್ಲೆ. ದೂ : 080–29762005, 29762006. ಇ–ಮೇಲ್:kkpaplan@gmail.com

ಸಂಖ್ಯೆ: ಕಯೋಪ್ರಾ/ಭೂಉಬ/20/2025–26/3013 ದಿನಾಂಕ: 06.12.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14–ಎ ಪ್ರಕಾರ, ಈ ಕೆಳಕಂಡ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಎಂ.ನಾರಾಯಣರಾವ್ ಮತ್ತು ಇತರರು	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಸೋಮನಹಳ್ಳಿ	141/2	0–13	ವ್ಯವಸಾಯ	ವಸತಿ
					141/4	0–20		
					141/5	1–22		
					141/6	0–11		
					142/2	1–01.08		
					142/3	1–01.08		
					ಒಟ್ಟು	4–29		

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ಬಡಾವಣೆ/ಅಪಾರ್ಟ್‌ಮೆಂಟ್/ಇತರೆ ವಾಸದ ಯೋಜನೆಗಳಿಗೆ ಅಭಿವೃದ್ಧಿಪಡಿಸಿರುವುದರಿಂದ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನ/ಅಪಾರ್ಟ್‌ಮೆಂಟ್ ದೊರಕುತ್ತದೆ. ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಕಾಮಗಾರಿ ಪೂರ್ಣಗೊಂಡ ನಂತರ ವಿವಿಧ ರೀತಿಯ ಉದ್ಯೋಗಗಳು ದೊರಕುತ್ತದೆ. ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿ "**ವ್ಯವಸಾಯ**" ವಲಯದಿಂದ "**ವಸತಿ**" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

DIPR/BSD/488/SA/2025-26

MEGA DISCOUNT SALE Last 3 Days
FURNITURE & LIFESTYLE EXPO 2025
5th to 14th Dec 2025
10:30 AM TO 9:30 PM
HMT GROUND
Near Jalahalli Police Station
Opp Kadamba Gardenia Restaurant
Bengaluru -560013

- Focus On -
Carving Furniture | Teak Wood | Shesham Wood | Garden Furniture | Antique Furniture
Leather & Fabric Sofa | Dining Tables | Mattresses & Cushions | Home Decor
Handmade Paintings | Wooden Swings | Water Fountains | Massage Chairs | Lampshades
Onyx Products | Onyx Fountain | Ceramic Pots | Kashmiri Shawls & Dresses | Curtains | Carpets
Khadi Kurties | Sliks Saree | Designer Kurties | Bandhani Bedsheets | Designer Jewellry
Mats | Bags | Wall Clock | Handmade Jewellry | Night Wear | Toys | Pots & Much More..
ALL UPI, DIGITAL PAYMENTS, CREDIT & DEBIT CARDS ACCEPTED
88921 38769 - 97396 69272 - 96867 55669 - 63627 46114
FREE ENTRY - FREE PARKING

ಸಿಮೆಂಟ್ ಕಾರ್ಖಾನೆಗೆ ಕಸ

ಆಂಧ್ರದ ಕಡಪದಲ್ಲಿರುವ ಕಾರ್ಖಾನೆಗೆ ನಿತ್ಯ 300ರಿಂದ 350 ಟನ್ ತ್ಯಾಜ್ಯ ರವಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಕಡಪದಲ್ಲಿರುವ ಸಿಮೆಂಟ್ ಕಾರ್ಖಾನೆಗೆ ನಗರದಿಂದ ಪ್ರತಿನಿತ್ಯ 300ರಿಂದ 350 ಟನ್ 'ಲೋ ವ್ಯಾಲ್ಯೂ ಪ್ಲಾಸ್ಟಿಕ್' (ಎಲ್‌ವಿಪಿ) ಅನ್ನು ಸರಬರಾಜು ಮಾಡಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ನಿರ್ಧರಿಸಿದೆ.

ಕಡಪದಲ್ಲಿರುವ ದಾಲ್ಮಿಯಾ ಸಿಮೆಂಟ್ಸ್ ಲಿಮಿಟೆಡ್ ಸಿಮೆಂಟ್ ಕಾರ್ಖಾನೆಯ ಘಟಕದ ಕಾರ್ಯ ನಿರ್ವಹಣೆಗೆ ಕಡಿಮೆ ಮೌಲ್ಯದ ಪ್ಲಾಸ್ಟಿಕ್ ಸರಬರಾಜು ಮಾಡಲು ಕೋರಿದೆ. ಡಿ.15ರಿಂದ ಪ್ರತಿನಿತ್ಯವೂ ಪ್ಲಾಸ್ಟಿಕ್ ತ್ಯಾಜ್ಯ ಒದಗಿಸಬೇಕಾಗಿದೆ. ಇನ್ನೂ ಹಲವು ಸಿಮೆಂಟ್ ಕಾರ್ಖಾನೆಗಳೂ ಆಸಕ್ತಿ ತೋರಿವೆ. ಹೀಗಾಗಿ, ನಗರದಲ್ಲಿ ತ್ಯಾಜ್ಯ ವಿಂಗಡಣೆಯ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವಿದೆ. ಈ ತ್ಯಾಜ್ಯವನ್ನು ಅವರು ಇಂಧನವಾಗಿ ಕಾರ್ಖಾನೆಯಲ್ಲಿ ಬಳಸಲಿದ್ದಾರೆ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ತಿಳಿಸಿದರು.

ಬಿಡದಿಯಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಘಟಕಕ್ಕೆ ಆರಂಭದಲ್ಲಿ 18 ಟನ್ ಅನ್ನು ನಾಲ್ಕು ಕಾಂಪ್ಯಾಕ್ಟರ್‌ಗಳಲ್ಲಿ ಕಳುಹಿಸಲಾಗುತ್ತಿತ್ತು. ಈಗ 60–70 ಕಾಂಪ್ಯಾಕ್ಟರ್‌ಗಳಲ್ಲಿ 300ರಿಂದ 350 ಟನ್ ಎಲ್‌ವಿಪಿ ಅನ್ನು ನಿತ್ಯ ವಿಲೇವಾರಿ ಮಾಡಲಾಗುತ್ತಿದೆ. ಅಕ್ಟೋಬರ್‌ನಲ್ಲಿ 11.99 ಲಕ್ಷ ಟನ್, ನವೆಂಬರ್‌ನಲ್ಲಿ 67.26 ಲಕ್ಷ ಟನ್ ವಿಲೇವಾರಿ ಮಾಡಲಾಗಿದೆ. ಇದರಿಂದ ಭೂಭರ್ತಿ ಪ್ರದೇಶಕ್ಕೆ ಕಳುಹಿಸಲಾಗುತ್ತಿದ್ದ 302 ಕಾಂಪ್ಯಾಕ್ಟರ್‌ಗಳ ತ್ಯಾಜ್ಯ ಕಡಿಮೆಯಾಗಿದೆ ಎಂದು ಮಾಹಿತಿ ನೀಡಿದರು.

'ನಾಗರಿಕರು ವೈಜ್ಞಾನಿಕವಾಗಿ ತ್ಯಾಜ್ಯ ವಿಂಗಡಣೆ ಮಾಡಿ ವಿಲೇವಾರಿ ಮಾಡಿದಲ್ಲಿ, ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸುಂದರ ಮತ್ತು ಸ್ವಚ್ಛವಾಗಿ ಕಾಪಾಡಿಕೊಂಡು ಪ್ರಕೃತಿಯ ಮೇಲೆ ಉಂಟಾಗುತ್ತಿರುವ ಹಾನಿಯನ್ನು ತಪ್ಪಿಸಬಹುದಾಗಿದೆ. ಅನಧಿಕೃತ ಪ್ರದೇಶಗಳಲ್ಲಿ ತ್ಯಾಜ್ಯವನ್ನು ಸುರಿಯದೆ, ಹಸಿ, ಒಣ ತ್ಯಾಜ್ಯವನ್ನು ವಿಂಗಡಿಸಿ ಕಸದ ವಾಹನಗಳಿಗೆ ನೀಡಬೇಕು' ಎಂದು ಮನವಿ ಮಾಡಿದರು.

ಮುಖ್ಯಾಂಶಗಳು
- ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
- ಇಂಧನವಾಗಿ ತ್ಯಾಜ್ಯದ ಬಳಕೆ



ಟನ್‌ಗೆ ₹1 ಸಾವಿರ ಲಾಭ: ಕರೀಗೌಡ



ಕರೀಗೌಡ

'ಸಿಮೆಂಟ್ ಕಾರ್ಖಾನೆಗೆ ಎಲ್‌ವಿಪಿ ನೀಡುವುದರಿಂದ ಅವರು ನಮಗೆ, 'ಎಕ್ಸ್‌ಟೆಂಡೆಡ್ ಪ್ರೊಡ್ಯೂಸರ್ ರೆಸ್ಪಾನ್ಸಿಬಿಲಿಟಿ' (ಇಪಿಆರ್) ಅನ್ನು ಬಿಎಸ್‌ಡಬ್ಲ್ಯುಎಂಎಲ್‌ಗೆ ನೀಡಲಿದ್ದಾರೆ. ಇದನ್ನು ತಂಪುಪಾನೀಯ ಸೇರಿದಂತೆ ಪ್ಲಾಸ್ಟಿಕ್ ಬಳಸುವ ಕಂಪನಿಗಳಿಗೆ ನಾವು ಮಾರಾಟ ಮಾಡಬಹುದು. ಪ್ರತಿ ಟನ್‌ಗೆ ₹1 ಸಾವಿರ ಲಾಭ ಬರುವ ನಿರೀಕ್ಷೆ ಇದೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ಹೇಳಿದರು.

'ಪ್ಲಾಸ್ಟಿಕ್ ಬಳಸುವ ಕಂಪನಿಗಳಿಗೆ ಅವುಗಳನ್ನು ಸಂಸ್ಕರಿಸುವ ಜವಾಬ್ದಾರಿಯೂ ಇರುತ್ತದೆ. ಅದನ್ನು ಅವರು ನೇರವಾಗಿ ಮಾಡದಿದ್ದರೂ, ಇಪಿಆರ್ ಪಡೆದವರಿಂದ ಅದನ್ನು ಖರೀದಿಸಿ ಜವಾಬ್ದಾರಿ ನಿರ್ವಹಿಸಬಹುದು. ಕಟ್ಟಡಗಳ ಟಿಡಿಆರ್‌ನಂತೆ ನಾವು ಇಪಿಆರ್ ಅನ್ನು ಬಳಸಬಹುದು' ಎಂದರು.

'ಕಡಪಗೆ ನಾವು ತ್ಯಾಜ್ಯವನ್ನು ಸಾಗಿಸಲು ಪ್ರತಿ ಟನ್‌ಗೆ ₹1 ಸಾವಿರ ವೆಚ್ಚ ಮಾಡಬೇಕಾಗುತ್ತದೆ. ಬೃಹತ್ ಕಾಂಪ್ಯಾಕ್ಟರ್‌ಗಳನ್ನು ಬಳಸಲು ಟೆಂಡರ್ ಕರೆಯಲಾಗಿದೆ. ಲೋಡಿಂಗ್ ಮತ್ತು ಅನ್‌ಲೋಡಿಂಗ್ ಸಿಮೆಂಟ್ ಕಂಪನಿಯವರದ್ದೇ ಆಗಿದೆ. ನಮ್ಮ ನಗರದಿಂದ ಪ್ರತಿನಿತ್ಯ 300ರಿಂದ 350 ಟನ್ ತ್ಯಾಜ್ಯ ಹೊರಗೆ ಹೋಗಿ, ಸಂಸ್ಕರಣೆಯಾಗುತ್ತದೆ' ಎಂದು ಮಾಹಿತಿ ನೀಡಿದರು.

ವಾರ್ಡ್‌ನಲ್ಲಿ ಒಣ ತ್ಯಾಜ್ಯ ಸಂಗ್ರಹ ಕೇಂದ್ರ

ಒಣ ತ್ಯಾಜ್ಯವನ್ನು ಆಯಾ ಪ್ರದೇಶಗಳಲ್ಲಿಯೇ ಸಂಗ್ರಹಿಸುವ ಕೇಂದ್ರಗಳನ್ನು ಪ್ರತಿ ವಾರ್ಡ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಖಾಸಗಿಯವರಿಂದ ಟೆಂಡರ್ ಆಹ್ವಾನಿಸಲಾಗಿದೆ.

ತ್ಯಾಜ್ಯ ಆಯುವವರು/ ತ್ಯಾಜ್ಯ ಆಯುವವರ ಸಂಘಟನೆಗಳು/ ಸ್ವಸಹಾಯ ಗುಂಪು, ಎನ್‌ಜಿಒ, ಸಿಆ್ಯಂಡ್‌ಟಿ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಅವರು ಐದು ವರ್ಷದ ಅವಧಿಗೆ ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ನಡೆಸಿ, ನಿರ್ವಹಣೆ ಮಾಡಬೇಕು ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.

'ನಗರ ಪಾಲಿಕೆಗಳ ಜಾಗದಲ್ಲಿ ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ಅವರು ಸ್ಥಾಪಿಸಿಕೊಳ್ಳಬಹುದು. ₹25 ಸಾವಿರದಿಂದ ₹1 ಲಕ್ಷದವರೆಗೆ ಬಾಡಿಗೆ ನಿಗದಿಪಡಿಸಲಾಗಿದೆ. ಈ ಕೇಂದ್ರಗಳಲ್ಲಿ ನಾಗರಿಕರು ಒಣ ತ್ಯಾಜ್ಯ ತಂದು ಕೊಟ್ಟರೆ ಅವರು ಖರೀದಿಸುತ್ತಾರೆ. ಇಲ್ಲಿ ವಿಂಗಡನೆ ಮಾಡಿ ಮರುಬಳಕೆ ಮಾಡುವುದನ್ನು ಕೇಂದ್ರದವರು ಮಾರಾಟ ಮಾಡಿಕೊಳ್ಳುತ್ತಾರೆ. ಉಳಿದ್ದನ್ನು ನಾವು, ವಿದ್ಯುತ್ ಅಥವಾ ಸಿಮೆಂಟ್ ಕಾರ್ಖಾನೆ ಘಟಕಗಳಿಗೆ ತಲುಪಿಸುತ್ತೇವೆ' ಎಂದರು.

ಬಿಡಿಎ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ನಾಗರಬಾವಿ ಬಡಾವಣೆಯಲ್ಲಿ ₹140 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಯಶವಂತಪುರ ಹೋಬಳಿಯ ನಾಗರಬಾವಿ ಗ್ರಾಮದ ಸರ್ವೆ ನಂ. 17ರಲ್ಲಿ 2 ಎಕರೆ 30 ಗುಂಟೆ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಿ, ನೂರು ಕೋಟಿಗೂ ಅಧಿಕ ಮೌಲ್ಯದ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು. ಕೆ.ಆರ್. ಪುರ ಹೋಬಳಿಯ ಕುಂದಲಹಳ್ಳಿ ಗ್ರಾಮದ ಸರ್ವೆ ನಂ. 118ರ 8,070 ಚದರ ಅಡಿಯ ಪ್ರದೇಶದಲ್ಲಿನ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ, ಸುಮಾರು ₹25 ಕೋಟಿ ಮೌಲ್ಯದ ನಾಗರಿಕ ಸೌಲಭ್ಯ ನಿವೇಶನ ವಶಪಡಿಸಿಕೊಂಡಿದೆ.

ರಾಮಚಂದ್ರನ್ ಅವರು ಡೆಕ್ಕನ್ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಮಾಹಿತಿ ನೀಡಿದರು

ಜಿಬಿಎಗೆ ಡೆಕ್ಕನ್ ಶಾಲೆ ವಿದ್ಯಾರ್ಥಿಗಳ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಕಚೇರಿಗೆ ಡೆಕ್ಕನ್ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿಗಳು ಗುರುವಾರ ಭೇಟಿ ನೀಡಿ, ನಗರದ ಆಡಳಿತ ಮತ್ತು ಪರಿಸರ ನಿರ್ವಹಣೆ ಬಗ್ಗೆ ಮಾಹಿತಿ ಪಡೆದರು.

ರೀಪ್ ಬೆನಿಫಿಟ್ ಟೀಮ್ ಸಹಯೋಗದಲ್ಲಿ ಶೈಕ್ಷಣಿಕ ಪ್ರವಾಸದ ಅಂಗವಾಗಿ, ಶಿಕ್ಷಕರಾದ ಚೈತ್ರಾ ಕಶ್ಯಪ್, ಎನ್. ಆಶಾ ಅವರೊಂದಿಗೆ 40 ವಿದ್ಯಾರ್ಥಿಗಳು ಜಿಬಿಎಗೆ ಭೇಟಿ ನೀಡಿದ್ದರು.

ಜಿಬಿಎ ನಿಯಂತ್ರಣ ಕೊಠಡಿ, ಸಹಾಯವಾಣಿ, ವಾರ್ ರೂಮ್‌ಗಳಿಗೆ ಭೇಟಿ ನೀಡಿದ್ದ ವಿದ್ಯಾರ್ಥಿಗಳು, ಸಾರ್ವಜನಿಕರಿಂದ ಬರುವ ದೂರುಗಳನ್ನು ಸ್ವೀಕರಿಸಿ, ಅದನ್ನು ಪರಿಹರಿಸುವ ಪ್ರಕ್ರಿಯೆಯನ್ನು ಅರಿತುಕೊಂಡರು. ಅರಣ್ಯ, ಪರಿಸರ, ವಿಪತ್ತು ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ರಾಮಚಂದ್ರನ್ ಅವರಿಂದ ಪರಿಸರ ವಿಭಾಗದ ಸಿಬ್ಬಂದಿಯ ಪ್ರಮುಖ ಕಾರ್ಯ, ನಗರದಲ್ಲಿ ಅವರು ಕೈಗೊಳ್ಳುವ ಉಪಕ್ರಮಗಳ ಮಾಹಿತಿ ಪಡೆದರು.

ನಗರದಲ್ಲಿರುವ ಹಲವು ಸಮಸ್ಯೆಗಳು, ಪರಿಸರ ರಕ್ಷಣೆಯಲ್ಲಿ ನಾಗರಿಕರು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ವಿದ್ಯಾರ್ಥಿಗಳು ಚರ್ಚೆ ನಡೆಸಿದರು. ನಾಗರಿಕರ ಜವಾಬ್ದಾರಿ ಮತ್ತು ಸುಸ್ಥಿರ ಜೀವನದ ಪ್ರಾಮುಖ್ಯವನ್ನು ಅರಿತುಕೊಳ್ಳುವಲ್ಲಿ ಈ ಪ್ರವಾಸ ತುಂಬಾ ನೆರವಾಯಿತು ಎಂದು ಶಿಕ್ಷಕರು ತಿಳಿಸಿದರು.

ನಗರಸಭಾ ಕಾರ್ಯಾಲಯ ದೊಡ್ಡಬಳ್ಳಾಪುರ

ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ–561203
ಇ–ಮೇಲ್: itstaff_ulb_doddaballapur@yahoo.com
ವೆಬ್‌ಸೈಟ್: www.doddaballapurcity.mrc.gov.in

ನಸದೊ/ವಾ.ಮ/ಸಿಆರ್/01/2025–26 ದಿನಾಂಕ: 11.12.2025

ವಾಣಿಜ್ಯ ಮಳಿಗೆಗಳ ಇ–ಹರಾಜು ತಿದ್ದುಪಡಿ ಪ್ರಕಟಣೆ"

ದೊಡ್ಡಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆ ವಾಣಿಜ್ಯ ಮಳಿಗೆಗಳ ಹರಾಜಿಗೆ ಸಂಬಂಧಿಸಿದಂತೆ ಈ ಕಛೇರಿಯ ಸಮ ಸಂಖ್ಯೆ ಪ್ರಕಟಣೆ ರೀತ್ಯಾ **ದಿನಾಂಕ: 26.12.2025** ರಂದು ನಡೆಯುವ ಇ–ಹರಾಜಿನಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಅವರ ಹೆಸರಿನಲ್ಲಿ ನೊಂದಾವಣೆಯಾಗಿರುವ **DSC (Digital Key)** ಮುಖಾಂತರ ಹರಾಜಿನಲ್ಲಿ ಭಾಗವಹಿಸುವುದು. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ

ಸಹಿ/–	ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ	ಉಪಾಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ	ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ	ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ

ವಾ.ಸಾ.ಸಂ.ಇ/ವಾಪ್ರ/4378/ಎಸ್‌ಎಸ್‌ಸಿ/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ–(ದಕ್ಷಿಣ)/ಕಾನಿಇಂ(ಕ)/ಸಕಾನಿಇಂ–1/ಎಫ್–281(87)/25–26/4133–34
ದಿನಾಂಕ:10.12.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ ದಕ್ಷಿಣ/ಇಇ(ಓ)/ಎಇಇ–1/25–26/ಇ.ಪಿ.ಆರ್–16/ಕರೆ–2, ದಿನಾಂಕ:31.10.2025 ಅನ್ವಯ **ದಕ್ಷಿಣ ಕಾರ್ಯಾಚರಣೆ ವೃತ್ತದ ಟಿ.ಎಲ್.ಎಂ ಉಪವಿಭಾಗ ಹೂಡಿ ವ್ಯಾಪ್ತಿಯ ಅಡಿಯಲ್ಲಿ ಬರುವ ಚನ್ನಸಂದ್ರ (CSDR) –ಯಲಹಂಕ (YNK) ರೈಲು ನಿಲ್ದಾಣದ ನಡುವಿನ ರೈಲ್ವೆ ಕಿ.ಮೀ. ಸಂಖ್ಯೆ 03/800–900 ಡಬಲ್ ಸರ್ಕ್ಯೂಟ್‌ನಲ್ಲಿ ಅಸ್ತಿತ್ವದಲ್ಲಿರುವ 66ಕೆವಿ ಓವರ್‌ಹೆಡ್ ಇಹೆಚ್‌ಟಿ ಲೈನ್ ಕ್ರಾಸಿಂಗ್‌ಗಳ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ ನಿರ್ವಹಿಸುವುದಕ್ಕೆ (ಸಂಪೂರ್ಣ ಟರ್ನ್ ಕೀ, ಶೇಕಡವಾರು ಆಧಾರದ ಮೇಲೆ)** ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ ಸ್ವೀಕರಿಸಲಾಗುವುದು. ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ನ ಹೈಪರ್‌ಲಿಂಕ್ **"E Procurement KPTCL"** ನಲ್ಲಿ ಅಥವಾ **https://kppp.karnataka.gov.in** ನಲ್ಲಿ **ದಿನಾಂಕ:12.12.2025**ರಂದು **ಅಥವಾ ತದನಂತರ** ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ದಕ್ಷಿಣ ವೃತ್ತ, ನೆಲಮಹಡಿ, ಕವಿಪ್ರನಿನಿ, ಕಛೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು–09

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಮುಖ್ಯ ವೈದ್ಯಾಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂ: ಸಾಆನೆ/ಡಯಟ್ ಟೆಂಡರ್/21/2025–26 ದಿನಾಂಕ : 10.12.2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿನ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ, ಹಾಲು, ಬ್ರೆಡ್, ಬಾಳೆಹಣ್ಣು, ಕೋಳಿಮೊಟ್ಟೆ ಸರಬರಾಜು ಸಂಬಂಧ ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ನಿಯಮ 1999–2000ರಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್ ಕರೆಯಲಾಗಿದೆ. ಅರ್ಹ ಅಧಿಕೃತ ಸಂಸ್ಥೆದಾರರು ಟೆಂಡರ್ ಫಾರಂಗಳನ್ನು **ದಿನಾಂಕ 12.12.2025 ರಿಂದ ದಿನಾಂಕ 18.12.2025ರ ಸಂಜೆ 05–00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದ್ವಿ–ಲಕೋಟೆ ಪದ್ಧತಿಯಂತೆ ಸಲ್ಲಿಸುವುದು. ಅರ್ಹ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮೂಲಕ **18.12.2025 ರಂದು ಸಂಜೆ 05:00 ಗಂಟೆಯೊಳಗಾಗಿ** ಟೆಂಡರ್ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಲಕೋಟೆ ತೆರೆಯುವ **ದಿನಾಂಕ: 20.12.2025 ಸಂಜೆ 4:00 ಗಂಟೆಗೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in**ರ ಮೂಲಕ ಅಥವಾ ಆಸ್ಪತ್ರೆಯ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–
ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ

DIPR/CP/4394/SA/2025-26

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್‌ಈ.ಸುಧೀಂದ್ರ ಅವರು ಗುರುವಾರ ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರನ್ನು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಭೇಟಿ ಮಾಡಿ, ಜೈವಿಕ ಇಂಧನ ಯೋಜನೆಗಳ ಮಾಹಿತಿ ವಿನಿಮಯ ಮಾಡಿಕೊಂಡರು.ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಎಲ್. ಶಿವಶಂಕರ್, ಯೋಜನಾ ಸಲಹೆಗಾರ ದಯಾನಂದ ಜಿ.ಎನ್, ಅಧ್ಯಕ್ಷರ ಸಲಹೆಗಾರರಾದ ನಿಮ್ಮನ್ ದೀಪ್ ಸಿಂಗ್ ಇದ್ದರು

PUBLIC NOTICE

Public are hereby notified that my client intends to purchase the property more particularly described in the **Schedule** hereunder written **("Property")** from **SIEMENS TECHNOLOGY AND SERVICES PRIVATE LIMITED** (erstwhile SIEMENS INFORMATION SYSTEMS LIMITED), a company incorporated under the Companies Act, 1956 and deemed to be existing under the provisions of the Companies Act, 2013 and having its registered office at Birla Aurora, Level 21, Plot no. 1080, Dr. Annie Besant Road, Worli, Worli Colony, Mumbai, Maharashtra, India, 400030 **("Siemens")**. The Property was purchased by Siemens from Karnataka State Electronic Development Corporation Limited (KEONICS) having their registered office at No.59, Block 1, Kumarapark West, Railway Parallel Road, BBMP Ward, Seshadripuram, Bangalore, Bangalore North, Karnataka, India, 560020 by virtue of Sale Deed and that Siemens is in possession and continuous enjoyment of the same ever since.

Persons objecting for the proposed purchase or having any right in the Property may lodge their complaints and/or claims with the undersigned along with supporting documentary evidence within Ten days from the date of this publication and objections and/or claims received thereafter will not be binding on my client and my client will proceed to purchase the Property as if there are no claimants/objections.

:SCHEDULE:
(Description of the Property)

All that piece and parcel of land bearing Plot No.84, presently bearing E-Swattu Khata No.ELCITAPID010 (Old No.PID10) in the records of Electronic City Industrial Township Authority, Bengaluru and formed in Part of Sy.No.62 of Doddathogur Village and Part of Sy.Nos.10 and 12 of Konappana Agrahara Village both Begur Hobli, Bengaluru South Taluk, Bengaluru and site measuring 13,354.56 Sq. Mtrs., together with buildings and erections standing and being thereon admeasuring around 36,475.96 square meters and the site is bounded as follows that is to say:

East : Plot No.105;
West : Plot No.83;
North : Road;
South : Plot No.86/B and 104.

B.S. SHANKARNARAYAN
Advocate,
101, "EDEN PARK", No.20, Vittal Mallya Road, Bangalore-560 001.
Tel: 22217971. Fax: 22242397.
Bangalore Date: 11/12/2025

ವಿಜಯಾಗೆ 'ಕಿ.ರಂ. ನಾಗರಾಜ ಸಂಸ್ಕೃತಿ' ಪ್ರಶಸ್ತಿ

ಬೆಂಗಳೂರು: ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ನೀಡುವ 2025ನೇ ಸಾಲಿನ 'ಪ್ರೊ.ಕಿ.ರಂ. ನಾಗರಾಜ ಸಂಸ್ಕೃತಿ' ಪ್ರಶಸ್ತಿಗೆ ಲೇಖಕಿ ವಿಜಯಾ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಕಿ.ರಂ. ನಾಗರಾಜ ಅವರ ಜನ್ಮ ದಿನವಾದ ಡಿ. 25ರಂದು ಸಂಜೆ 6 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ವೇದಿಕೆಯ ಅಧ್ಯಕ್ಷ ನಲ್ಲೂರು ಪ್ರಸಾದ್ ಆರ್.ಕೆ., ತಿಳಿಸಿದ್ದಾರೆ.

ವಿಜಯಾ

ಕವನ ಸಂಕಲನ ಆಹ್ವಾನ

ಬೆಂಗಳೂರು: ಶೂದ್ರ ಶ್ರೀನಿವಾಸ್ ನೆಲದ ಮಾತು ಪ್ರತಿಷ್ಠಾನವು ಶೂದ್ರ ಪತ್ರಿಕೆಯ 'ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ'ಗೆ ಕವನ ಸಂಕಲನಗಳನ್ನು ಆಹ್ವಾನಿಸಿದೆ.

2024ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕವನ ಸಂಕಲನಗಳನ್ನು ಪರಿಗಣಿಸಲಾಗುತ್ತದೆ. ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ. ಆಸಕ್ತರು ಕವನ ಸಂಕಲನದ ಎರಡು ಪ್ರತಿಗಳನ್ನು ಇದೇ 31ರೊಳಗೆ ಮಾನಸ ವಿದ್ಯಾಕೇಂದ್ರ, ಅಣ್ಣಯ್ಯ ರೆಡ್ಡಿ ಬಡಾವಣೆ, ಜೆ.ಪಿ.ನಗರ 6ನೇ ಹಂತ, ಬೆಂಗಳೂರು 560078 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಅಧ್ಯಕ್ಷ ಎಚ್. ದಂಡಪ್ಪ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9481485109



Kia Seltos
Badass. Forever.

Bigger in stance, longer in profile, and stronger in presence, the all-new Seltos has arrived with a reinvigorated sense of authority. The new design strikes harder, the Trinity Panoramic Display amplifies the cabin, Ventilated Seats bring comfort, and ADAS Level 2 equips you with unmatched confidence. A complete transformation that carries forward the one thing that never changed: its unmistakable badass attitude. Experience the all-new Seltos today!

Commanding Presence Advanced, with attitude

Command-Centric Trinity Panoramic Display

Over-the-Air (OTA) Software Updates with Kia Remote Diagnostics*

Dual Pane Panoramic Sunroof


Iconic R18 - 46.20 cm (18”) Sporty Crystal Cut Alloy Wheels with Neon Brake Calipers

ADAS Level 2 with 21 Autonomous Features*

Front, Rear and Side Parking Sensors

Robust 24 Hi-Safety Package
STANDARD ACROSS ALL VARIANTS

Front Dual Airbags | Front Seat Side Airbags | Side Curtain Airbags | Highline Tyre Pressure Monitor | ABS (Anti-lock Brake System) | BAS (Brake Assist System) | ESC (Electronic Stability Control) | VSM (Vehicle Stability Management) | HAC (Hill-start Assist Control) | ESS (Emergency Stop Signal) | Child Lock | All Wheel Disc Brakes | Rear Parking Sensors x4 | Speed Sensing Auto Door Locks | Impact Sensing Auto Door Unlock | Front & Rear All Seat 3-Point Seat Belts with Reminder | ISOFIX (Rear Anchors) | Front Passenger Airbag On/ Off Switch | Front Passenger Airbag On/ Off Indicator | Rear Occupant Alert | DBC (Downhill Brake Control) | Rollover Sensor | Auto Light Control & Headlamp Escort Function | Rear View Camera with Dynamic Guidelines

Kia Service
Connected · Adaptive · Responsive · Engage

3 Years Unlimited km Warranty | **Extended Warranty*** Up to 7 Years | **My Convenience Plus*** Best-in-class Cost of Ownership | **Scratch Care** Program* | **IoT Based** Smart Services* | **24x7 | 3 Years** Nationwide RSA*

Bookings open | **Call** 1800 108 5000 | **Visit** www.kia.com | Kia Seltos | Look for "Kia India" @

*Terms & Conditions Apply. The product & feature images shown in this ad is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. The specifications and features may vary depending on models/ variants. As a standard feature in defined segment. Segment is defined as Mid SUV whose length lies between 4 220-4 460 mm and width between 1 760-1830 mm. ADAS features are for driver assistance only. Driver is responsible for safe and attentive driving. For details on functioning of ADAS, Safety, Kia Connect 2.0 features kindly refer to the owners manual. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect 2.0 features and other details of any model as mentioned in this ad to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads. We do not endorse vandalism or illegal activities related to road safety. Safety is a top priority, and we urge responsible behavior regarding traffic regulations and road safety.

FOR INFORMATION CONTACT: BENGALURU: JSP KIA, HOSUR ROAD, PH: 9986644472, BELLANDUR, PH: 9513918131, SARJAPUR, PH: 8095553636, **NAARA KIA,** J.P NAGAR, PH: 7406528200, KANAKAPURA ROAD, PH: 9071010099, **PPS KIA,** MYSORE ROAD, PH: 6309990010, **TAAPASI KIA,** KALYAN NAGAR, PH: 8095537777, KORAMANGALA, PH: 9071177333, **VST KIA,** PALACE CROSS, PH: 9606988123, YESHWANTHPUR, PH: 9606988124, **ADVAITH KIA,** LALBAGH ROAD, PH: 9611006006, BANASHANKARI, PH: 6364871022, MAGADI ROAD, PH: 6364871023, BASAVESHWARA NAGAR, PH: 6364871024, **EPITOME KIA,** AVALAHALLI, PH: 7022317666, WHITEFIELD, PH: 9606970216, YELAHANKA, PH: 7406343339, VARTHUR: PH: 9844240044, **BELGAUM: MIRACULUM KIA,** PH: 9090979761, **BAGALKOT: MIRACULUM KIA,** PH: 9090979761, **BELLARY: ATHENA KIA,** PH: 6364922832, **BIJAPUR: KUMAR KIA,** PH: 7022253887, **DAVANGERE: JANSI KIA,** PH: 9538018155, **GULBARGA: KUMAR KIA,** PH: 7022253884, **HASSAN: AADARSH KIA,** PH: 9606034050, **HUBLI: NAGSHANTI KIA,** AMARGOL, PH: 9148432469, GOKUL ROAD, PH: 8088752342, **KOLAR: EPITOME KIA,** PH: 8951903224, **RAICHUR: KUMAR KIA,** PH: 8123854311, **MANGALORE: ADVAITH KIA,** PH: 6364871025, **ARM KIA,** PH: 9606013152, **MANDYA: AADARSH KIA,** PH: 9606034070, **MYSORE: AADARSH KIA,** HUNSUR ROAD, PH: 9606034060, JLB ROAD, PH: 9606996680, **SHIMOGA: JANSI KIA,** PH: 9538416666, **TUMKUR: PPS KIA,** PH: 6303622210, **UDUPI: ARM KIA,** PH: 9606055296, **CHIKAMANGALUR: JANSI KIA,** PH: 9538416666, **CHITRADURGA: JANSI KIA,** PH: 9538416666, **KUSHALNAGAR: ARM KIA,** PH: 9606055314, **PUTTUR: ARM KIA,** PH: 9606048739, **SIRSI: NAGSHANTI KIA,** PH: 8088758724

INNOCEAN-064/25

ತಾಯಿಗೆ ಅವಾಚ್ಯ ಶಬ್ದಗಳಿಂದ ನಿಂದನೆ; ಸಹೋದರರ ನಡುವೆ ಜಗಳ

ಚಾಕುವಿನಿಂದ ಇರಿದು ಅಣ್ಣನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿಗೆ ನಿಂದಿಸಿದ ಎಂಬ ಕಾರಣಕ್ಕೆ ತಮ್ಮನೇ ಚಾಕುವಿನಿಂದ ಇರಿದು ಅಣ್ಣನನ್ನು ಕೊಲೆ ಮಾಡಿರುವ ಘಟನೆ ಬನಶಂಕರಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಯಾರಬ್ ನಗರದ ಶೆಟ್ಟಿ ಗಾರ್ಡನ್‌ನ ನಿವಾಸಿ ಮೊಹಮ್ಮದ್ ಮುಜಾಹಿದ್ (37) ಕೊಲೆಯಾದ ವ್ಯಕ್ತಿ. ಕೃತ್ಯವೆಸಗಿದ ತಮ್ಮ ಮೊಹಮ್ಮದ್ ಮುಸೀಬ್ (34) ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಸೋಮವಾರ ಮುಂಜಾನೆ 6 ಗಂಟೆ ಸುಮಾರಿಗೆ ದುರ್ಘಟನೆ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮೊಹಮ್ಮದ್ ಮುಜಾಯಿದ್

ಮೊಹಮ್ಮದ್ ಮುಸೀಬ್

'ಸಹೋದರರಿಬ್ಬರು ಮದರಸಾದಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಮೊಹಮ್ಮದ್ ಮುಜಾಹಿದ್ ಮದುವೆಯಾಗಿದ್ದು, ಪ್ರತ್ಯೇಕವಾಗಿ ವಾಸವಾಗಿದ್ದಾನೆ. ಈ ಮಧ್ಯೆ, ಮುಜಾಹಿದ್ ನಿತ್ಯ ಒಂದಿಲ್ಲೊಂದು ಕಾರಣಕ್ಕೆ ತಮ್ಮನ ಮನೆಗೆ ಬಂದು ಜಗಳ ಮಾಡುತ್ತಿದ್ದ. ಜತೆಗೆ ತಾಯಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸುತ್ತಿದ್ದ. ಬುಧವಾರ ಸಂಜೆ ತಂದೆ-ತಾಯಿಯನ್ನು ಮುಜಾಹಿದ್ ಮನೆಗೆ ಮುಸೀಬ್ ಕರೆ ತಂದಿದ್ದ. ಈ ವೇಳೆಯೂ ಮುಜಾಹಿದ್ ತಾಯಿಗೆ ನಿಂದಿಸಿದ್ದ. ಬಳಿಕ ಮನೆಯವರು ಸಮಾಧಾನ ಮಾಡಿದ್ದರು. ಮನೆ ಚಿಕ್ಕದಾಗಿದ್ದ ಕಾರಣ ಎಲ್ಲರೂ ಮಲಗಲು ಆಗಲಿಲ್ಲ. ಹಾಗಾಗಿ ಸಹೋದರರಿಬ್ಬರೂ ಮದರಸಾದಲ್ಲಿ ರಾತ್ರಿ ಮಲಗಲು ಬಂದಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ತಾಯಿಗೆ ನಿಂದಿಸಿದ್ದ ವಿಚಾರಕ್ಕೆ ಸಹೋದರರ ನಡುವೆ ವಾಗ್ವಾದ ನಡೆದಿದೆ. ಅದು ವಿಕೋಪಕ್ಕೆ ಹೋದಾಗ ಕೋಪಗೊಂಡ ಮುಸೀಬ್ ಚಾಕುವಿನಿಂದ ಮುಜಾಹಿದ್‌ನ ಕುತ್ತಿಗೆ ಹಾಗೂ ತಲೆಗೆ ಇರಿದು ಕೊಲೆ ಮಾಡಿದ್ದಾನೆ. ಈ ವೇಳೆ ಮುಸೀಬ್ ಕೈಗೂ ಗಾಯವಾಗಿದೆ. ಆಸ್ಪತ್ರೆಯಿಂದ ಬಿಡುಗಡೆಯಾಗುತ್ತಿದ್ದಂತೆ ಆರೋಪಿಯನ್ನು ಬಂಧಿಸಲಾಗುವುದು' ಎಂದು ಹೇಳಿದ್ದಾರೆ.

ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು. ಈ ಸಂಬಂಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಖ್ಯಾಂಶಗಳು

- ದಾಳಿ ವೇಳೆ ಮುಸೀಬ್ ಕೈಗೆ ಗಾಯ
- ಆಸ್ಪತ್ರೆಯಿಂದ ಬಿಡುಗಡೆ ಆದ ಮೇಲೆ ಬಂಧನ

ಉದ್ದೇಶಪೂರ್ವಕ ತಪ್ಪು ಕ್ಷಮಿಸಲ್ಲ

ಕಾರಾಗೃಹ, ಸುಧಾರಣಾ ಸೇವೆ ಇಲಾಖೆ ನೂತನ ಡಿಜಿಪಿ ಅಲೋಕ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳ್ಳೆಯ ಕೆಲಸ ಮಾಡುವ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಗುರುತಿಸಿ, ಪ್ರೋತ್ಸಾಹಿಸಲಾಗುವುದು. ಆದರೆ, ಉದ್ದೇಶಪೂರ್ವಕವಾಗಿ ತಪ್ಪು ಮಾಡಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ) ಅಲೋಕ್ ಕುಮಾರ್ ಹೇಳಿದರು.

ಅಲೋಕ್ ಕುಮಾರ್

ನಗರದಲ್ಲಿ ಗುರುವಾರ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, 'ಇಲಾಖೆಯಲ್ಲಿ ಸುಧಾರಣೆ ಆಗಬೇಕು. ಅದೇ ರೀತಿ ಕೈದಿಗಳಲ್ಲೂ ಸುಧಾರಣೆ ಆಗಬೇಕಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಕಾರದೊಂದಿಗೆ ಉತ್ತಮವಾಗಿ ಕಾರ್ಯ ನಿರ್ವಹಿಸಲಾಗುವುದು. ಕೆಲವೊಮ್ಮೆ ಉದ್ದೇಶಪೂರ್ವಕವಲ್ಲದ ಸಣ್ಣ ತಪ್ಪುಗಳು ಆಗುತ್ತವೆ. ಆದರೆ, ಉದ್ದೇಶಪೂರ್ವಕವಾಗಿ ಅಕ್ರಮದಲ್ಲಿ ಭಾಗಿಯಾದರೆ ಸಹಿಸುವುದಿಲ್ಲ' ಎಂದು ಎಚ್ಚರಿಸಿದರು.

'ಬೈಲಹೊಂಗಲ ಸೇರಿದಂತೆ ರಾಜ್ಯದ ವಿವಿಧ ಕಾರಾಗೃಹಗಳಿಗೆ ಭೇಟಿ ನೀಡಿದ್ದೇನೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆಯೂ ಈ ಹಿಂದೆ ಸಾಕಷ್ಟು ಬಾರಿ ದಾಳಿ ಮಾಡಿ, ಪರಿಶೀಲನೆ ನಡೆಸಿದ್ದೇನೆ. ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಸಮಸ್ಯೆಗಳನ್ನು ಅರ್ಥೈಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು. ಇಲಾಖೆಯಲ್ಲಿ ಪ್ರತಿ ಅಧಿಕಾರಿ ಮತ್ತು ಸಿಬ್ಬಂದಿ ಪಾತ್ರ ಮುಖ್ಯ. ಅಕ್ರಮಗಳ ನಿಯಂತ್ರಣ ಅವರಿಂದಲೇ ಸಾಧ್ಯ' ಎಂದರು.

'ಜೈಲಿನಲ್ಲಿ ಸಿಬ್ಬಂದಿ ಕೊರತೆ ಇದೆ. ಕೈದಿಗಳ ಸಂಖ್ಯೆಗೆ ತಕ್ಕಂತೆ ಸಿಬ್ಬಂದಿ ಇಲ್ಲ. ಕಲಬುರಗಿಯಲ್ಲಿದ್ದಾಗ ವಾರ್ಡನ್ ಮೇಲೆ ಕೈದಿಗಳು ಹಲ್ಲೆ ನಡೆಸಿದ್ದರು. ಕೆಲ ದಿನಗಳ ಹಿಂದೆ ಕಾರಾವಾರ ಜೈಲಿನಲ್ಲಿ ವಿಚಾರಣಾ ಕೈದಿಗಳು ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದರು. ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಜಾಮರ್ ಅಳವಡಿಕೆಯಿಂದಾಗಿ ಸಿಗ್ನಲ್ ಸಿಗುತ್ತಿಲ್ಲವೆಂದು ಸುತ್ತಮುತ್ತಲ ಪ್ರದೇಶದ ಜನರು ಹೇಳುತ್ತಿದ್ದಾರೆ. ಜೈಲಿನ ಸುತ್ತಲಿನ ಪ್ರದೇಶ ಈಗ ಸಾಕಷ್ಟು ಅಭಿವೃದ್ಧಿಯಾಗಿದೆ. ಈ ಎಲ್ಲದರ ಬಗ್ಗೆ ಪರಿಶೀಲನೆ ನಡೆಸಿ, ಪರಿಹಾರ ಹುಡುಕಿ, ಕೆಲಸ ಮಾಡಲಾಗುವುದು' ಎಂದು ಅವರು ತಿಳಿಸಿದರು.

ಜೈಲಿನಲ್ಲಿ ಈ ಹಿಂದೆ ನಡೆದಿರುವ ಘಟನೆಗಳ ಬಗ್ಗೆ ಪರಿಶೀಲನೆ ನಡೆಸಲಾಗುವುದು. ಅಕ್ರಮ ಚಟುವಟಿಕೆಗಳು ನಡೆಯದಂತೆ ಅಧಿಕಾರಿಗಳ ಜತೆ ಸಮಾಲೋಚಿಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಹೇಳಿದರು.

ಮುಖ್ಯಾಂಶಗಳು

- ಜೈಲಿನಲ್ಲಿ ಈ ಹಿಂದೆ ನಡೆದಿರುವ ಘಟನೆಗಳ ಬಗ್ಗೆ ಪರಿಶೀಲನೆ
- ಅಧಿಕಾರಿಗಳ ಜತೆ ಸಮಾಲೋಚಿಸಿ, ಸಮಸ್ಯೆಗೆ ಪರಿಹಾರ
- ಸಮಸ್ಯೆಗಳನ್ನು ಅರ್ಥೈಸಿಕೊಂಡು ಮುಂದಿನ ಕ್ರಮ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ-562110.

ಸಂ: ಬಿಐಎಎಪಿಎ/ಟಿಪಿ/ಭೂಉನಿ/127/2025-26/2482 ದಿನಾಂಕ: 08.12.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿವಸಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸ.ನಂ.	ವಿಸ್ತೀರ್ಣ ಎ-ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	Sri Venkata Swamy Naidu S/o Sri Subbaiah Naidu, Sri A. Kiran Kumar S/o Late Sri.Anand & Sri Y.R Janardhana Rao S/o Late Sri.D.L Ramaiah	ದೇವನಹಳ್ಳಿ	ಕಸಬಾ	ಜೋಗಹಳ್ಳಿ	30/1	01ಎ-0ಗು	ವ್ಯವಸಾಯ	ವಸತಿ
2					30/2	01ಎ-11ಗು		
3					30/3	0ಎ-11ಗು		
4					30/4	01ಎ-10ಗು		
5					30/5	0ಎ-09ಗು		
6					30/6	0ಎ-20ಗು		
				ಒಟ್ಟು		04-21		

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ಭೂಉಪಯೋಗ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾ.ಪ್ರ/ಎಎಎ/4397/2025-26

ವೈದ್ಯೆ ಕೃತಿಕಾ ರೆಡ್ಡಿ ಕೊಲೆ ಪ್ರಕರಣ

ಆರೋಪಿ ಜಾಮೀನು ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಗೆ (ಡಾ.ಕೃತಿಕಾ ರೆಡ್ಡಿ) ಅನಸ್ತೇಶಿಯಾ ನೀಡಿ ಕೊಂದ ಆರೋಪ ಎದುರಿಸುತ್ತಿರುವ ಪತಿ ಡಾ. ಜಿ.ಎಸ್. ಮಹೇಂದ್ರ ರೆಡ್ಡಿಗೆ ಜಾಮೀನು ನೀಡಲು ಸೆಷನ್ಸ್ ನ್ಯಾಯಾಲಯ ನಿರಾಕರಿಸಿದೆ.

ಈ ಸಂಬಂಧ ಜಿ.ಎಸ್.ಮಹೇಂದ್ರ ರೆಡ್ಡಿ ಸಲ್ಲಿಸಿದ್ದ ಅರ್ಜಿಯನ್ನು ಮೆಯೊ ಹಾಲ್‌ನ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಓಂಕಾರಪ್ಪ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಆರೋಪಿ ಒಬ್ಬ ವೃತ್ತಿನಿರತ ವೈದ್ಯರು. ಪತ್ನಿಯನ್ನು ಕೊಲೆ ಮಾಡುವ ಉದ್ದೇಶದಿಂದಲೇ ಕೃತ್ಯ ಎಸಗಿರುವ ಅವರಿಗೆ ಒಂದು ವೇಳೆ ಜಾಮೀನು ಮಂಜೂರು ಮಾಡಿದರೆ ತನಿಖೆಯ ಮೇಲೆ ತೀವ್ರ ದುಷ್ಪರಿಣಾಮ ಉಂಟು ಮಾಡಲಿದೆ. ಆದ್ದರಿಂದ, ಜಾಮೀನು ಮಂಜೂರು ಮಾಡಬಾರದು' ಎಂದು ಮನವಿ ಮಾಡಿದರು. ಈ ವಾದ ಮನ್ನಿಸಿದ ನ್ಯಾಯಾಧೀಶರು ಜಾಮೀನು ಕೋರಿಕೆ ಅರ್ಜಿ ತಿರಸ್ಕರಿಸಿ ಆದೇಶಿಸಿದರು.

ಮಹೇಂದ್ರ ರೆಡ್ಡಿ

ಕೃತಿಕಾ ರೆಡ್ಡಿ

ಪ್ರಕರಣವೇನು?: ಡಾ.ಕೃತಿಕಾ ರೆಡ್ಡಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚರ್ಮರೋಗ ತಜ್ಞರಾಗಿದ್ದರು. ಪತಿ ಮಹೇಂದ್ರ ರೆಡ್ಡಿ ಇದೇ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಕ. ಮಹೇಂದ್ರ ರೆಡ್ಡಿ ಮತ್ತು ಕೃತಿಕಾ ರೆಡ್ಡಿ ಹಿರಿಯರ ಸಮ್ಮುಖದಲ್ಲಿ 2024ರ ಮೇ 24ರಂದು ಮದುವೆಯಾಗಿದ್ದರು. 'ಪತ್ನಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ' ಎಂಬ ನೆಪವೊಡ್ಡಿ ಮಹೇಂದ್ರ ರೆಡ್ಡಿ ಬೇರೆ ಔಷಧಿಗಳನ್ನು ನೀಡುವ ಸಮಯದಲ್ಲಿ 2024ರ ಏಪ್ರಿಲ್ 23ರಂದು ಕೃತಿಕಾಗೆ ಹೆಚ್ಚುವರಿ ಅನಸ್ತೇಶಿಯಾ ನೀಡಿದ್ದರು.

ಮೃತರ ಪೋಷಕರು, 'ಸಾವಿನ ಬಗ್ಗೆ ಯಾವುದೇ ಅನುಮಾನ ಇಲ್ಲ' ಎಂದು ನೀಡಿದ್ದ ವಿವರಣೆ ಅನುಸಾರ ಯುಡಿಆರ್ (ಅಸ್ವಾಭಾವಿಕ ಸಾವು) ದಾಖಲಾಗಿತ್ತು. ಆದರೆ, ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ಬಂದ ನಂತರ, 'ಅನಸ್ತೇಶಿಯಾದ ಪ್ರಮಾಣ ಹೆಚ್ಚಾದ ಕಾರಣ ಸಾವು ಸಂಭವಿಸಿದೆ' ಎಂಬುದು ತಿಳಿದುಬಂದಿತ್ತು.

ಈ ಸಂಬಂಧ ಕೃತಿಕಾ ತಂದೆ ಕೆ.ಮುನಿರೆಡ್ಡಿ ನೀಡಿದ ದೂರಿನ ಅನುಸಾರ ಪೊಲೀಸರು ವರ್ತೂರಿನ ಗುಂಜೂರು ನಿವಾಸಿ ಡಾ.ಮಹೇಂದ್ರ ರೆಡ್ಡಿ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಹೇಂದ್ರ ರೆಡ್ಡಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಡ್ರಗ್ಸ್ ಮಾರಾಟ: ಇಬ್ಬರ ಬಂಧನ

ಬೆಂಗಳೂರು: ಹೊರ ರಾಜ್ಯದಿಂದ ಮಾದಕವಸ್ತು ಖರೀದಿಸಿ ನಗರದಲ್ಲಿ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಇಬ್ಬರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿ, 300 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ.

ಸಿಂಗಸಂದ್ರದ ಕಾಂಪ್ಲೆಕ್ಸ್‌ವೊಂದರ ಬಳಿ ಇಬ್ಬರು ವ್ಯಕ್ತಿಗಳು ಎರಡು ಕಾರುಗಳಲ್ಲಿ ಎಂಡಿಎಂಎ ಮಾರಾಟ ಮಾಡಲು ಪ್ರಯತ್ನಿಸಿದ್ದರು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ, ಹೊರ ರಾಜ್ಯದ ವ್ಯಕ್ತಿ ಸೇರಿ ಇಬ್ಬರನ್ನು ಬಂಧಿಸಿ, ₹3 ಲಕ್ಷ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡರು. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಕೇರಳದಿಂದ ಕಡಿಮೆ ಬೆಲೆಗೆ ಡ್ರಗ್ಸ್ ಖರೀದಿಸಿ, ನಗರದಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಹೇಳಿದರು.

ಚಿನ್ನ, ಪ್ಲಾಟಿನಂ ಕಳವು ಮಾಡಿದ್ದ ಮನೆಕೆಲಸದಾಕೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲೇ ಚಿನ್ನಾಭರಣ ಕಳವು ಮಾಡಿದ್ದ ಆರೋಪಿ ಮಹಿಳೆಯನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಚಾಂದಿನಿ (28) ಎಂಬಾಕೆಯನ್ನು ಬಂಧಿಸಿ, ₹31 ಲಕ್ಷ ಮೌಲ್ಯದ 236 ಗ್ರಾಂ ಚಿನ್ನ, 9 ಗ್ರಾಂ ಪ್ಲಾಟಿನಂ, 118 ಗ್ರಾಂ ಬೆಳ್ಳಿಯ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಮೂರು ವರ್ಷಗಳಿಂದ ನಗರದ ಹೆಣ್ಣೂರಿನಲ್ಲಿ ಪತಿ ಜತೆ ಆರೋಪಿ ವಾಸವಾಗಿದ್ದಾರೆ. ಈ ಮಧ್ಯೆ ತಾಯಿಯ ಆರೈಕೆ ಮಾಡಲು ಕೇರ್ ಟೇಕರ್ ಸಂಸ್ಥೆಯೊಂದರ ಮೂಲಕ ಚಾಂದಿನಿ ಅವರನ್ನು ಜೇನ್ಯೂ ಶರ್ಲಿನ್ ಜೈಬ್ ಕೆಲಸಕ್ಕೆ ಸೇರಿಸಿಕೊಂಡಿದ್ದರು. ಜೈಬ್ ಅವರು ಕಾರ್ಯನಿಮಿತ್ತ ಅಕ್ಟೋಬರ್‌ನಲ್ಲಿ ವಿದೇಶಕ್ಕೆ ತೆರಳಿದ್ದರು. ಆದ್ದರಿಂದ ಅವರ ಸಂಬಂಧಿ ತಾರಾಬೇಗಂ ಅವರನ್ನು ಮನೆಗೆ ಕರೆಸಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದರು.

'ತಾರಾಬೇಗಂ ಅವರು ಬರುವಾಗ ಚಿನ್ನಾಭರಣಗಳನ್ನು ಜತೆಯಲ್ಲಿ ತಂದಿದ್ದನ್ನು ಆರೋಪಿ ಗಮನಿಸಿದ್ದಳು. ಹಂತ-ಹಂತವಾಗಿ ಅವರ ಚಿನ್ನಾಭರಣ ಹಾಗೂ ದೂರುದಾರರ ತಾಯಿಯ ಎಟಿಎಂ ಕಾರ್ಡ್ ಕಳವು ಮಾಡಿದ್ದಳು. ಬಳಿಕ ಅದರಿಂದ ₹20 ಸಾವಿರ ನಗದು ಡ್ರಾ ಮಾಡಿದ್ದಳು. ಕೆಲ ದಿನಗಳ ಬಳಿಕ ತಾರಾಬೇಗಂ ಅವರ ಚಿನ್ನಾಭರಣಗಳು ಕಳವು ಆಗಿರುವುದು ಗೊತ್ತಾಯಿತು. ಜೇನ್ಯೂ ಶರ್ಲಿನ್ ಜೈಬ್ ಅವರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡರು. ಪ್ರಕೃತಿ ಲೇಔಟ್‌ನ ಮನೆಯಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ, ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾಳೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಆರೋಪಿ ಮನೆಯಲ್ಲಿ ಬಚ್ಚಿಟ್ಟಿದ್ದ ₹31 ಲಕ್ಷ ಮೌಲ್ಯದ ಆಭರಣಗಳನ್ನು ವಶಪಡಿಸಿಕೊಂಡು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದರು. ಠಾಣಾಧಿಕಾರಿ ಎಸ್. ಅರುಣ್ ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಐದು ದ್ವಿಚಕ್ರ ವಾಹನ ಕಳವು: ಕ್ಯಾಬ್ ಚಾಲಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡಿ, ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಟ್ಟಂದೂರು ಅಗ್ರಹಾರದ ನಿವಾಸಿ, ಕ್ಯಾಬ್ ಚಾಲಕ ಯಶವಂತ್ ಎಂಬಾತನನ್ನು ಬಂಧಿಸಿ, ₹9 ಲಕ್ಷ ಮೌಲ್ಯದ ಐದು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಠಾಣಾ ವ್ಯಾಪ್ತಿಯ ನಲ್ಲೂರುಹಳ್ಳಿ ನಿವಾಸಿಯೊಬ್ಬರ ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ನವೆಂಬರ್ 21ರಂದು ಕಳವು ಆಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ, ಬಾತ್ಮೀದಾರರ ಮಾಹಿತಿ ಆಧರಿಸಿ, ನಲ್ಲೂರು ಹಳ್ಳಿಯ ಬ್ರಿಗೇಡ್ ಟೆಕ್‌ಪಾರ್ಕ್ ಬಳಿ ವಾಹನ ಸಮೇತ ಆರೋಪಿಯನ್ನು ವಶಕ್ಕೆ ಪಡೆದುಕೊಂಡರು.

'ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡಿರುವುದಾಗಿ ವಿಚಾರಣೆ ವೇಳೆ ಆರೋಪಿ ಒಪ್ಪಿಕೊಂಡಿದ್ದಾನೆ. ಹಾಸನದಲ್ಲಿರುವ ಸ್ನೇಹಿತರಿಬ್ಬರಿಗೆ ಮಾರಾಟ ಮಾಡಿದ್ದ ಮೂರು ವಾಹನ ಹಾಗೂ ಠಾಣಾ ವ್ಯಾಪ್ತಿಯ ದೇವಸ್ಥಾನವೊಂದರ ಪಕ್ಕದ ಜಾಗದಲ್ಲಿ ನಿಲ್ಲಿಸಿದ್ದ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿಯ ಬಂಧನದಿಂದ ವೈಟ್‌ಫೀಲ್ಡ್ ಪೊಲೀಸ್ ಠಾಣೆ, ಮಹದೇವಪುರ, ಪೀಣ್ಯ, ಮಹಾಲಕ್ಷ್ಮೀಪುರ ಹಾಗೂ ಗಿರಿನಗರ ಠಾಣಾ ವ್ಯಾಪ್ತಿಯಲ್ಲಿ ತಲಾ ಒಂದು ದ್ವಿಚಕ್ರ ವಾಹನ ಕಳವು ಪ್ರಕರಣಗಳು ಪತ್ತೆಯಾಗಿವೆ. ವೃತ್ತಿಯಲ್ಲಿ ಕ್ಯಾಬ್ ಚಾಲಕನಾಗಿರುವ ಆರೋಪಿ, ವಿಲಾಸಿ ಜೀವನ ನಡೆಸುವ ಉದ್ದೇಶ ದಿಂದ ವಾಹನಗಳನ್ನು ಕಳವು ಮಾಡುತ್ತಿದ್ದು, ದಾಖಲೆಗಳನ್ನು ನಂತರ ನೀಡುವುದಾಗಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ' ಎಂದು ಹೇಳಿದ್ದಾರೆ.

ಬೆದರಿಕೆ ಕರೆ: ಎಂಬಿಎ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಾಲೇಜೊಂದರಲ್ಲಿ ದ್ವಿತೀಯ ವರ್ಷದ ಎಂಬಿಎ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಯೊಬ್ಬ ವಂಚಕರ ಬೆದರಿಕೆಗೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೆಸರಘಟ್ಟ ರಸ್ತೆಯ ಶಾಂತಿನಗರದಲ್ಲಿ ನಡೆದಿದೆ.

ಕೇರಳದ ಜಗನ್ ಮೋಹನ್ (25) ಮೃತ ವಿದ್ಯಾರ್ಥಿ. ಅವರ ಸಹೋದರ ಕಿರಣ್ ಕುಮಾರ್ ನೀಡಿದ ದೂರು ಆಧರಿಸಿ ಸೋಲದೇವನಹಳ್ಳಿ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ತಮ್ಮೇನಹಳ್ಳಿಯಲ್ಲಿ ಬಾಡಿಗೆ ಕೊಠಡಿಯಲ್ಲಿ ವಾಸವಾಗಿದ್ದ ವಿದ್ಯಾರ್ಥಿ, ಡಿಸೆಂಬರ್ 9ರಂದು ಬೆಳಿಗ್ಗೆ ಕಾಲೇಜಿಗೆ ತೆರಳಿ, ವಾಪಸ್ ಬಂದು ಸಂಜೆ ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಜಗನ್ ಮೋಹನ್

'ಮರಣಪತ್ರದಲ್ಲಿ ಮೂರು ಮೊಬೈಲ್ ಸಂಖ್ಯೆಗಳನ್ನು ಉಲ್ಲೇಖಿಸಲಾಗಿದ್ದು, ಪರಿಶೀಲನೆ ನಡೆಸಿದಾಗ ನಕಲಿ ವಿಡಿಯೊ ಕಾಲ್‌ನಲ್ಲಿ ₹25 ಸಾವಿರ ಹಣ ಕಳೆದುಕೊಂಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಆರೋಪಿಗಳು ವಿದ್ಯಾರ್ಥಿಯಿಂದ ಹಣ ಪಡೆದುಕೊಂಡು, ಬಳಿಕ ಹೆಚ್ಚಿನ ಹಣಕ್ಕೆ ಹಿಂಸೆ ನೀಡಿ, ಬೆದರಿಕೆ ಹಾಕಿದ್ದಾರೆ. ಹಣ ನೀಡದಿದ್ದರೆ ವಿದ್ಯಾರ್ಥಿಯ ವಿಡಿಯೊ, ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡುವುದಾಗಿ ಬೆದರಿಕೆ ಹಾಕಿರುವ ಸಾಧ್ಯತೆಯೂ ಇದೆ' ಎಂದು ಪೊಲೀಸರು ಶಂಕಿಸಿದ್ದಾರೆ.

'ಮೊಬೈಲ್ ಸಂಖ್ಯೆಗಳ ಬಗ್ಗೆ ತನಿಖೆ ಆರಂಭಿಸಿದ್ದು, ಮೇಲ್ನೋಟಕ್ಕೆ ಇದು ಸೈಬರ್ ವಂಚಕರ ಕೃತ್ಯವಿರಬಹುದು' ಎಂದು ಅವರು ತಿಳಿಸಿದರು.

'ಕೆಪಿಎಸ್ ಹೆಸರಲ್ಲಿ ಸರ್ಕಾರಿ ಶಾಲೆ ಮುಚ್ಚಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆಯಡಿ 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವುದು ಶಿಕ್ಷಣ ವ್ಯವಸ್ಥೆ ವಿನಾಶದ ನೀಲನಕ್ಷೆಯಂತಿದೆ. ಈ ಜನವಿರೋಧಿ ಯೋಜನೆ ಕೈಬಿಡಬೇಕು' ಎಂದು ಸಾರ್ವಜನಿಕ ಶಿಕ್ಷಣ ಉಳಿಸಿ ಜನ ಸಮಾವೇಶ ಆಗ್ರಹಿಸಿದೆ.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಗುರುವಾರ ಗಾಂಧಿಭವನದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ರಾಜ್ಯ ಸರ್ಕಾರದ ಶಿಕ್ಷಣ ಯೋಜನೆಗಳ ಕುರಿತು ಆಕ್ರೋಶ ವ್ಯಕ್ತವಾಯಿತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, 'ವಿಲೀನದ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಯತ್ನ ನಡೆಸಿರುವುದನ್ನು ಒಪ್ಪಲಾಗದು. ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನಾಧರಿಸಿ ಸಾಧಕ-ಬಾಧಕಗಳನ್ನು ಸರ್ಕಾರ ಪರಿಶೀಲಿಸಬೇಕು' ಎಂದು ಒತ್ತಾಯಿಸಿದರು.


ನಗರದಲ್ಲಿ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಆಯೋಜಿಸಿದ್ದ ಸಾರ್ವಜನಿಕ ಶಿಕ್ಷಣ ಉಳಿಸಿ ಜನ ಸಮಾವೇಶದಲ್ಲಿ ಅಲ್ಲಮಪ್ರಭು ಬೆಟ್ಟದೂರು, ನಿರಂಜನಾರಾಧ್ಯ, ಮಾವಳ್ಳಿ ಶಂಕರ್, ಎಲ್. ಎನ್. ಮುಕುಂದರಾಜ್ ಮಕ್ಕಳೊಂದಿಗೆ ಮಾತನಾಡಿದರು

ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಮಾತನಾಡಿ, 'ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವುದಿಲ್ಲ ಎಂದು ಹೇಳಿ, ರಾಜ್ಯ ಶಿಕ್ಷಣ ನೀತಿ ರೂಪಿಸಲು ಸಮಿತಿ ರಚಿಸಿ ವರದಿಯನ್ನು ಪಡೆದಿದೆ. ಆದರೆ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿರುವ ಅಂಶಗಳನ್ನೇ ಜಾರಿಗೊಳಿಸಲು ಹೊರಟಿದೆ. ಇನ್ನೊಂದು ಕಡೆ ವರದಿ ಪಡೆದು ಐದು ತಿಂಗಳಾದರೂ ಸಾರ್ವಜನಿಕ ಚರ್ಚೆಗೆ ಏಕೆ ಮುಂದಾಗಿಲ್ಲ' ಎಂದು ಪ್ರಶ್ನಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎ.ಮುರಿಗೆಪ್ಪ ಮಾತನಾಡಿ, 'ಸರ್ಕಾರಿ ಶಾಲೆ ಬಲಪಡಿಸಬೇಕು. ಮಕ್ಕಳಿಗೆ ಬಸ್ ವ್ಯವಸ್ಥೆ ಕಲ್ಪಿಸಬೇಕು ಎನ್ನುವ ಶಿಫಾರಸುಗಳಿದ್ದರೂ ಅದನ್ನು ಜಾರಿಗೊಳಿಸಿಲ್ಲ' ಎಂದರು.

ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮಾತನಾಡಿ, 'ಸಜ್ಜನರು ಮೌನವಹಿಸಿಕೊಂಡಿದ್ದರೆ ದುಷ್ಟರ ಸಂಖ್ಯೆ ಹೆಚ್ಚಿ ಅನಾಹುತಗಳು ಆಗಲಿವೆ. ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎನ್ನುವ ಪಕ್ಷ ರಾಜಕಾರಣಕ್ಕಿಂತ ಎಲ್ಲಾ ಪಕ್ಷಗಳಲ್ಲೂ ಮನುವಾದ ಇರುವುದರಿಂದಲೇ ವಿಲೀನದ ನೆಪದಲ್ಲಿ ಶಾಲೆಗಳನ್ನು ಮುಚ್ಚಿ ಶಿಕ್ಷಣ ವ್ಯವಸ್ಥೆ ಹಾಳು ಮಾಡುವ ಪ್ರಯತ್ನ ನಡೆಯುತ್ತಿದೆ' ಎಂದರು.

ಸಮಿತಿ ಸಂಚಾಲಕ ವಿ.ಎನ್. ರಾಜಶೇಖರ್ ಮಾತನಾಡಿದರು. ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು, ವಿಶ್ರಾಂತ ಕುಲಪತಿ ಎ.ಎಚ್.ರಾಜಾಸಾಬ್, ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್, ಶಿಕ್ಷಣ ತಜ್ಞರಾದ ಎ.ಆರ್.ವಾಸವಿ, ಫ್ರಾನ್ಸಿಸ್ ಅಸ್ಸಿಸಿ ಅಲ್ಮೇಡಾ, ಸುಭಾಷ್, ರಾಜೇಶ್ ಭಟ್, ಎಸ್.ಜಿ.ಮಹೇಶ್ ಉಪಸ್ಥಿತರಿದ್ದರು.

> ಸರ್ಕಾರಿ ಶಾಲೆಗಳ ವಿಚಾರವಾಗಿ ಮುಖ್ಯಮಂತ್ರಿ ಅವರು ಸದನದಲ್ಲೇ ಸ್ಪಷ್ಟೀಕರಣ ನೀಡಬೇಕು. ಶಿಕ್ಷಣ ಸಚಿವರು ಸುಳ್ಳು ಹೇಳುತ್ತಿರುವುದು ನಿಜವಾದರೆ ಅವರನ್ನು ಸಂಪುಟದಿಂದ ಕೈ ಬಿಡಬೇಕು
>
> **ವಿ.ಪಿ.ನಿರಂಜನಾರಾಧ್ಯ,** ಶಿಕ್ಷಣ ತಜ್ಞ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

HRD & Admin

WANTED MALE/ Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

Teachers/ Professors

SJES GROUP OF INSTITUTION, Old Madras, Medahalli, Bengaluru-49 required 1)ASSISTANT PROFESSOR MANAGEMENT 2)ASSISTANT PROFESSOR COMMERCE 3)ASSISTANT PROFESSOR COMPUTER APPLICATION. 4)PROFESSOR MANAGEMENT, Contact: 9774184433 Apply rohitrith@yahoo.co.in

PERSONAL

Change of Name

CHANGE OF NAME
I, NALLAN CHAKRAVARTHI CHITRALEKA W/o. S. Lakshminarayanan, R/a E 404, Renaissance Temple Bells, Opp. ISKCON Temple, Industrial Suburb, Bengaluru- 560022 have changed my Name to CHITRA LAKSHMINARAYANAN vide affidavit dated: 28.11.2025 sworn before Notary K.P. Ramesh, Bengaluru.

I, SHIVAAJI P S/O Venkatesh P R/O 150/2, Main Road, Near Shivali Talkies, Devaraj Urs Badavane, Davanagere, Davangere, Karnataka - 577006, have changed my name to Shivaaji Survammi Rajvarman.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

General

General

WE_DO FUNDING & Solutions/ Settlements for disputed properties under High Court,Civil/ DC/AC/ Tribunal/ Tahsildar Courts Pending cases. Contact Verna Developers, Barton Centre, MG Road, Bangalore. 9620253180.

REAL ESTATE SELLING

Sites

Jigani

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan
Call : 70260 13388

Banashankari

50X80 EAST NORTH Corner BDA Site Sale Banashankari 6th Stage, 3rd Block, Genuine Buyers Call: 9008418631.

Kempegowda Layout

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

CONNECT

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

Koramangala

KORAMANGALA 8TH Block Commercial property for sale 3200sqft. INR 37.7k/sqft Slightly Negotiable. Whatsapp Message Only 9663766492

ALL ARE WELCOME | ENTRY FREE
தமிழ்ப் புத்தகத் திருவிழா 2025 பெங்களூரு
TAMIL BOOK FESTIVAL
Time: 10am to 8pm
KANNADA, ENGLISH BOOKS ALSO AVAILABLE
5th - 14th December-2025
The Institution of Engineers #3, Dr. B.R. Ambedkar Veedhi, Opp. Indian Express, Bengaluru
FREE PARKING 9916542367 6363118988

Kengeri

SITE FOR SALE, 30x40 East Facing KHB Site at Bande Mutt Kengeri Half Km from Kengeri bridge, 1km from Kengeri Metro and Kengeri Railway Station, Price: Rs.12750/ Sqft, Contact: 9880552641

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಇಟಲಿ ಕಂಪನಿಗಳ ಜತೆ ಲಿಡ್ಕರ್ ಒಪ್ಪಂದ

ಚರ್ಮೋದ್ಯಮಕ್ಕೆ ಉತ್ತೇಜನ
ಪ್ರದಾ, ಲಿಡ್ಕಾಂ ಜತೆ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಚರ್ಮ ಉದ್ಯಮ ಹಾಗೂ ಕೊಲ್ಹಾಪುರಿ ಚಪ್ಪಲಿಯ ಪರಂಪರೆ ಉತ್ತೇಜಿಸುವ ಉದ್ದೇಶದಿಂದ ಇಟಲಿಯ ಪ್ರಾದಾ ಕಂಪನಿ, ಲಿಡ್ಕಾಂ (ಸಂತ್ ರೋಹಿದಾಸ್ ಲೆದರ್ ಇಂಡಸ್ಟ್ರೀಸ್ ಆ್ಯಂಡ್ ಚರ್ಮ ಕಾರ್ ಡೆವಲಪ್‌ಮೆಂಟ್ ಕಾರ್ಪೊರೇಷನ್) ಮತ್ತು ಲಿಡ್ಕರ್ (ಡಾ. ಬಾಬು ಜಗಜೀವನ್ ರಾಮ್ ಲೆದರ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್) ಒಡಂಬಡಿಕೆ ಮಾಡಿಕೊಂಡಿವೆ.

ಮುಂಬೈನಲ್ಲಿ ನಡೆದ ಇಟಲಿ-ಭಾರತ ಬಿಸಿನೆಸ್ ಫೋರಂನಲ್ಲಿ ಈ ಒಡಂಬಡಿಕೆಗೆ ಸಹಿ ಹಾಕಲಾಗಿದೆ. ಈ ಒಡಂಬಡಿಕೆ ಅನುಸಾರ ಪ್ರಾದಾ ಕಂಪನಿಯು ಲಿಡ್ಕಾಂ ಮತ್ತು ಲಿಡ್ಕರ್ ಸಹಯೋಗದಲ್ಲಿ ಸ್ಥಳೀಯವಾಗಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಿದೆ. 40 ಆಯ್ದ ಪ್ರಾದಾ ಮಳಿಗೆಗಳಲ್ಲಿ ಮತ್ತು ಪ್ರಾದಾದ ಇ-ಕಾಮರ್ಸ್ ವೇದಿಕೆಗಳಲ್ಲಿ ಲಿಡ್ಕಾಂ ಮತ್ತು ಲಿಡ್ಕರ್ ಸಂಗ್ರಹವು ಜಾಗತಿಕವಾಗಿ 2026ರ ಫೆಬ್ರುವರಿಯಲ್ಲಿ ಬಿಡುಗಡೆಯಾಗಲಿದೆ.

ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ಕೆ.ಎಂ. ವಸುಂಧರಾ, 'ಕೊಲ್ಹಾಪುರಿ ಚಪ್ಪಲಿಗಳ ಪರಂಪರೆಯು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ತಲೆಮಾರುಗಳಿಂದ ಸಾಗಿಬಂದಿದೆ. ಈ ಜಿಐ ಟ್ಯಾಗ್ ಪಡೆದ ಕಲೆಯನ್ನು ರಕ್ಷಿಸುವುದು ಮತ್ತು ನಮ್ಮ ಕಲಾವಿದರನ್ನು ಪ್ರೋತ್ಸಾಹಿಸುವುದು ಮುಖ್ಯ. ಈ ಸಹಯೋಗವು ಕರ್ನಾಟಕದ ಕುಶಲಕರ್ಮಿಗಳಿಗೆ ಹೊಸ ಜಾಗತಿಕ ಅವಕಾಶಗಳನ್ನು ತೆರೆದಿದೆ' ಎಂದರು.

ಪ್ರಾದಾ ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿಯ ಸಮೂಹ ಮುಖ್ಯಸ್ಥ ಲೊರೆಂಝೊ ಬರ್ಟೆಲ್ಲಿ, ಲಿಡ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಪ್ರೇಮಾ ದೇಶಭ್ರತರ್ ಉಪಸ್ಥಿತರಿದ್ದರು.

ಪ್ರೇಮಾ ದೇಶಭ್ರತರ್, ಲೊರೆಂಝೊ ಬರ್ಟೆಲ್ಲಿ ಹಾಗೂ ಕೆ.ಎಂ. ವಸುಂಧರಾ ಅವರು ಒಡಂಬಡಿಕೆಗೆ ಸಹಿ ಹಾಕಿದರು

21ರಿಂದ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಗರ ಜಿಲ್ಲೆಯಾದ್ಯಂತ ಇದೇ 21ರಿಂದ 24 ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮ ಆಯೋಜಿಸಿದ್ದು, ಐದು ವರ್ಷದೊಳಗಿನ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ನಿಗಾವಹಿಸಬೇಕು' ಎಂದು ಜಿಲ್ಲಾಧಿಕಾರಿ ಜಿ.ಜಗದೀಶ್ ಸೂಚಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ವಿವಿಧ ಇಲಾಖೆಗಳ ಸಹಕಾರದೊಂದಿಗೆ ಲಸಿಕಾ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಬಗ್ಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ಜನರಲ್ಲಿ ಜಾಗೃತಿ ಮೂಡಿಸಿ ಶೇ 100ರಷ್ಟು ಗುರಿ ಸಾಧಿಸಬೇಕು' ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರವೀಂದ್ರನಾಥ್ ಮೇಟಿ ಮಾತನಾಡಿ, 'ಜಿಲ್ಲೆಯಲ್ಲಿ ಐದು ವರ್ಷದೊಳಗಿನ 2,05,530 ಮಕ್ಕಳು ಇದ್ದು, ಒಟ್ಟು 728 ಲಸಿಕಾ ಬೂತ್, 44 ಟ್ರಾನ್ಸಿಟ್ ತಂಡ ಮತ್ತು 55 ಮೊಬೈಲ್ ತಂಡಗಳು ಲಸಿಕೆ ಹಾಕಲಿವೆ. ಇದೇ 21ರ ಬೆಳಿಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ಬೂತ್ ಮಟ್ಟದಲ್ಲಿ ಲಸಿಕೆ ಹಾಕಲಾಗುತ್ತದೆ. ಇದಾದ ನಂತರ ಮೂರು ದಿನ ಮನೆಗಳಿಗೆ ಭೇಟಿ ನೀಡಲಾಗುವುದು. 2,912 ಲಸಿಕಾ ಕಾರ್ಯಕರ್ತರು, 146 ಮೇಲ್ವಿಚಾರಕರನ್ನು ನಿಯೋಜನೆ ಮಾಡಲಾಗಿದೆ' ಎಂದರು.

ನಗರದಲ್ಲಿ ಇಂದು

5ನೇ ಜಿಸಿಸಿ ಶೃಂಗಸಭೆ: ಉದ್ಘಾಟನೆ: ಮಂಜುಳಾ ಎನ್., ಉಪಸ್ಥಿತಿ: ಪ್ರಸನ್ನ ಕುಮಾರ್ ಡಿ., ಸಂಜೀವ್ ಸಂಘಿ, ಅಭಯ್ ಛಾಜೇದ್, ಮಧುಕರ್, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಬೆಂಗಳೂರು ಶಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಳಿಗ್ಗೆ 9.30

ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಉದ್ಘಾಟನೆ: ಅತಿಥಿಗಳು: ಮುರಳೀಧರ ಎ., ಪಾಲಾಡಿ ಸತೀಶ್, ಬಿ.ಆನಂದ್ ರಾವ್, ಅಧ್ಯಕ್ಷತೆ: ಗಾಳಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ದಯಾನಂದ ಸಾಗರ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಅಧ್ಯಕ್ಷತೆ: ಎಸ್.ವಿ. ರಮಣಮೂರ್ತಿ, ಅತಿಥಿಗಳು: ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಆನಂದ ಮಾದಲಗೆರೆ, ಆಯೋಜನೆ ಹಾಗೂ ಸ್ಥಳ: ಜಿ.ಟಿ.ಆರ್.ಇ. ಲಲಿತಕಲಾ ಸಂಘ, ಮಧ್ಯಾಹ್ನ 1

48ನೇ ಶಾಲಾ ವಾರ್ಷಿಕೋತ್ಸವ: ಅಧ್ಯಕ್ಷತೆ: ಆರ್. ಕೃಷ್ಣಪ್ಪ, ಉಪಸ್ಥಿತಿ: ಕೆ.ಎಸ್. ನಾಗರಾಜು, ಅತಿಥಿಗಳು: ಕೆ.ಜಿ. ಆಂಜಿನಪ್ಪ, ಕೆ.ರವಿ, ಪಿ.ಎಂ. ನಾರಾಯಣಸ್ವಾಮಿ, ಆಯೋಜನೆ: ಮಮತಾ ವಿದ್ಯಾ ಸಂಸ್ಥೆ, ಸ್ಥಳ: ಶಿರಡಿಸಾಯಿ ಮಂದಿರ, ಆನಂದನಗರ, ಗಂಗಾನಗರ, ಸಂಜೆ 4

'ಬೆಂಗಳೂರು ಮೂಲಸೌಕರ್ಯ' ವಿಚಾರಸಂಕಿರಣ: ಮಹೇಶ್ವರ ರಾವ್, ಎಲ್. ಕೆ. ಅತೀಕ್, ಉಮಾ ರೆಡ್ಡಿ, ನರೇಶ್ ನರಸಿಂಹನ್, ದಿನೇಶ್ ವರ್ಮಾ, ನಿರ್ವಹಣೆ: ಆರ್. ಗಾಯತ್ರಿ ಶೆಟ್ಟಿ, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಟೀರಿಯರ್ ಡಿಸೈನರ್ಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಸಂವಾದ: 'ಕನ್ನಡ **ಸಾಹಿತ್ಯ ಹಾಗೂ ಸಂಗೀತಗಳ ಸಂಬಂಧ'** ವಿಷಯದ ಬಗ್ಗೆ: ಎಲ್.ಜಿ. ಮೀರಾ, ಉಪಸ್ಥಿತಿ: ಶೋಭಾ ಶಶಿಕುಮಾರ್, ಆಯೋಜನೆ: ಚಿತ್ರನಾಟ್ಯ ಫೌಂಡೇಷನ್, ಸ್ಥಳ: ಕುಮಾರವ್ಯಾಸ ಮಂಟಪ, ಕನ್ನಡ ಸಹೃದಯರ ಪ್ರತಿಷ್ಠಾನ, ರಾಜಾಜಿನಗರ 4ನೇ ಬ್ಲಾಕ್, ಸಂಜೆ 5.30

‘ನಾನು ಸಿನಿಮಾ ಮಾಡಲ್ಲ ಎನ್ನುವುದು ಸುಳ್ಳು’

2006ರಲ್ಲಿ ಚಿತ್ರರಂಗಕ್ಕೆ ಹೆಜ್ಜೆ ಇಟ್ಟ ನಟಿ ಶರ್ಮಿಳಾ ಮಾಂಡ್ರೆ ಇದೀಗ ನಿರ್ಮಾಪಕಿಯಾಗಿಯೂ ಗುರುತಿಸಿಕೊಂಡಿದ್ದಾರೆ. ‘ಡೆವಿಲ್’ನಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿರುವ ಶರ್ಮಿಳಾ ತಮ್ಮ ಸಿನಿಪಯಣ, ಕನಸುಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ...

ಶರ್ಮಿಳಾಮಾಂಡ್ರೆ

• ಅಭಿಲಾಷ್ ಪಿ.ಎಸ್.

• **19 ವರ್ಷಗಳ ಸಿನಿಪಯಣದ ಅನುಭವ?**

ಈ ಸಿನಿಪಯಣ ಆರಾಮದಾಯಕವಾಗಿತ್ತು ಎನ್ನುವುದಕ್ಕೆ ಸಾಧ್ಯವಿಲ್ಲ. ಹಲವು ಏರುಪೇರುಗಳನ್ನು ಕಂಡಿದ್ದೇನೆ. ಕೆಲವು ಸಿನಿಮಾಗಳು ಚೆನ್ನಾಗಿ ಓಡಿದವು. ಕೆಲವು ಸೋತವು. ಸಾಲು ಸಾಲು ಸಿನಿಮಾ ಸಿಗುತ್ತಿದ್ದ ಕಾಲವೂ ಇತ್ತು. ಜೊತೆಗೆ ಒಂದೇ ಒಂದು ಸಿನಿಮಾವೂ ಸಿಗದ ಸಂದರ್ಭವೂ ಇತ್ತು. ಯಶಸ್ಸು–ಸೋಲಿನಲ್ಲಿ ಹಲವು ಪಾಠಗಳನ್ನು ಕಲಿತಿದ್ದೇನೆ. ಈ ರೀತಿ ಏರುಪೇರುಗಳೇ ಜೀವನ ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದೇನೆ. ಮಾಡಿದಂತಹ ಪಾತ್ರಗಳು ಹಾಗೂ ಸಿನಿಮಾಗಳ ಬಗ್ಗೆ ತೃಪ್ತಿಯಿದೆ.

ನಾನು ಸಿನಿಪಯಣ ಆರಂಭಿಸಿದ ಕಾಲಕ್ಕೂ ಈಗಿನ ಕಾಲಕ್ಕೂ ಬಹಳ ವ್ಯತ್ಯಾಸವಿದೆ. ಚಿತ್ರೀಕರಣದಿಂದ ಹಿಡಿದು ಪಾತ್ರಗಳ ಪೋಷಣೆಯವರೆಗೂ ಹಲವು ಬದಲಾವಣೆಗಳಾಗಿವೆ. ನಾವೊಂತರ ಲಕ್ಕಿ ಎನ್ನಬಹುದು. ಆಗ ಕ್ಯಾಮೆರಾ ಮುಂದೆ ತಪ್ಪು ಮಾಡಲು ಹೆಚ್ಚಿನ ಅವಕಾಶಗಳು ಇರಲಿಲ್ಲ. ಕ್ಯಾರವಾನ್ ಇರಲಿಲ್ಲ. ಹೀಗಾಗಿ ವೃತ್ತಿಪರರಾಗಿರುವುದನ್ನು, ಜೊತೆಗೂಡಿ ಕುಳಿತು ಚರ್ಚೆ ಮಾಡುವುದನ್ನು, ನಟನೆಯನ್ನು ಕಲಿತೆವು. ಆಗ ತಯಾರಿಯ ಅಗತ್ಯ ಬಹಳವಿತ್ತು. ಈಗಿನ ಹಾಗೆ ಹೆಚ್ಚು ಟೇಕ್‌ಗಳನ್ನು ಪಡೆಯುವ ಅವಕಾಶವೇ ಇರಲಿಲ್ಲ. ಈಗ ಶೂಟಿಂಗ್‌ಗೆ ಹೋದ ತಕ್ಷಣ ಎಲ್ಲರೂ ಪ್ರತ್ಯೇಕವಾಗಿ ಬಿಡುತ್ತೇವೆ. ಸಿನಿಮಾ ಶೂಟಿಂಗ್ ಎನ್ನುವುದು ಕಾರ್ಪೊರೇಟ್ ಕಚೇರಿ ಆಗಿಬಿಟ್ಟಿದೆ. ಸಂಭಾಷಣೆ ಹೇಳಿ ಕ್ಯಾರವಾನ್ ಹತ್ತುವುದು ರೂಢಿಯಾಗಿಬಿಟ್ಟಿದೆ.

• **ಸಿನಿಪಯಣದಲ್ಲಿ ಮಾಡಿಕೊಂಡ ಬದಲಾವಣೆ...**

ಒಂದು ಹಂತದಲ್ಲಿ ನಾನು ಪೂರ್ಣಪ್ರಮಾಣದಲ್ಲಿ ಸಿನಿಮಾ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದುಕೊಂಡಿದ್ದೆ. ಇದರ ಜೊತೆಗೆ ನಟನೆ ಕಷ್ಟವೆಂದೆನಿಸಿತ್ತು. ಹೀಗಾಗಿ ನಟನೆಯಿಂದ ಕೊಂಚ ಬ್ರೇಕ್ ಪಡೆದೆ. ಈ ನಡುವೆ ‘ಗಾಳಿಪಟ–2’ ಹಾಗೂ ‘ಪೌಡರ್’ ಸಿನಿಮಾ ಮಾಡಿದೆ. ಇದೀಗ ಮತ್ತೆ ನಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. ನಟನೆ ಮೇಲಿನ ಪ್ರೀತಿಯೇ ಮತ್ತೆ ಮತ್ತೆ ಸೆಳೆಯುತ್ತಿದೆ. ‘ಡೆವಿಲ್’ ರಿಲೀಸ್ ಆಗಿದೆ. ಶಿವರಾಜ್‌ಕುಮಾರ್ ಅವರ ಜೊತೆಗೆ ಎರಡನೇ ಸಿನಿಮಾ ಮಾಡುತ್ತಿದ್ದೇನೆ. ‘ಡ್ಯಾಡ್’ ಶೂಟಿಂಗ್ ಪ್ರಗತಿಯಲ್ಲಿದೆ. ಇದರ ಮೂರನೇ ಹಂತದ ಚಿತ್ರೀಕರಣ ಇತ್ತೀಚೆಗೆ ಮುಗಿಯಿತು. ಜನವರಿ ಒಳಗೆ ‘ಡ್ಯಾಡ್’ ಚಿತ್ರೀಕರಣ ಮುಗಿಯಲಿದ್ದು, ಮಾರ್ಚ್‌ಗೆ ರಿಲೀಸ್ ಮಾಡುವ ಯೋಚನೆಯಲ್ಲಿದ್ದಾರೆ. ಕಥೆಗಳನ್ನು ಕೇಳುತ್ತಿದ್ದೇನೆ. ನನಗೆ ಹತ್ತಾರು ಸಿನಿಮಾ ಮಾಡುವ ಅವಸರವಿಲ್ಲ. 2006ರಲ್ಲಿ ಚಿತ್ರರಂಗಕ್ಕೆ ನಾನು ಬಂದೆ. ನನ್ನ ಜೊತೆ ಬಂದವರೆಲ್ಲ ವರ್ಷಕ್ಕೆ ನಾಲ್ಕೈದು ಸಿನಿಮಾ ಮಾಡುತ್ತಿದ್ದರು. ನಾನು ಒಂದೆರಡು ಸಿನಿಮಾ ಮಾಡುತ್ತಿದ್ದೆ. ಹೀಗಿದ್ದರೂ ಈಗಲೂ ಸಿನಿಮಾ ಮಾಡುತ್ತಿದ್ದೇನೆ. ನಿಧಾನವೇ ಪ್ರಧಾನ ಎನ್ನುವುದು ನನ್ನ ಸಿನಿಪಯಣದಲ್ಲಿ ಕೆಲಸ ಮಾಡಿದೆ ಎನ್ನಬಹುದು.

‘ಶರ್ಮಿಳಾ’ ಸಿನಿಮಾ ಮಾಡಲ್ಲ ಎನ್ನುವ ಮಾತುಗಳು ಚಿತ್ರರಂಗದಲ್ಲಿ ಇದೆ. ಇದು ಸುಳ್ಳು. ಒಳ್ಳೆಯ ಕಥೆಗಳು, ಪಾತ್ರಗಳು ಬಂದರೆ ಖಂಡಿತಾ ಸಿನಿಮಾ ಮಾಡುತ್ತೇನೆ. ನಟನೆಗೆ ಹೆಚ್ಚಿನ ಪ್ರಾಮುಖ್ಯತೆ ಇರುವ ಪಾತ್ರಗಳನ್ನು ಮಾಡಬೇಕು ಎನ್ನುವುದು ನನ್ನ ಆಸೆ. ಆದರೆ ಇಲ್ಲಿಯವರೆಗೂ ನನ್ನೊಳಗಿನ ನಟನೆಯನ್ನು ಹೊರತೆಗೆಯುವಂಥ ಪಾತ್ರಗಳು ಬರಲಿಲ್ಲ ಎನ್ನುವ ಬೇಸರವಿದೆ.

• **ನಿರ್ಮಾಪಕಿಯಾಗಿ ಎದುರಿಸಿದ ಸವಾಲುಗಳು ಹಾಗೂ ಕಲಿತ ಪಾಠವೇನು?**

ಬಹಳ ಕಷ್ಟ ಅನುಭವಿಸಿದ್ದೇನೆ. ಮಹಿಳೆಯೊಬ್ಬಳ ಮಾತನ್ನು ಕೇಳಲು ಬಹಳ ಜನ ಇಷ್ಟಪಡುವುದಿಲ್ಲ. ಇವರಿಗೆ ಸಿನಿಮಾ ಬಗ್ಗೆ ಏನು ಗೊತ್ತು ಎಂಬ ಮಾತುಗಳನ್ನೂ ಕೇಳಿದ್ದೇನೆ. ಆದರೆ ಯೋಗರಾಜ್ ಭಟ್ ಸೇರಿದಂತೆ ಕೆಲವರು ಪ್ರೋತ್ಸಾಹ ನೀಡಿದ್ದಾರೆ. ಇಂಥ ಸಂದರ್ಭದಲ್ಲಿ ಬೆಂಬಲ ನೀಡುವ ಜನರೊಂದಿಗೆ ಕೆಲಸ ಮಾಡುವ ನಿರ್ಧಾರಕ್ಕೆ ಬಂದೆ. ‘ಡೆವಿಲ್’ನಲ್ಲಿ ನಿರ್ದೇಶಕ ಪ್ರಕಾಶ್ ಅವರ ಪತ್ನಿ ತಶ್ವಿನಿ ಕಾರ್ಯನಿರ್ವಾಹಕ ನಿರ್ಮಾಪಕಿಯಾಗಿ ಕೆಲಸ ಮಾಡಿದ್ದರು. ಅವರ ಕಾರ್ಯವೈಖರಿ ನೋಡಿ ಚಕಿತಳಾದೆ. ಅಷ್ಟು ದೊಡ್ಡ ಸೆಟ್‌ನಲ್ಲಿ ಪ್ರತಿ ದಿನ 400–500 ಜನರನ್ನು ನಿಭಾಯಿಸುತ್ತಿದ್ದರು. ಸೆಟ್‌ನಲ್ಲಿ ವೃತ್ತಿಪರತೆ ಇತ್ತು. ಹಿಂದಿ ಚಿತ್ರರಂಗದಲ್ಲೂ ಇದನ್ನು ನೋಡಿಲ್ಲ. ಇದಕ್ಕೆ ತಾಳ್ಮೆ ಅಗತ್ಯ.

ಸದ್ಯ ತಮಿಳಿನಲ್ಲಿ ಸಿನಿಮಾ ನಿರ್ಮಾಣ ಮಾಡುತ್ತಿದ್ದೇನೆ. ಕನ್ನಡದಲ್ಲೂ ಸಿನಿಮಾ ನಿರ್ಮಾಣದ ಕನಸು ಇದೆ. ಮೊದಲು ನಿರ್ದೇಶಕನನ್ನು ಆಯ್ಕೆ ಮಾಡಿ, ನಂತರ ಹೀರೊ ಆಯ್ಕೆ ಮಾಡಿ ಬಳಿಕ ಕಥೆ ಬರೆಯುತ್ತಿದ್ದೇವೆ. ಇದು ತಪ್ಪು. ಮೊದಲು ಕಥೆಯ ಆಯ್ಕೆಗೆ ಆದ್ಯತೆ ನೀಡಬೇಕು. ನಮ್ಮ ಬರಹಗಾರರಿಗೆ ಮೊದಲು ಬೆಲೆ ಕೊಡಬೇಕು. ಕನ್ನಡದಲ್ಲಿ ನನಗೆ ಕಥೆ ಒಪ್ಪಿಗೆಯಾದರೆ ಮುಂದಿನ ಹೆಜ್ಜೆ ಇಡುತ್ತೇನೆ. ಒಳ್ಳೆಯ ಕಥೆಗಳಿದ್ದರೆ ಖಂಡಿತವಾಗಿಯೂ ನನ್ನನ್ನು ಸಂಪರ್ಕಿಸಬಹುದು.

• **‘ಡೆವಿಲ್’ ಸಿನಿಮಾದಲ್ಲಿನ ಪಾತ್ರದ ಅವಧಿ ನೋಡಿದ್ರಾ ಅಥವಾ ಪಾತ್ರವನ್ನಷ್ಟೇ ನೋಡಿದ್ರಾ?**

ದೊಡ್ಡ ಸಿನಿಮಾಗಳಲ್ಲಿ ಪರಿಣಾಮಕಾರಿಯಾಗಿರುವ ಸಣ್ಣ ಅವಧಿಯ ಪಾತ್ರಗಳನ್ನು ಬರೆಯುವುದು ಟ್ರೆಂಡ್ ಆಗಿದೆ. ಪ್ಯಾನ್ ಇಂಡಿಯಾ ಸಿನಿಮಾಗಳಲ್ಲಿ ಪಾತ್ರಗಳು ರಾಶಿ ರಾಶಿ ಇರುತ್ತವೆ. ಇವುಗಳಿಗೆ ನಾಲ್ಕೈದು ದೃಶ್ಯಗಳಷ್ಟೇ ಇದ್ದರೂ ಪರಿಣಾಮಕಾರಿಯಾಗಿ ಇರುತ್ತವೆ. ಮಹಿಳಾ ಪ್ರಾಧಾನ್ಯ ಚಿತ್ರಗಳನ್ನೇಕೆ ಮಾಡುತ್ತಿಲ್ಲ, ಒಂದೆರಡು ದೃಶ್ಯಗಳಿರುವ ಸಿನಿಮಾಗಳನ್ನೇಕೆ ಮಾಡುತ್ತೀರಿ ಎಂದು ಕೆಲವರು ಕೇಳುತ್ತಿದ್ದರು. ಈ ಮೊದಲು ನಾನು ಕೇವಲ ನಟಿಯಾಗಿ ಸಿನಿಮಾ ಆಯ್ಕೆ ಮಾಡುತ್ತಿದ್ದೆ. 20ನೇ ವಯಸ್ಸಿನಲ್ಲಿದ್ದಾಗ ತೆರೆ ಅವಧಿಯನ್ನಷ್ಟೇ ಗಮನಿಸುತ್ತಿದ್ದೆ. ಇದೀಗ ಓರ್ವ ನಿರ್ಮಾಪಕಿಯಾಗಿ ಕೇವಲ ಸಿನಿಮಾ ನೋಡುತ್ತಿದ್ದೇನೆ. ನನ್ನ ಪಾತ್ರವನ್ನಷ್ಟೇ ಅಲ್ಲದೆ ಇಡೀ ಸಿನಿಮಾ ಹೇಗೆ ಸಾಗಲಿದೆ, ಪರಿಣಾಮಕಾರಿಯಾಗಿ ಮೂಡಿಬರಲಿದೆ ಎನ್ನುವುದನ್ನು ಗಮನಿಸುತ್ತಿದ್ದೇನೆ. ಜನರೂ ಒಳ್ಳೊಳ್ಳೆಯ ಕಾಂಟೆಂಟ್‌ಗಳನ್ನು ಎದುರು ನೋಡುತ್ತಿದ್ದಾರೆ. ‘ಡೆವಿಲ್’ ಸಿನಿಮಾ ಆಯ್ಕೆಗೂ ಇದೇ ಕಾರಣ. ನಾನು ಇದರಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡರೂ, ದೃಶ್ಯಗಳು ಬಹಳ ಪವರ್‌ಫುಲ್ ಆಗಿವೆ. ಹಿಂದೆಂದೂ ನಾನು ಇಂಥ ಪಾತ್ರ ಮಾಡಿಲ್ಲ.

ಭಿನ್ನ ಪಾತ್ರಗಳ ಹಪಹಪಿ: ಭಾವನಾ



ಭಾವನಾ

‘ಗಾಳಿಪಟ’ ಸಿನಿಮಾ ಮೂಲಕ ಮಿಂಚಿದ ನಟಿ ಭಾವನಾ ರಾವ್ ಬಳಿಕ ‘ಹೊಂದಿಸಿ ಬರೆಯಿರಿ’, ‘ಗ್ರೇ ಗೇಮ್ಸ್’ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದರು. ಇದೀಗ ಜಡೇಶ್ ಕೆ.ಹಂಪಿ ನಿರ್ದೇಶನದ ‘ಲ್ಯಾಂಡ್‌ಲಾರ್ಡ್’ ಸಿನಿಮಾ ಮೂಲಕ ಮತ್ತೆ ತೆರೆಗೆ ಬರುತ್ತಿದ್ದಾರೆ. ರಾಜ್ ಬಿ.ಶೆಟ್ಟಿ ಈ ಸಿನಿಮಾದಲ್ಲಿ ಖಳನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದು, ಭಾವನಾ ಅವರ ಜೋಡಿಯಾಗಿದ್ದಾರೆ.

ಸಿನಿಪಯಣದ ಕುರಿತು ಮಾತನಾಡಿದ ಭಾವನಾ, ‘ಗಾಳಿಪಟ’ ಸಿನಿಮಾದಲ್ಲಿ ‘ಪಾವನಿ’ ಎಂಬ ಪಾತ್ರದ ಮೂಲಕ ನಾನು ಚಿತ್ರರಂಗಕ್ಕೆ ಬಂದೆ. ಅಲ್ಲಿಂದ ಇಲ್ಲಿಯವರೆಗಿನ ಸಿನಿಪಯಣದಲ್ಲಿ ನನಗೆ ಯಾವುದೇ ವಿಷಾದವಿಲ್ಲ. ಆದರೆ ತೃಪ್ತಿ ಇಲ್ಲ ಎನ್ನಬಹುದು. ಭಿನ್ನವಾದ ಪಾತ್ರಗಳನ್ನು ನಿರಂತರವಾಗಿ ಮಾಡಬೇಕು ಎನ್ನುವ ಹಪಹಪಿಯಲ್ಲಿ ಸದಾ ಇರುತ್ತೇನೆ. ಈ ಪಯಣದಲ್ಲಿ ಹಲವು ವಿಷಯಗಳನ್ನು ಕಲಿತಿದ್ದೇನೆ’ ಎಂದರು.

‘ಲ್ಯಾಂಡ್‌ಲಾರ್ಡ್’ ಸಿನಿಮಾದಲ್ಲಿ ‘ಪದ್ಮ’ ಎಂಬ ಪಾತ್ರದಲ್ಲಿ ರಾಜ್ ಅವರ ಜೋಡಿಯಾಗಿ ನಟಿಸಿದ್ದೇನೆ. ಇದು ಪತ್ನಿಯಾಗಿಯೋ, ಪ್ರೇಯಸಿಯಾಗಿಯೋ ಎನ್ನುವುದನ್ನು ಸಿನಿಮಾದಲ್ಲೇ ನೋಡಬೇಕು. ಇದೊಂದು ಬಹಳ ಕಚ್ಚಾ ಲುಕ್‌ನಲ್ಲಿರುವ ಜಟಿಲವಾದ, ಸುಂದರ ಪಾತ್ರ. ಇದು ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯಲಿದೆ. ಎಲ್ಲರಂತೆ ಒಂದು ಸಿನಿಮಾದ ಪಾತ್ರದಿಂದಾಗಿ ಮೂರು ಹೊಸ ಸಿನಿಮಾಗಳು ಸಿಗಲಿ ಎನ್ನುವ ನಿರೀಕ್ಷೆ ನನಗೂ ಇದೆ. ಕೆಲವೊಮ್ಮೆ ನಿರೀಕ್ಷೆ ಅತಿಯಾಗಿ ಬೇಸರ ಉಂಟಾಗಿದ್ದೂ ಇದೆ. ಹಾಗಾಗಿ ಹೆಚ್ಚು ನಿರೀಕ್ಷೆಯನ್ನು ಹೊತ್ತು ಹೆಜ್ಜೆ ಇಡುವವಳು ನಾನಲ್ಲ’ ಎನ್ನುತ್ತಾರೆ ಭಾವನಾ.

‘ಸಿನಿಮಾದಲ್ಲಿ ದುನಿಯಾ ವಿಜಯ್ ಹಾಗೂ ರಾಜ್ ಅವರ ಪಾತ್ರಗಳು ಪ್ರಮುಖವಾಗಿದ್ದರೂ, ಜಡೇಶ್ ಎಲ್ಲಾ ಪಾತ್ರಗಳಿಗೂ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಸೆಟ್‌ನಲ್ಲಿ ರಾಜ್ ಅವರ ಜೊತೆ ದೈವಾರಾಧನೆ, ರಾಜಕೀಯ ಹೀಗೆ ಹಲವು ವಿಷಯಗಳ ಕುರಿತು ಚರ್ಚೆ ಮಾಡುತ್ತಿದ್ದೆ. ಎರಡು ದಿನಗಳ ಚಿತ್ರೀಕರಣದ ಬಳಿಕ ಈ ಸಿನಿಮಾ ಖಂಡಿತವಾಗಿಯೂ ಹಿಟ್ ಆಗಲಿದೆ ಎನ್ನುವ ಭಾವನೆ ನನ್ನಲ್ಲಿ ಮೂಡಿತ್ತು’ ಎಂದರು.

ಕುಡುಕರ ಕಥೆ ‘ಪಿಯೊಟ್’

ಅಶ್ವಿನಿ, ಲಿಖಿತ್

ಕಾರ್ತಿಕ್ ರಾಜನ್ ನಿರ್ದೇಶನದ, ಲಿಖಿತ್ ಎಂ.ಎನ್. ನಟಿಸಿರುವ ‘ಪಿಯೊಟ್’ ಸಿನಿಮಾ ಇಂದು (ಡಿ.12) ತೆರೆಕಂಡಿದೆ.

‘ಪಿಯೊಟ್ ಎಂದು ಬೈಯುತ್ತೇವೆ. ಇದೊಂದು ಲೇಬಲ್. ಕುಡುಕರನ್ನ ಪಿಯೊಟ್ ಎಂದು ಕರೆಯುತ್ತಾರೆ. ಚಿಕ್ಕ ವಯಸ್ಸಿನಿಂದಲೇ ಮದ್ಯಪಾನದ ಚಟ ಹತ್ತಿಸಿಕೊಂಡವರನ್ನು ನೋಡಿದ್ದೇನೆ. ಅವರನ್ನ ಅರ್ಥ ಮಾಡಿಕೊಳ್ಳುವುದಕ್ಕೂ ಪ್ರಯತ್ನ ಪಟ್ಟಿದ್ದೇನೆ. ಏಕೆ ಕುಡೀತಾರೆ, ಅವರಲ್ಲಿ ಏನು ನೋವಿದೆ, ಅದನ್ನೆಲ್ಲಾ ತೋರಿಸಬೇಕು ಎಂಬುದಕ್ಕೆ ಈ ವಿಷಯವನ್ನ ತೆಗೆದುಕೊಂಡೆವು’ ಎನ್ನುತ್ತಾರೆ ನಿರ್ದೇಶಕ ಕಾರ್ತಿಕ್.

‘ನಾನು ಸಿನಿಮಾದಲ್ಲಿ ಕುಡಿಯುವ ನಟನೆ ಮಾಡಿದ್ದೇನಷ್ಟೇ. ಮದ್ಯವರ್ಜನ ಶಿಬಿರಗಳಲ್ಲಿ ಚಿತ್ರೀಕರಣ ನಡೆಸಿದ್ದು ಒಂದು ಹೊಸ ಅನುಭವ. ಇಲ್ಲಿವರೆಗೂ ನನಗೆ ಕುಡಿಯೋದಕ್ಕೆ ಮನಸ್ಸೇ ಬಂದಿಲ್ಲ. ಮದ್ಯವನ್ನು ಮುಟ್ಟೇ ಇಲ್ಲ’ ಎಂದಿದ್ದಾರೆ ಲಿಖಿತ್. ಮರಾಠಿ, ಮಲಯಾಳ, ಹಿಂದಿ ಸಿನಿಮಾಗಳಲ್ಲಿ ನಟಿಸಿರುವ ಅಶ್ವಿನಿ ಚಾವರೆ ನಾಯಕಿಯಾಗಿದ್ದಾರೆ. ಇದು ಇವರ ಚೊಚ್ಚಲ ಕನ್ನಡ ಸಿನಿಮಾ.

ಕುತೂಹಲ ಉಳಿಸದ ಡೆವಿಲ್

ನಾವು ನೋಡಿದ ಸಿನಿಮಾ

ದಿ ಡೆವಿಲ್ (ಕನ್ನಡ)

- **ನಿರ್ಮಾಣ: ಜೆ.ಜಯಮ್ಮ**
- **ನಿರ್ದೇಶನ: ಪ್ರಕಾಶ್ ವೀರ್**
- **ತಾರಾಗಣ: ದರ್ಶನ್, ರಚನಾ ರೈ, ಮಹೇಶ್ ಮಂಜ್ರೇಕರ್, ಅಚ್ಯುತ್ ಕುಮಾರ್, ಗಿಲ್ಲಿ ನಟ, ಹುಲಿ ಕಾರ್ತಿಕ್, ಶೋಭರಾಜ್ ಮತ್ತಿತರರು.**

‘ಲೂಸಿಫರ್’, ‘ಒನ್’, ‘ಭರತ್ ಅನಿ ನೇನು’ ಹೀಗೆ ಮಲಯಾಳ, ತೆಲುಗು ಚಿತ್ರರಂಗದಲ್ಲಿ ಇತ್ತೀಚೆಗೆ ಪೂರ್ಣಪ್ರಮಾಣದ ಪೊಲಿಟಿಕಲ್ ಥ್ರಿಲ್ಲರ್ ಸಿನಿಮಾಗಳು ತೆರೆಕಂಡಿವೆ. ‘ಡೆವಿಲ್’ ಇದೇ ಜಾನರ್‌ನಲ್ಲಿದ್ದು, ಆಸಕ್ತಿಕರವಾದ ‘ಒನ್‌ಲೈನರ್’ ಹೊಂದಿದೆ. ಆದರೆ ಸಿನಿಮಾದ ಚಿತ್ರಕಥೆಯನ್ನು ಅಭಿಮಾನಿ ವರ್ಗಕ್ಕೆ ಸೀಮಿತ ಮಾಡಿರುವ ಕಾರಣ ದಾರಿ ತಪ್ಪಿದೆ. ಕುತೂಹಲ ಮೂಡಿಸಬೇಕಾಗಿದ್ದ ಸಿನಿಮಾದ ವಿಷಯ ಮೊದಲಾರ್ಧದಲ್ಲೇ ಕಥೆಯನ್ನು ಬಿಟ್ಟುಕೊಡುತ್ತದೆ.

‘ರಾಜಶೇಖರ್’ (ಮಹೇಶ್ ಮಂಜ್ರೇಕರ್) ‘ಕರುನಾಡು ಪ್ರಜಾ ಪಕ್ಷ’ದಿಂದ ಗೆದ್ದು ಮುಖ್ಯಮಂತ್ರಿ ಸ್ಥಾನದಲ್ಲಿರುವಾತ. ಆತನ ರಾಜಕೀಯ ಸಲಹೆಗಾರ ಅನಂತ್ ನಂಬಿಯಾರ್ (ಅಚ್ಯುತ್ ಕುಮಾರ್) ನಿವೃತ್ತ ಐಎಎಸ್ ಅಧಿಕಾರಿ. ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ರಾಜಶೇಖರ್ ಜೈಲು ಸೇರುವ ದೃಶ್ಯದ ಮುಖಾಂತರ ಕಥೆ ತೆರೆದುಕೊಳ್ಳುತ್ತದೆ. ಐಷಾರಾಮಿ ಆತಿಥ್ಯವಿರುವ ಜೈಲಿನೊಳಗಿದ್ದುಕೊಂಡೇ ರಾಜಶೇಖರ್ ವಿದೇಶದಲ್ಲಿರುವ ತನ್ನ ಮಗ ಧನುಷ್ ರಾಜಶೇಖರ್‌ನನ್ನು (ದರ್ಶನ್) ಸಿಎಂ ಕುರ್ಚಿಯಲ್ಲಿ ಕುಳ್ಳಿರಿಸುವಂತೆ ನಂಬಿಯಾರ್‌ಗೆ ಆದೇಶಿಸುತ್ತಾನೆ. ‘ಡೆವಿಲ್’ ಎಂದೇ ಕರೆಯಲ್ಪಡುವ ಧನುಷ್ ಆಸೆ ಪಟ್ಟಿದ್ದು ಸಿಗದೇ ಇದ್ದಾಗ ಕಿತ್ತುಕೊಳ್ಳುವ ವ್ಯಕ್ತಿತ್ವದವನು. ಈತನ ಭೇಟಿ ಬಳಿಕ ಗೊಂದಲದಲ್ಲೇ ದೇಶಕ್ಕೆ ಮರಳುವ ನಂಬಿಯಾರ್ ‘ಕೃಷ್ಣ ಮೆಸ್’ ನಡೆಸುವ ಬಾಣಸಿಗ ‘ಕೃಷ್ಣ’ನನ್ನು (ದರ್ಶನ್) ನೋಡುತ್ತಾನೆ. ಇಲ್ಲಿಂದ ಕಥೆ ತೆರೆದುಕೊಳ್ಳುತ್ತದೆ.

ಹೀರೊ ದ್ವಿಪಾತ್ರಗಳನ್ನು ನಿಭಾಯಿಸಿದ ಸಿನಿಮಾಗಳಲ್ಲಿ ಒಂದು ಪಾತ್ರವನ್ನು ಗೌಪ್ಯವಾಗಿ ಇಡುವುದು ಮುಖ್ಯವಾಗುತ್ತದೆ. ‘ಡೆವಿಲ್’ನಲ್ಲಿ ಥ್ರಿಲ್ಲರ್ ಅಂಶವನ್ನು ಮಧ್ಯಂತರದವರೆಗೂ ಕೊಂಡೊಯ್ಯುವ ಅವಕಾಶ ನಿರ್ದೇಶಕರಿಗಿತ್ತು. ಚಿತ್ರಕಥೆಯ ಕೊರತೆಯು ಆರಂಭದಲ್ಲೇ ದರ್ಶನ್ ದ್ವಿಪಾತ್ರವನ್ನು ಬಹಿರಂಗಗೊಳಿಸಿದೆ. ಇಲ್ಲೇ ಕುತೂಹಲ ಹೋಗುತ್ತದೆ. ಸಿದ್ಧಸೂತ್ರದಲ್ಲೇ ಸಿನಿಮಾ ಕಟ್ಟಿಕೊಡಲಾಗಿದ್ದು, ಅನಗತ್ಯ ಹಾಡು, ಫೈಟ್ ಸಿನಿಮಾದ ಒಟ್ಟು ಅವಧಿ ಹೆಚ್ಚಿಸಿದೆ. ಸಿನಿಮಾದ ಚಿತ್ರಕಥೆಯಲ್ಲಿ ಗಟ್ಟಿತನವಿಲ್ಲ. ಹೀಗಾಗಿ ಕಥೆಯಲ್ಲಿ ಮುಂದೇನಾಗುತ್ತದೆ ಎಂದು ಊಹಿಸಬಹುದು. ದರ್ಶನ್ ಹಿಂದಿನ ಸಿನಿಮಾ ‘ಕಾಟೇರ’ಕ್ಕೆ ಹೋಲಿಸಿದರೆ ನಟನೆಯನ್ನು ಹೊರತೆಗೆಯುವ ಪ್ರಯತ್ನವೇ ನಡೆದಿಲ್ಲ. ನಾಯಕನೇ ಖಳನಾಯಕನ ಪಾತ್ರದೊಳಗೂ ಇದ್ದಾಗ ಆಗುವ ತಾಂತ್ರಿಕ, ಸಾಮಾಜಕ್ಕೆ ಹೋಗುವ ಸಂದೇಶದ ಸಮಸ್ಯೆಯನ್ನೂ ಈ ಚಿತ್ರ ತೆರೆದಿಟ್ಟಿದೆ.

ನಟನಾಗುವ ಕನಸು ಹೊತ್ತ ‘ಕೃಷ್ಣ’ನಾಗಿ ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್‌ನಾಗ್ ಹಾಗೂ ಅಂಬರೀಷ್ ಅವರನ್ನು ದರ್ಶನ್ ಅನುಕರಣೆ ಮಾಡುವುದು ಚೆನ್ನಾಗಿದೆ. ರಚನಾ ರೈ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಗಿಲ್ಲಿ ನಟ ಒಂದೆರಡು ದೃಶ್ಯಕ್ಕೆ ಸೀಮಿತವಾಗಿದ್ದಾರೆ. ಎಲ್ಲರನ್ನೂ ಮನಸ್ಸೋಇಚ್ಛೆ ಶೂಟ್ ಮಾಡುವ ‘ಧನುಷ್’ ‘ಕೃಷ್ಣ’ನನ್ನೇಕೆ ಸುಡುವುದೇ ಇಲ್ಲ ಎನ್ನುವ ಪ್ರಶ್ನೆಯೂ ಉಳಿಯುತ್ತದೆ. ರಾಜಕೀಯ ವಿಷಯವನ್ನಿಟ್ಟುಕೊಂಡೇ ಸಿನಿಮಾ ಮಾಡಲಾಗಿದೆ. ಆದರೆ ಅದಕ್ಕೆ ತಕ್ಕ ಹಾಗೆ ಚಿತ್ರದ ಮೇಕಿಂಗ್ ಇಲ್ಲ. ರಾಜಕೀಯ ರ‍್ಯಾಲಿಗಳು, ಸಭೆಗಳ ದೃಶ್ಯಗಳು ಕೃತಕವಾಗಿವೆ. ರಾಜಕೀಯ ರ‍್ಯಾಲಿಯು ‘ಲೂಸಿಫರ್’ನಂತಿದ್ದರೂ ಅದರಷ್ಟು ಉತ್ಕೃಷ್ಟವಾಗಿ ಬಂದಿಲ್ಲ. ‘ಇದ್ರೆ ನೆಮ್ದಿಯಾಗ್ ಇರ್ಬೇಕು’ ಹಾಡು ಚೆನ್ನಾಗಿದೆ.

-ಅಭಿಲಾಷ್ ಪಿ.ಎಸ್.

ದರ್ಶನ್

ತೆರೆಗೆ ‘ಪದ್ಮಗಂಧಿ’

ಸುಚೇಂದ್ರ ಪ್ರಸಾದ

ಸುಚೇಂದ್ರ ಪ್ರಸಾದ ಚಿತ್ರಕಥೆ-ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ‘ಪದ್ಮಗಂಧಿ’ ಚಿತ್ರ ಇಂದು (ಡಿ.12) ಬಿಡುಗಡೆಯಾಗಿದೆ. ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಚಿತ್ರ ಸಿದ್ಧಗೊಂಡಿದ್ದು, ಹಿಂದಿಗೆ ಡಬ್ ಆಗಿದೆ. ಎಸ್.ಆರ್.ಲೀಲಾ ಪರಿಕಲ್ಪನೆ ಮತ್ತು ನಿರ್ಮಾಣ ಚಿತ್ರಕ್ಕಿದೆ.

‘ಚಿತ್ರದಲ್ಲಿ ಕಮಲದ ಹೂವಿನ ಬಗ್ಗೆಯೇ ಕಥೆ ಇದೆ. ಕಮಲ ಕುರಿತ ವಿಚಾರಗಳನ್ನು ಸಂಶೋಧಿಸಿ ಸನ್ನಿವೇಶಗಳಲ್ಲಿ ಕಟ್ಟಿಕೊಡಲಾಗಿದೆ. ಕಮಲಕ್ಕೆ 36 ಸಾವಿರಕ್ಕೂ ಹೆಚ್ಚು ಪರ್ಯಾಯ ನಾಮಗಳಿವೆ ಎನ್ನುವುದನ್ನು ಕೇಳಿ ಅಚ್ಚರಿಯಾಯ್ತು. ಪದ್ಮ ಸಂಬಂಧಿ ಎಂಬ ಅರ್ಥದಲ್ಲಿ ಈ ಸಿನಿಮಾ ಮಾಡಲಾಗಿದೆ’ ಎನ್ನುತ್ತಾರೆ ಸುಚೇಂದ್ರ ಪ್ರಸಾದ.

ವಿದ್ಯಾರ್ಥಿಯಾಗಿ ಮಹಾಪದ್ಮ, ಗುರುಮಾತೆ ಪಾತ್ರದಲ್ಲಿ ಉಡುಪಿಯ ಪರಿಪೂರ್ಣ ಚಂದ್ರಶೇಖರ್ ಇವರೊಂದಿಗೆ ಶತಾವಧಾನಿ ಆರ್. ಗಣೇಶ್, ಗೌರಿ ಸುಬ್ರಹ್ಮಣ್ಯ, ಪ್ರೇಮಾ, ಹೇಮಂತ್‌ಕುಮಾರ್, ಆಚಾರ್ಯ ಮೃತ್ಯುಂಜಯ ಶಾಸ್ತ್ರಿ, ಜಿ.ಎಲ್.ಭಟ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ. ಡಾ.ದೀಪಕ್ ಪರಮಶಿವನ್ ಸಂಗೀತ, ಮನು ಯಪ್ಲಾರ್-ನಾಗರಾಜ್ ಅದ್ವಾನಿ-ಗಿರಿಧರ್ ದಿವಾನ್ ಛಾಯಾಚಿತ್ರಗ್ರಹಣ, ಎನ್.ನಾಗೇಶ್ ನಾರಾಯಣಪ್ಪ ಸಂಕಲನವಿದೆ.

ಮಹಾಕವಿಯಲ್ಲಿ ಪಂಪನಾದ ಕಿಶೋರ್

ಕಿಶೋರ್

ನಿರ್ದೇಶಕ ಬರಗೂರು ರಾಮಚಂದ್ರಪ್ಪ ನಿರ್ದೇಶಿಸಿರುವ ‘ಮಹಾಕವಿ’ ಸಿನಿಮಾದ ಚಿತ್ರೀಕರಣ ಇತ್ತೀಚೆಗೆ ಮುಕ್ತಾಯಗೊಂಡಿದೆ.

ಬೆಳಗಾವಿಯ ಶ್ರೀ ಪ್ರಭು ಯತ್ನಟ್ಟಿಯವರು ಪಿ.ಆರ್. ಅಸೋಸಿಯೇಟ್ಸ್ ಸಂಸ್ಥೆಯ ಮೂಲಕ ಚಿತ್ರ ನಿರ್ಮಾಣಗೊಂಡಿದೆ. ‘ಮಹಾಕವಿ’ಯು ಬರಗೂರರ ನಿರ್ದೇಶನದ ಇಪ್ಪತ್ತೈದನೇ ಚಿತ್ರ. ‘ಈ ಚಿತ್ರವು ಕನ್ನಡದ ಆದಿಕವಿಯೆಂದೇ ಪ್ರಸಿದ್ಧನಾದ ಪಂಪನ ಕಾವ್ಯಗಳನ್ನು ಆಧರಿಸಿದೆ. ಇದು ಪಂಪನ ಜೀವನ ಚರಿತ್ರೆಯಲ್ಲ. ಪಂಪ ಮಹಾಕವಿಯು ತನ್ನ ಕಾವ್ಯಗಳಲ್ಲಿ ಪ್ರತಿಪಾದಿಸಿದ ಪರಿಕಲ್ಪನೆಗಳಿಗೆ ಕಥನರೂಪ ಕೊಡಲಾಗಿದೆ. ಪ್ರಭುತ್ವ ಮತ್ತು ಸೃಜನಶೀಲ ಸ್ವಾತಂತ್ರ್ಯವನ್ನು ಕುರಿತ ಪಂಪನ ಪರಿಕಲ್ಪನೆಯು ಇಂದಿಗೂ ಪ್ರಸ್ತುತವಾಗಿದೆ. ಅಂತೆಯೇ ಕನ್ನಡ ಸಾಹಿತ್ಯದಲ್ಲಿ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಮೊಟ್ಟಮೊದಲ ಕವಿ. ಇಂತಹ ಪರಿಕಲ್ಪನೆಗಳಿಗೆ ಪ್ರತೀಕವಾಗುವಂತೆ ಈ ಚಿತ್ರವನ್ನು ರೂಪಿಸಲಾಗಿದೆ’ ಎಂದಿದ್ದಾರೆ ಬರಗೂರು ರಾಮಚಂದ್ರಪ್ಪ.

ಪಂಪ ಮಹಾಕವಿಯ ಕೆಲವು ಪದ್ಯಗಳನ್ನು ಚಿತ್ರದಲ್ಲಿ ಬಳಸಿದ್ದು, ಒಂದು ಗೀತೆಯನ್ನು ಬರಗೂರು ಅವರು ರಚಿಸಿದ್ದಾರೆ. ಜೊತೆಗೆ ಚಿತ್ರಕಥೆ, ಸಂಭಾಷಣೆಯೂ ಅವರದ್ದೇ. ಪಂಪನ ಪಾತ್ರದಲ್ಲಿ ನಟ ಕಿಶೋರ್ ಅಭಿನಯಿಸಿದ್ದಾರೆ. ‘ಬಿಗ್‌ಬಾಸ್’ ಖ್ಯಾತಿಯ ಅನುಷಾ ರೈ ನಾಯಕಿಯ ಪಾತ್ರದಲ್ಲಿದ್ದಾರೆ. ಬಾಲಕ ಪಂಪನ ಪಾತ್ರವನ್ನು ಆಕಾಂಕ್ಷ್ ಬರಗೂರು ವಹಿಸಿದ್ದು, ಸುಂದರ್ ರಾಜ್, ಪ್ರಮೀಳಾ ಜೋಷಾಯ್, ಕುಮಾರ್ ಗೋವಿಂದ್ ಮತ್ತಿತರರು ತಾರಾಬಳಗದಲ್ಲಿದ್ದಾರೆ. ಸುರೇಶ್ ಅರಸು ಸಂಕಲನ, ನಾಗರಾಜ ಆದವಾನಿ ಛಾಯಾಚಿತ್ರಗ್ರಹಣ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ತ್ರಿಭುವನ್ ನೃತ್ಯ ನಿರ್ದೇಶನ, ಹೊಸ್ಮನೆ ಮೂರ್ತಿ ಕಲಾ ನಿರ್ದೇಶನ ಸಿನಿಮಾಗಿದೆ.

ತಂದೆ–ಮಗಳ ಪಯಣದ ‘ಲವ್ ಮಾಕ್ಟೇಲ್–3’

ಲವ್ ಮಾಕ್ಟೇಲ್–3

ಡಾರ್ಲಿಂಗ್ ಕೃಷ್ಣ, ಸಂವೃತಾ

2020ರಲ್ಲಿ ತೆರೆಕಂಡ ‘ಲವ್ ಮಾಕ್ಟೇಲ್’ ಸಿನಿಮಾ ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ಮಿಲನಾ ನಾಗರಾಜ್ ಸಿನಿಪಯಣಕ್ಕೆ ದೊಡ್ಡ ತಿರುವು ನೀಡಿತ್ತು. ಈ ಸಿನಿಮಾದ ಯಶಸ್ಸು ‘ಲವ್ ಮಾಕ್ಟೇಲ್’ ಸರಣಿಗೆ ಕಾರಣವಾಯಿತು. 2022ರಲ್ಲಿ ರಿಲೀಸ್ ಆದ ಸಿನಿಮಾದ ಸೀಕ್ವೆಲ್ ‘ಲವ್ ಮಾಕ್ಟೇಲ್–2’ ಕೂಡಾ ಯಶಸ್ವಿಯಾಯಿತು. ಇದೀಗ ಮೂರನೇ ಭಾಗ ತೆರೆಗೆ ಬರಲು ಸಜ್ಜಾಗುತ್ತಿದೆ. 2026ರಲ್ಲಿ ಈ ಸಿನಿಮಾ ರಿಲೀಸ್ ಆಗಲಿದೆ.

ಇತ್ತೀಚೆಗೆ ಸಿನಿಮಾದ ಫಸ್ಟ್‌ಲುಕ್ ಹಾಡೊಂದನ್ನು ಡಾರ್ಲಿಂಗ್ ಕಷ್ಣ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದು, ನಿರ್ದೇಶಕ ಶಶಾಂಕ್ ಬರೆದ ಸಾಹಿತ್ಯಕ್ಕೆ ಸಂಗೀತ ನಿರ್ದೇಶಕ ನಕುಲ್ ಅಭ್ಯಂಕರ್ ದನಿಯಾಗಿದ್ದಾರೆ.

ಅಪ್ಪ–ಮಗಳ ಭಾವನಾತ್ಮಕ ಕಥೆ

ಸಿನಿಮಾ ಕುರಿತು ಮಾತನಾಡಿದ ಡಾರ್ಲಿಂಗ್ ಕೃಷ್ಣ, ‘ಲವ್ ಮಾಕ್ಟೇಲ್ ಸಿನಿಮಾದ ಆಯಾ ಭಾಗಗಳ ಪೋಸ್ಟರ್‌ಗಳನ್ನು ನೋಡಿದರೇ ಸಿನಿಮಾದ ಕಥೆಯನ್ನು ಊಹಿಸಬಹುದು. ಮೊದಲೆರಡು ಸಿನಿಮಾಗಳ ಜಾನರ್ ಬೇರೆ ಬೇರೆಯದ್ದಾಗಿತ್ತು. ಒಂದನೇ ಭಾಗ ‘ಕಮಿಂಗ್ ಆಫ್ ಏಜ್’ ವಿಭಾಗದಲ್ಲಿತ್ತು. ಎಂದರೆ ಯುವ ಪಾತ್ರಗಳೇ ಹೆಚ್ಚಾಗಿತ್ತು. ಎರಡನೇ ಭಾಗ ಭಾವನಾತ್ಮಕ ಕಥೆಯನ್ನೊಳಗೊಂಡಿತ್ತು. ಮೂರನೇ ಭಾಗದಲ್ಲಿ ಅಪ್ಪ–ಮಗಳ ಕಥೆಯಿದೆ. ಅವರ ನಡುವಿನ ಭಾವನಾತ್ಮಕ ಸವಾರಿಯ ಕಥನವಿದು. ಇದು ‘ಆದಿ’ಯ ಪಯಣವೂ ಹೌದು. ಎರಡನೇ ಭಾಗದ ಕ್ಲೈಮ್ಯಾಕ್ಸ್‌ನಲ್ಲಿ ಬರುವ ದತ್ತು ಮಗಳ ಪಾತ್ರ ಇಲ್ಲಿ ಮುಂದುವರಿದಿದೆ. ಮಗಳಾಗಿ ಸಂವೃತಾ ನಟಿಸಿದ್ದಾಳೆ’ ಎಂದರು.

‘ಬೆಂಗಳೂರು, ಮೈಸೂರು, ಕಛ್, ಜೋಧ್‌ಪುರ್, ಜೈಸಲ್ಮೇರ್, ಅಂಡಮಾನ್, ಜಾರ್ಜಿಯಾದಲ್ಲಿ ಚಿತ್ರದ ಶೂಟಿಂಗ್ ನಡೆದಿದೆ. ಜನವರಿ–ಫೆಬ್ರುವರಿಯಲ್ಲಿ ಮೊದಲೆರಡು ಭಾಗಗಳು ತೆರೆಕಂಡಿದ್ದವು. ಇದು ನಮ್ಮ ಲಕ್ಕಿ ತಿಂಗಳು. ಆದರೆ ಮೂರನೇ ಭಾಗದ ಬಿಡುಗಡೆ ಬಗ್ಗೆ ಇನ್ನೂ ನಿರ್ಧರಿಸಿಲ್ಲ. ಅಪ್ಪ–ಮಗಳ ಕಥೆಯಾಗಿರುವ ಕಾರಣ ಇಡೀ ಕುಟುಂಬ ಜೊತೆಯಾಗಿ ಈ ಸಿನಿಮಾ ನೋಡಬೇಕು. ಫೆಬ್ರುವರಿಯಲ್ಲಿ ಪರೀಕ್ಷೆಗಳು ಇರುವ ಕಾರಣ ಪೋಷಕರು ಮಕ್ಕಳನ್ನು ಓದಿಸುವುದರಲ್ಲಿ ತಲ್ಲೀನರಾಗಿರುತ್ತಾರೆ. ಹೀಗಾಗಿ ರಿಲೀಸ್ ದಿನಾಂಕದ ಬಗ್ಗೆ ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ’ ಎನ್ನುತ್ತಾರೆ ಕೃಷ್ಣ.

ಸಿನಿಮಾದ ಆಡಿಯೊ ಹಕ್ಕುಗಳನ್ನು ಆನಂದ್ ಆಡಿಯೊ ಖರೀದಿಸಿದೆ. ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್ ಜೊತೆಗೂಡಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಯಶ್

ಮಾರ್ಚ್ 19ಕ್ಕೇ ಟಾಕ್ಸಿಕ್

ಯಶ್ ನಟನೆಯ 19ನೇ ಸಿನಿಮಾ ‘ಟಾಕ್ಸಿಕ್’ ಸಿನಿಮಾ ಬಿಡುಗಡೆಗೆ ದಿನಗಣನೆ ಆರಂಭವಾಗಿದೆ. ಸಿನಿಮಾ ಬಿಡುಗಡೆಗೆ ಇನ್ನು 98 ದಿನಗಳಷ್ಟೇ ಬಾಕಿ ಇದ್ದು, 2026ರ ಮಾರ್ಚ್ 19ರಂದೇ ಸಿನಿಮಾ ತೆರೆಗೆ ಬರಲಿದೆ.

ತಮ್ಮ ಪಾತ್ರದ ಹೊಸ ಫೋಟೋವನ್ನು ಇನ್‌ಸ್ಟಾಗ್ರಾಂನಲ್ಲಿ ಯಶ್ ಪೋಸ್ಟ್ ಮಾಡಿದ್ದಾರೆ. ಗೀತು ಮೋಹನ್‌ದಾಸ್ ನಿರ್ದೇಶನದ ಈ ಸಿನಿಮಾ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಂಡಿದೆ. ಹಾಲಿವುಡ್‌ನ ಜೆ.ಜೆ. ಪೆರ್ರಿ ‘ಟಾಕ್ಸಿಕ್’ನ ಸಾಹಸ ದೃಶ್ಯಗಳ ಸಂಯೋಜನೆ ಮಾಡಿದ್ದಾರೆ. ಚಿತ್ರಕ್ಕೆ ಸಂಗೀತ ನಿರ್ದೇಶನ ಯಾರದ್ದು ಎನ್ನುವ ಪ್ರಶ್ನೆಗೂ ಉತ್ತರ ದೊರಕಿದ್ದು, ‘ಕೆ.ಜಿ.ಎಫ್’ ಖ್ಯಾತಿಯ ರವಿ ಬಸ್ರೂರು ಅವರೇ ಸಂಗೀತ ನಿರ್ದೇಶನ ಮಾಡಲಿದ್ದಾರೆ. ರಾಜೀವ್ ರವಿ ಛಾಯಾಚಿತ್ರಗ್ರಹಣ, ಉಜ್ವಲ್ ಕುಲಕರ್ಣಿ ಸಂಕಲನ, ಟಿಪಿ ಅಬಿದ್ ನಿರ್ಮಾಣ ವಿನ್ಯಾಸ ಚಿತ್ರಕ್ಕಿದೆ. ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣ ಮಾಡುತ್ತಿದೆ.

ಸೇನೆ ಜತೆ ಆಕಾಶ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇನೆಯಲ್ಲಿ ಕಾರ್ಯ ನಿರ್ವಹಿಸುವ ಮತ್ತು ನಿವೃತ್ತ ಸಿಬ್ಬಂದಿಯ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ನೆರವಾಗುವ ಉದ್ದೇಶದಿಂದ ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್ ಭಾರತೀಯ ಸೇನೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದದ ಪ್ರಕಾರ ಸೈನಿಕರು ಸೇವೆಯಲ್ಲಿ ಇದ್ದಾಗ ಹುತಾತ್ಮರಾದರೆ, ಅವರ ಮಕ್ಕಳಿಗೆ ಶುಲ್ಕಗಳಲ್ಲಿ ಶೇ 100ರಷ್ಟು ವಿನಾಯಿತಿ ನೀಡಲಾಗುತ್ತದೆ. ಕೇವಲ ನೋಂದಣಿ ಶುಲ್ಕವನ್ನು ಪಡೆಯಲಾಗುತ್ತದೆ ಎಂದು ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್‌ನ ಶೈಕ್ಷಣಿಕ ಮುಖ್ಯಸ್ಥ ಧೀರಜ್ ಮಿಶ್ರಾ ಅವರು ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಮಕ್ಕಳ ಶಿಕ್ಷಣದ ಗುಣಮಟ್ಟ ಸುಧಾರಣೆ, ಸ್ಪರ್ಧಾತ್ಮಕ ಪರೀಕ್ಷೆಗೆ ಅವರನ್ನು ಸಜ್ಜುಗೊಳಿಸುವ ಕಾರ್ಯದಲ್ಲಿ ತೊಡಗಿರುವ ಆಕಾಶ್, ದೇಶದಾದ್ಯಂತ 400ಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದೆ. ಆ ಕೇಂದ್ರಗಳಲ್ಲಿ ಸೇನೆಯ ಸಿಬ್ಬಂದಿಯ ಮಕ್ಕಳಿಗೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ ಎಂದರು.

ಸಿಬ್ಬಂದಿ ಶೇ 20ಕ್ಕಿಂತ ಹೆಚ್ಚು ಅಂಗವೈಕಲ್ಯಕ್ಕೆ ಒಳಗಾಗಿದ್ದರೆ, ಶೌರ್ಯ ಪ್ರಶಸ್ತಿ ಪಡೆದಿದ್ದರೆ ಅವರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ಶೇ 100ರಷ್ಟು ವಿನಾಯಿತಿ ಸಿಗಲಿದೆ. ಅಲ್ಲದೆ ಸೇವೆಯಲ್ಲಿರುವ ಮತ್ತು ನಿವೃತ್ತ ಸಿಬ್ಬಂದಿಯ ಮಕ್ಕಳಿಗೆ ವಿದ್ಯಾರ್ಥಿವೇತನದ ಜೊತೆಗೆ ಬೋಧನಾ ಶುಲ್ಕದಲ್ಲಿ ಶೇ 20ರಷ್ಟು ವಿನಾಯಿತಿ ನೀಡಲಾಗುತ್ತದೆ.

ಮಕ್ಕಳ ಉಜ್ವಲ ಭವಿಷ್ಯಕ್ಕೆ ಶಿಕ್ಷಣವು ಬಲವಾದ ಅಡಿಪಾಯವಾಗಿದೆ. ಸೈನಿಕರ ತ್ಯಾಗವನ್ನು ಗೌರವಿಸಲು, ಅವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಮಾರ್ಗದರ್ಶನ ನೀಡಲು ಸೇನೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. 8ರಿಂದ 12ನೇ ತರಗತಿವರೆಗಿನ ಮಕ್ಕಳಿಗೆ ಇದರಿಂದ ಅನುಕೂಲವಾಗಲಿದೆ ಎಂದು ಅವರು ತಿಳಿಸಿದರು.

ಅರ್ಜಿ ಆಹ್ವಾನ

ಬೆಂಗಳೂರು: ವಾಗ್ದೇವಿ ಟ್ರಸ್ಟ್ ನೀಡುವ ಡಾ. ಶಾಂತಾ ರಾಧಾಕೃಷ್ಣ ದತ್ತಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

ವೃತ್ತಿಪರ ಶಿಕ್ಷಣ, ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಶ್ರವಣದೋಷವುಳ್ಳ ವಿದ್ಯಾರ್ಥಿಗಳು, ಶ್ರವಣ ನ್ಯೂನತೆ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ವಾಕ್ ಶ್ರವಣ ತಜ್ಞರು, ವಿಶೇಷ ಶಿಕ್ಷಕರು ಡಿ. 20ರೊಳಗೆ vagdevitrust@gmail.com ಇ-ಮೇಲ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜ್ಞಾನಭಾರತಿ ಟ್ರಸ್ಟ್‌ನಿಂದ 13 ದಿನ ನಾಟಕೋತ್ಸವ

ನೆಲಮಂಗಲ: ರಾಜ್ಯದಾದ್ಯಂತ ವಿವಿಧ ನಾಟಕ ಮಂಡಳಿಗಳನ್ನು ಒಗ್ಗೂಡಿಸಿ, 13 ದಿನಗಳ ನಿರಂತರ ನಾಟಕೋತ್ಸವವನ್ನು ಜ್ಞಾನಭಾರತಿ ಚಾರಿಟಬಲ್ ಟ್ರಸ್ಟ್ ಹಮ್ಮಿಕೊಂಡಿದೆ.

‘ಒಂದು ನಾಟಕ ಪ್ರದರ್ಶನಕ್ಕೆ ಲಕ್ಷಾಂತರ ರೂಪಾಯಿ ವ್ಯಯವಾಗುತ್ತದೆ. ಅಂತಹದ್ದರಲ್ಲಿ ನಿರಂತರ 13 ನಾಟಕಗಳ ಪ್ರದರ್ಶನ ಸಾಹಸವೇ ಸರಿ’ ಎಂದು ಶಿವಗಂಗೆ ಮೇಲಣಗವಿ ಮಠದ ಮಲಯ ಶಾಂತಮುನಿ ದೇಶೀಕೇಂದ್ರ ಶ್ರೀಗಳು ಶ್ಲಾಘಿಸಿದರು.

ಪಟ್ಟಣದ ಕೆಇಬಿ ಎದುರು ಜ್ಞಾನ ಭಾರತಿ ಚಾರಿಟಬಲ್ ಟ್ರಸ್ಟ್ ನಿರ್ಮಿಸಿರುವ ಬಯಲು ‘ರಂಗಸಜ್ಜಿಕೆ’ ವೇದಿಕೆಯಲ್ಲಿ 12ನೇ ದಿನದ ‘ಶ್ರೀಕೃಷ್ಣ ಸಂಧಾನ’ ನಾಟಕಕ್ಕೆ ಚಾಲನೆನೀಡಿದರು.

ಕರ್ನಾಟಕ ಸಾಂಸ್ಕೃತಿಕ ಸಂಘ ಸಂಸ್ಥೆಗಳ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ವೀರೇಶ್ ಪ್ರಸಾದ್ ಮಾತನಾಡಿ, ‘ಕಲಾವಿದರಿಗೆ ಜೀವನ ಭದ್ರತೆ ಇಲ್ಲ. ಸರ್ಕಾರದ ವಿವಿಧ ಯೋಜನೆಗಳಲ್ಲಿ ಕಲಾವಿದರಿಗೂ ಮೀಸಲಾತಿ ಕಲ್ಪಿಸಲು ಹೋರಾಟದ ಅಗತ್ಯ ಇದೆ’ ಎಂದರು.

ಜ್ಞಾನಭಾರತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಆರ್.ರಂಗನಾಥ್ ಸಂಪಾದಕತ್ವದ ‘ಹಂಸೆ’ ಹಾಗೂ ಜಿ.ಆರ್.ಕೃಷ್ಣಮೂರ್ತಿ ಸಂಪಾದಕತ್ವದ ‘ವಿಬಿ’ ಟಿವಿ ವಾಹಿನಿಗಳಿಗೆ ಚಾಲನೆ ನೀಡಲಾಯಿತು. ರಾಷ್ಟ್ರೀಯ ಕಿಸಾನ್ ಸಂಘಟನೆ ರಾಜ್ಯ ಉಪಾಧ್ಯಕ್ಷ ಭೀಮಯ್ಯ, ‘ಡಿಜಿಟಲ್ ವಾರ್ತೆ’ ಸಂಪಾದಕ ಡಿ.ಆರ್.ಅಭಿಷೇಕ್, ಆ ದಿನಗಳು ಪತ್ರಿಕೆಯ ಭಾನುಪ್ರಕಾಶ್ ಉಪಸ್ಥಿತರಿದ್ದರು. ಲೇಖಕರಾದ ಮಾಧುರಿ ದೇಶಪಾಂಡೆ, ರೇಣುಕಾ ಪ್ರಸಾದ್, ಕಲಾವಿದ ಕೃಷ್ಣಪ್ಪ, ರೈತ ಬಸವರಾಜು, ಉಪನ್ಯಾಸಕ ಗಂಗರಾಜು ಅವರನ್ನು ಸನ್ಮಾನಿಸಲಾಯಿತು.

ಜ್ಞಾನಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ ‘ಶ್ರೀಕೃಷ್ಣ ಸಂಧಾನ’ ನಾಟಕ

ಕೆಎಸ್ಐಐಡಿಸಿ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ)
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
“ಖನಿಜ ಭವನ”, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.

“ಬೆಂಗಳೂರಿನ ಸಮೀಪ 2ನೇ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲು ಸ್ಥಳದ ಅನುಕೂಲ ಮತ್ತು ತಾಂತ್ರಿಕ ಅಂಶಗಳ ವಿವರವಾದ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ವೃತ್ತಿಪರ ಸಲಹಾ ಸಂಸ್ಥೆಯ ಆಯ್ಕೆಗಾಗಿ” ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ), ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ಬೆಂಗಳೂರಿನ ಸಮೀಪ 2ನೇ ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸಲು ಸ್ಥಳದ ಅನುಕೂಲ ಮತ್ತು ತಾಂತ್ರಿಕ ಅಂಶಗಳ ವಿವರವಾದ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ವೃತ್ತಿಪರ ಸಲಹಾ ಸಂಸ್ಥೆಯ ಆಯ್ಕೆಗಾಗಿ ಅರ್ಹ ಕಂಪನಿಗಳು/ಸಂಸ್ಥೆಗಳು/ಮಾಲೀಕತ್ವದ ಸಂಸ್ಥೆಗಳು/ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಇಲ್ಲಿಂದ ಪಡೆದುಕೊಳ್ಳಬಹುದು. ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು **12.12.2025ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ: 22.12.2025 ರಂದು ಬೆಳಿಗ್ಗೆ 11.30 ಗಂಟೆಗೆ. ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕಡೆಯ ದಿನಾಂಕ: 12.01.2026 ರಂದು ಸಂಜೆ 5:30 ಗಂಟೆಯವರೆಗೆ.**

ಹೆಚ್ಚಿನ ವಿವರಗಳನ್ನು ಕೆಎಸ್ಐಐಡಿಸಿ ಕಚೇರಿಯಿಂದ ಕಚೇರಿ ಕೆಲಸದ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಿಂದ ಪಡೆಯಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ಮುಂದಿನ ಬದಲಾವಣೆ, ತಿದ್ದುಪಡಿಗಳಿದ್ದರೆ ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಪ್ರಕಟಪಡಿಸಲಾಗುವುದು.

ಸಂಪರ್ಕ ಸಂಖ್ಯೆ: ಎಜಿಎಂ (ಐಪಿಡಿ–1)–080–22255740/9845520837
ಇ–ಮೇಲ್: bic3@ksiidc.com ಮತ್ತು info@ksiidc.com

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು,
ಕೆಎಸ್ಐಐಡಿಸಿ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ.



PARTICIPANTS

TATA MOTORS PASSENGER VEHICLES | SAPTAGIRI SUZUKI | mahindra | VIVA TOYOTA | K.H.T Prime CITROEN

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಜೀವನೋಪಾಯ ಅಭಿಯಾನ - ಕರ್ನಾಟಕ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆ, ಬೆಳಗಾವಿ
ಇವರ ಸಹಯೋಗದೊಂದಿಗೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನಮ್ಮ ಸರಸ್ ಮೇಳ 2025

ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವರಾದ ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ ರವರು ಇಲಾಖಾ ಪ್ರಗತಿ ಸಭೆಯಲ್ಲಿ ಪಾಲ್ಗೊಂಡಿರುವುದು.

ಮಾನ್ಯ ಲೋಕೋಪಯೋಗಿ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸತೀಶ ಲ. ಜಾರಕಿಹೊಳಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

ರಾಜ್ಯ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ

ಮಹಿಳಾ ಸ್ವ-ಸಹಾಯ ಗುಂಪುಗಳ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ

12 ಡಿಸೆಂಬರ್, 2025 ರಿಂದ 21 ಡಿಸೆಂಬರ್, 2025 ರ ವರೆಗೆ
ಸಮಯ : ಬೆಳಿಗ್ಗೆ 10:30 ರಿಂದ ರಾತ್ರಿ 9.30 ರವರೆಗೆ | ಸ್ಥಳ : ಸರ್ದಾರ್ ಹೈಸ್ಕೂಲ್ ಮೈದಾನ, ಬೆಳಗಾವಿ

ಬನ್ನಿ ಮಹಿಳಾ ಉದ್ಯಮಶೀಲತೆಯನ್ನು ಸಂಭ್ರಮಿಸೋಣ ಮತ್ತು ಬೆಂಬಲಿಸೋಣ

100 ಮಳಿಗೆಗಳು – ಮಹಿಳಾ ಸ್ವಸಹಾಯ ಸಂಘಗಳಿಂದ ತಯಾರಿಸಲಾದ ಕರಕುಶಲ ವಸ್ತುಗಳು
ಆಹಾರ ಮಳಿಗೆಗಳು – ಒಂದೇ ಸೂರಿನಡಿ ದೇಶದ ಖಾದ್ಯಗಳನ್ನು ಸವಿಯೋಣ
ನೃತ್ಯ ವೈಭವ – ಸಾಂಪ್ರದಾಯಿಕ ಹಾಗೂ ಸಮಕಾಲೀನ ನೃತ್ಯ ಪ್ರದರ್ಶನಗಳು
ತಾರಾ ಮೆರುಗು – ಖ್ಯಾತ ಕಲಾವಿದರಿಂದ ಸುಮಧುರ ಗಾಯನ ಸಂಗೀತ ಕಛೇರಿಗಳು

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನಮ್ಮ ಕರ್ನಾಟಕ; ಗ್ಯಾರಂಟಿ ಕರ್ನಾಟಕ

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ – 10 kg | ಗೃಹಜ್ಯೋತಿ – ಪ್ರತಿ ಮನೆಗೆ 200 | ಗೃಹಲಕ್ಷ್ಮಿ – ₹2000 | ಯುವನಿಧಿ – ₹3000 | ₹1500

ಸರ್ವರಿಗೂ ಆದರದ ಸುಸ್ವಾಗತ

ಪ್ರತ್ಯೇಕ ರಾಜ್ಯದ ಕೂಗೆಬ್ಬಿಸಿದ ರಾಜು ಕಾಗೆ

‘ಉತ್ತರ ಕರ್ನಾಟಕಕ್ಕೆ ನ್ಯಾಯ ಸಿಕ್ಕಿಲ್ಲ’ ● ‘ಪ್ರತಿಯೊಂದಕ್ಕೂ ನಾವು ಬೆಂಗಳೂರಿಗೆ ಹೋಗುವುದಕ್ಕೆ ಆಗುವುದಿಲ್ಲ’

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘ಯಾವುದೇ ಸಂಘ– ಸಂಸ್ಥೆಗಳು, ಸಂಘಟನೆಗಳು ಮತ್ತು ಯಾರು ಏನೇ ಹೇಳಲಿ, ತಲೆ ಕೆಡಿಸಿಕೊಳ್ಳದೇ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ರಚನೆಗೆ ಹೋರಾಟ ಮಾಡುತ್ತೇನೆ’ ಎಂದು ಕಾಂಗ್ರೆಸ್‌ನ ರಾಜು ಕಾಗೆ ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ಉತ್ತರ ಕರ್ನಾಟಕ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಪ್ರತ್ಯೇಕ ರಾಜ್ಯ ಮಾಡಬೇಕು ಎಂಬುದರ ಕುರಿತಾಗಿ ಪ್ರಧಾನಮಂತ್ರಿ ಮತ್ತು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೇನೆ. ಈಗಲೂ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದರು.

‘ನೀರಾವರಿ, ಶಿಕ್ಷಣ, ಆರೋಗ್ಯ ಸೇರಿ ಎಲ್ಲ ಕ್ಷೇತ್ರಗಳಲ್ಲೂ ನಮ್ಮ ಭಾಗವನ್ನು ನಿರ್ಲಕ್ಷಿಸಲಾಗಿದೆ. ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕಲ್ಯಾಣ ಕರ್ನಾಟಕದಂತೆ ಕಿತ್ತೂರು ಕರ್ನಾಟಕ ಭಾಗಕ್ಕೂ ₹5,000 ಕೋಟಿ ನೀಡುವುದಾಗಿ ಪ್ರಕಟಿಸಲಾಗಿತ್ತು. ಈವರೆಗೂ ಹಣ ಬಂದಿಲ್ಲ. ಪ್ರತಿಯೊಂದಕ್ಕೂ ನಾವು ಬೆಂಗಳೂರಿಗೆ ಹೋಗುವುದಕ್ಕೆ ಆಗುವುದಿಲ್ಲ’ ಎಂದು ಹೇಳಿದರು.

‘ಪ್ರಜಾಸೌಧ ನಿರ್ಮಾಣಕ್ಕೆ ಕಡೂರಿಗೆ ₹16 ಕೋಟಿ ಕೊಡುತ್ತಾರೆ. ನನ್ನ ಕ್ಷೇತ್ರಕ್ಕೂ ಅಷ್ಟೇ ಮೊತ್ತ ಕೊಡಿ. ನಮ್ಮ ಕ್ಷೇತ್ರದಲ್ಲಿ ನದಿಗೆ ಸೇತುವೆ ನಿರ್ಮಿಸಲು ನಾಲ್ಕು ಪಿಲ್ಲರ್ ಹಾಕಲಾಗಿದೆ. ಆದರೆ ಸೇತುವೆ ನಿರ್ಮಾಣ ಆಗಿಲ್ಲ. ಯಾವುದೇ ಕೆಲಸ ಆಗಬೇಕು ಎಂದರೆ ಮುಖ್ಯಮಂತ್ರಿ ಬಳಿ ಹೋಗಿ ಎಂದು ಹೇಳುತ್ತಾರೆ. ನಾನು ಏನೇ ಮಾತನಾಡಿದರೂ ಸರ್ಕಾರದ ವಿರುದ್ಧ ಮಾತನಾಡುತ್ತಾರೆ ಎಂದು ಬಿಂಬಿಸಲಾಗುತ್ತದೆ ನಮ್ಮ ಗೋಳು ಕೇಳುವವರು ಯಾರು’ ಎಂದು ಕಾಗೆ ಪ್ರಶ್ನಿಸಿದರು.

‘ನಮ್ಮ ಭಾಗದ ಜಿಲ್ಲೆಗಳಲ್ಲಿ ಅತಿಯಾದ ನೀರಾವರಿಯಿಂದಾಗಿ ಶೇ 60 ರಿಂದ ಶೇ 70 ರಷ್ಟು ಕೃಷಿ ಭೂಮಿ ಕ್ಷಾರಯುಕ್ತವಾಗಿದೆ. ಇದನ್ನು ಸರಿಪಡಿಸಲು ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಕನಿಷ್ಠ ₹10 ಕೋಟಿ ನೀಡಬೇಕು’ ಎಂದು ಅವರು ಒತ್ತಾಯಿಸಿದರು.

ಪ್ರಧಾನಿ ಬಳಿ ನಿಯೋಗಕ್ಕೆ ಆಗ್ರಹ

‘ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಮಸ್ಯೆಗಳನ್ನು ಬಗೆಹರಿಸಲು ಮುಖ್ಯಮಂತ್ರಿಯವರು ಕೂಡಲೇ ಮಾಲೀಕರ ಸಭೆಯನ್ನು ಕರೆಯಬೇಕು ಮತ್ತು ಪ್ರಧಾನಿಯವರ ಬಳಿ ನಿಯೋಗ ಒಯ್ಯಬೇಕು’ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ಉತ್ತರ ಕರ್ನಾಟಕದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಸಕ್ಕರೆ ಕಾರ್ಖಾನೆ ಮಾಲೀಕರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮುಖ್ಯಮಂತ್ರಿ ಈವರೆಗೂ ಸಭೆ ಕರೆದಿಲ್ಲ’ ಎಂದು ಹೇಳಿದರು.

‘ಒಂದು ಟನ್ ಕಬ್ಬಿನಲ್ಲಿ ಸಕ್ಕರೆ ಕಾರ್ಖಾನೆಗಳು ₹14,500 ಉಳಿತಾಯ ಮಾಡುತ್ತವೆ ಎಂದು ವ್ಯಕ್ತಿಯೊಬ್ಬರು ಹೇಳಿಕೊಂಡಿದ್ದಾರೆ. ಒಂದು ವೇಳೆ ಅದು ನಿಜವಾಗಿದ್ದರೆ ಎಲ್ಲ ಮಾಲೀಕರು ಓಡಾಟಕ್ಕೆ ಹೆಲಿಕಾಪ್ಟರ್‌ಗಳನ್ನು ಇಟ್ಟುಕೊಳ್ಳಬಹುದಾಗಿತ್ತು. ಸಕ್ಕರೆ ಕಾರ್ಖಾನೆಗಳಿಗೆ ಆ ರೀತಿ ಉಳಿತಾಯ ಮಾಡಿಕೊಡುವ ವ್ಯಕ್ತಿಗೆ ತಿಂಗಳಿಗೆ ₹1 ಕೋಟಿ ಸಂಬಳ ಕೊಟ್ಟು ಇಟ್ಟುಕೊಳ್ಳಲು ತಯಾರಿದ್ದೇವೆ’ ಎಂದೂ ಯತ್ನಾಳ ಕುಟುಕಿದರು.

ಬೆಳಗಾವಿ ಸುವರ್ಣ ಸೌಧದಲ್ಲಿ ನಡೆದ ವಿಧಾನ ಸಭೆ ಕಲಾಪದಲ್ಲಿ ರಾಜು ಕಾಗೆ ಮಾತನಾಡಿದರು

‘ಭಾಗ್ಯದ ಬಾಗಿಲು ತೆರೆಯದ ಅಧಿವೇಶನ’

‘ಬೆಳಗಾವಿಯಲ್ಲಿ ವಿಧಾನಮಂಡಲದ 13 ಅಧಿವೇಶನಗಳು ನಡೆದಿದ್ದು, ಇಲ್ಲಿ ಕೇವಲ ಚರ್ಚೆ ನಡೆದಿದೆಯೇ ಹೊರತು ಉತ್ತರ ಕರ್ನಾಟಕ ಭಾಗ್ಯದ ಬಾಗಿಲು ತೆರೆಯಬಹುದು ಎಂಬ ನಮ್ಮ ಕನಸು ಕನಸಾಗಿಯೇ ಉಳಿದಿದೆ’ ಎಂದು ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ನಮ್ಮ ಭಾಗದಲ್ಲಿ ನೀರು, ನೀರಾವರಿ, ಶಿಕ್ಷಣ ಸೇರಿ ಕಾನೂನು ಸುವ್ಯವಸ್ಥೆ ನಿರೀಕ್ಷೆ ಹುಸಿಯಾಗಿದೆ’ ಎಂದರು.

‘ಉತ್ತರ ಕರ್ನಾಟಕದ ಹಲವು ಜಿಲ್ಲೆಗಳು ಇನ್ನೂ ಅತ್ಯಂತ ಹಿಂದುಳಿದ ಜಿಲ್ಲೆಗಳ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಕೃಷ್ಣಾ ನೀರಾವರಿ ಯೋಜನೆಗೆ ₹1.50 ಲಕ್ಷ ಕೋಟಿ ಖರ್ಚು ಮಾಡುವುದಾಗಿ ಭರವಸೆ ನೀಡಿತ್ತು. ಆದರೆ, ಎರಡೂವರೆ ವರ್ಷಗಳಲ್ಲಿ ಕೇವಲ ₹36 ಸಾವಿರ ಕೋಟಿ ಮಾತ್ರ ಖರ್ಚು ಮಾಡಲಾಗಿದೆ. ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಯಲ್ಲಿ 2,004 ಹಾಸಿಗೆಗಳಿದ್ದು, ಇದಕ್ಕೆ ₹24 ಕೋಟಿ ಅನುದಾನ, 2,100 ಹಾಸಿಗೆ ಇರುವ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ₹76 ಕೋಟಿ ಅನುದಾನ ನೀಡಲಾಗಿದೆ. ಇದು ತಾರತಮ್ಯ ಅಲ್ಲವೇ’ ಎಂದು ಪ್ರಶ್ನಿಸಿದರು.

‘ಉತ್ತರ ಕರ್ನಾಟಕದಲ್ಲಿ ₹5,000 ಕೋಟಿ ಬಂಡವಾಳ ಹೂಡಿಕೆ ಮಾಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಈವರೆಗೆ ಎಷ್ಟು ಹೂಡಿಕೆ ಮಾಡಲಾಗಿದೆ. ಸೆಮಿಕಂಡಕ್ಟರ್ ಉದ್ಯಮವನ್ನು ನಮ್ಮ ಭಾಗಕ್ಕೆ ನೀಡಬಹುದಾಗಿತ್ತು. ಆದರೆ ಅದನ್ನು ಕೋಲಾರಕ್ಕೆ ನೀಡಲಾಗಿದೆ’ ಎಂದು ಹೇಳಿದರು.

‘ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ 2008 ರಿಂದ ಈವರೆಗೆ ₹31 ಸಾವಿರ ಕೋಟಿ ನೀಡಲಾಗಿದೆ. ಈ ಅವಧಿಯಲ್ಲಿ ಮಂಡಿಸಿದ ಬಜೆಟ್ ಮೊತ್ತಕ್ಕೆ ಹೋಲಿಸಿದರೆ ನೀಡಿರುವ ಅನುದಾನ ಶೇ 1 ಕ್ಕಿಂತಲೂ ಕಡಿಮೆ’ ಎಂದರು.

‘ಹುಬ್ಬಳ್ಳಿಯ ಗಂಗೂಬಾಯಿ ಹಾನಗಲ್ ಗುರುಕುಲವನ್ನು ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಮುಚ್ಚಿದೆ. ಈ ಗುರುಕುಲ ಮೈಸೂರಿನಲ್ಲಿ ಇದ್ದರೆ ಮುಚ್ಚುತ್ತಿದ್ದರೆ? ಇದು ತಾರತಮ್ಯ ಅಲ್ಲವೇ’ ಎಂದು ಬೆಲ್ಲದ ಪ್ರಶ್ನಿಸಿದರು.

ಒಳ ಮೀಸಲು ರಕ್ಷಣೆಗೆ ಮಸೂದೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಕಲ್ಪಿಸುವ ಚಾರಿತ್ರಿಕ ತೀರ್ಮಾನ ಕೈಗೊಂಡಿದ್ದ ರಾಜ್ಯ ಸರ್ಕಾರ, ಈ ಸೌಲಭ್ಯದ ಕಾನೂನಾತ್ಮಕ ರಕ್ಷಣೆಗಾಗಿ ರಚಿಸಲಾಗಿರುವ ಮಸೂದೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಪರಿಶಿಷ್ಟ ಜಾತಿಯವರಿಗೆ ಲಭ್ಯ ಇರುವ ಶೇ 17 ರಷ್ಟು ಮೀಸಲಾತಿಯಡಿ ಎಡಗೈ ಸಂಬಂಧಿತ ಜಾತಿಗಳಿರುವ ‘ಎ’ ಪ್ರವರ್ಗಕ್ಕೆ ಶೇ 6, ಬಲಗೈ ಸಂಬಂಧಿತ ಜಾತಿಗಳಿರುವ ‘ಬಿ’ ಪ್ರವರ್ಗಕ್ಕೆ ಶೇ 6 ಹಾಗೂ ಸ್ಪೃಶ್ಯ ಮತ್ತು ಅಲೆಮಾರಿ ಜಾತಿಗಳಿರುವ ‘ಸಿ’ ಪ್ರವರ್ಗಕ್ಕೆ ಶೇ 5ರಷ್ಟು ಒಳ ಮೀಸಲಾತಿ ಜಾರಿಗೊಳಿಸಿ ರಾಜ್ಯ ಸರ್ಕಾರ ಈ ಹಿಂದೆ ಆದೇಶ ಹೊರಡಿಸಿತ್ತು. ಕಾನೂನಿನ ಅಡಚಣೆಗಳು ಎದುರಾಗುವ ಸನ್ನಿವೇಶ ಸೃಷ್ಟಿಯಾಗಿರುವ ಬೆನ್ನಲ್ಲೇ, ಆದೇಶಕ್ಕೆ ಹೆಚ್ಚಿನ ಕಾನೂನು ಬಲ ನೀಡಲು ತರಲಾದ ಮಸೂದೆಯನ್ನು ಸಚಿವ ಸಂಪುಟಯಲ್ಲಿ ಮಂಡಿಸಲಾಗಿತ್ತು.

ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಚಿವ ಸಂಪುಟ ಸಭೆಯು ಮಸೂದೆಗೆ ಒಪ್ಪಿಗೆ ನೀಡಿತು. ನಿಯಮಗಳನ್ನು ರೂಪಿಸುವ ಮುನ್ನ ಬೇರೆ ಬೇರೆ ರಾಜ್ಯಗಳು ಒಳ ಮೀಸಲು ವಿಷಯದಲ್ಲಿ ಯಾವ ರೀತಿಯಲ್ಲಿ ಕಾನೂನಿನ ರಕ್ಷಣಾತ್ಮಕ ಕ್ರಮ ಕೈಗೊಂಡಿವೆ ಎಂಬುದರ ಬಗ್ಗೆ ಅಧ್ಯಯನ ನಡೆಸಬೇಕು. ಬಳಿಕ, ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದು ಎಂಬ ತೀರ್ಮಾನವನ್ನು ಸಚಿವ ಸಂಪುಟ ಸಭೆ ಕೈಗೊಂಡಿತು ಎಂದು ಗೊತ್ತಾಗಿದೆ.

ಈ ತಿದ್ದುಪಡಿ ಮಸೂದೆ ಇದೇ ಅಧಿವೇಶನದಲ್ಲಿ ಮಂಡನೆಯಾಗಲಿದೆ.

ಮಸೂದೆಯ ಲಾಭವೇನು?: 101 ಜಾತಿಗಳನ್ನು ‘ಎ’, ‘ಬಿ’, ‘ಸಿ’ ಎಂದು ಮೂರು ಪ್ರವರ್ಗಗಳಾಗಿ ವಿಂಗಡಿಸಲಾಗಿದೆ. ಸರ್ಕಾರಿ ಹುದ್ದೆಗಳಿಗೆ ಒಳ ಮೀಸಲಾತಿ ಕಾರಣಕ್ಕೆ ತಡೆ ಹಿಡಿಯಲಾಗಿದ್ದ ನೇರ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ (ಡಿಪಿಎಆರ್) ಇದರಿಂದ ನೆರವಾಗಲಿದೆ. ಅಲ್ಲದೇ ಎಲ್ಲ ಇಲಾಖೆಗಳು ಮತ್ತು ಅವುಗಳ ಅಧೀನದ ಎಲ್ಲ ನಿಗಮ, ಮಂಡಳಿ, ಸಂಸ್ಥೆಗಳಲ್ಲಿ ಮುಂಬಡ್ತಿ ಪ್ರಕ್ರಿಯೆಗೆ ಒಪ್ಪಿಗೆ ಸಿಗಲಿದೆ.

ಒಳ ಮೀಸಲಾತಿ ಕಲ್ಪಿಸಲು ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು ಪರಿಶಿಷ್ಟ ಜಾತಿಗಳನ್ನು ‘ಎ’, ‘ಬಿ’, ‘ಸಿ’, ‘ಡಿ’, ‘ಇ’ ಎಂದು ಐದು ಪ್ರವರ್ಗಗಳಾಗಿ ವಿಂಗಡಿಸಿ, ಮೀಸಲಾತಿ ಹಂಚಿಕೆ ಮಾಡಿ ಶಿಫಾರಸು ಮಾಡಿತ್ತು. ಆ ವರದಿಯಲ್ಲಿ ಪ್ರವರ್ಗ ‘ಇ’ಯಲ್ಲಿರುವ ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಈ ಮೂರು ಸಮುದಾಯಗಳು ಮೂಲ ಜಾತಿಯನ್ನು ತಿಳಿಸದೇ ಇರುವುದರಿಂದ ಪ್ರವರ್ಗ ‘ಎ’ ಅಥವಾ ಪ್ರವರ್ಗ ‘ಬಿ’ ಅಡಿ ಮೀಸಲಾತಿ ಸೌಲಭ್ಯವನ್ನು ಪಡೆಯಬಹುದು.

ವಯೋಮಿತಿ ಸಡಿಲಿಕೆಗೂ ಅವಕಾಶ: ನೇಮಕಾತಿಯಲ್ಲಿ ಎಲ್ಲ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲು ಡಿಪಿಎಆರ್ ಅಗತ್ಯ ಕ್ರಮ ವಹಿಸಲು ನೆರವಾಗಲಿದೆ.

ಹೊಸ ದತ್ತಾಂಶ ಅಥವಾ ಮಾಹಿತಿ ಬಂದಾಗ ಅಗತ್ಯ ಮಾರ್ಪಾಡುಗಳನ್ನು ಮಾಡಲು ಕರ್ನಾಟಕ ರಾಜ್ಯ ಎಸ್‌ಸಿ ಮತ್ತು ಎಸ್‌ಟಿ ಆಯೋಗಕ್ಕೆ ಅಧಿಕಾರ ನೀಡುವ ಬಗ್ಗೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಕಾಯ್ದೆ 2002ಕ್ಕೆ ತಿದ್ದುಪಡಿ ಮಾಡಲಾಗುವುದು.

ಶೇ 56ಕ್ಕೆ ಹೆಚ್ಚಿಸಲು ನಿರ್ಣಯ

ಈಗಿರುವ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ತರುವಂತೆ ಕೇಂದ್ರದ ಮೇಲೆ ಒತ್ತಡ ಹೇರುವ ನಿರ್ಣಯವನ್ನು ಇದೇ ಅಧಿವೇಶನದಲ್ಲಿ ಕೈಗೊಳ್ಳಲು ಸಂಪುಟ ಸಭೆ ತೀರ್ಮಾನಿಸಿದೆ.

ಪರಿಶಿಷ್ಟ ಜಾತಿಯವರಿಗೆ ನ್ಯಾಯ ಒದಗಿಸಬೇಕಾದರೆ ಈ ಅನಿವಾರ್ಯ ಕ್ರಮ ಕೈಗೊಳ್ಳಲೇಬೇಕಿದೆ ಎಂದು ವಿರೋಧ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ನಾಯಕರಿಗೆ ಮನವರಿಕೆ ಮಾಡಿಕೊಟ್ಟು, ಸದನದಲ್ಲಿ ಸರ್ವಾನುಮತದ ನಿರ್ಣಯ ಕೈಗೊಳ್ಳಬೇಕು ಎಂಬ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಗೊತ್ತಾಗಿದೆ.

ಕರ್ನಾಟಕದಲ್ಲಿ ಈಗ ಇರುವ ಮೀಸಲಾತಿ ಪ್ರಮಾಣ ಶೇ 56ಕ್ಕೆ ಏರಿದೆ. ಇಂದಿರಾ ಸಾಹ್ನಿ ಪ್ರಕರಣದಲ್ಲಿ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್ ಮೀಸಲಾತಿ ಪ್ರಮಾಣ ಶೇ 50 ಮೀರಬಾರದು ಎಂದು ಹೇಳಿದೆ. ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಜನ ಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ, ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ 7ಕ್ಕೆ ಹೆಚ್ಚಿಸಿತ್ತು. ಇದರಿಂದಾಗಿ ಮೀಸಲಾತಿ ಪ್ರಮಾಣ ಶೇ 50ರ ಗಡುವನ್ನು ಮೀರಿದೆ.

ಬಾಲ್ಯದಾಟ

ಪ್ರಜಾವಾಣಿ ಚಿತ್ರ

ಬೆಳಗಾವಿಯ ಟಿಳಕವಾಡಿಯ ಲೇಲೇ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ 10ನೇ ಆವೃತ್ತಿಯ ಬಾಲ್ಯ ಮತ್ತು ಸಾಂಪ್ರದಾಯಿಕ ಕ್ರೀಡಾಕೂಟದಲ್ಲಿ ಶಾಸಕ ಅಭಯ ಪಾಟೀಲ, ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್, ಶಾಸಕ ಸಿದ್ದು ಸವದಿ ಗೋಲಿ ಆಡಿದರು

ಖಾಲಿ ಹುದ್ದೆ ಶೀಘ್ರ ಭರ್ತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಸರ್ಕಾರದ ವಿವಿಧ ಇಲಾಖೆ, ನಿಗಮ–ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಧನಂಜಯ ಸರ್ಜಿ, ಹಣಮಂತ ನಿರಾಣಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಸ್ತುತ ವಿವಿಧ ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ ಇದ್ದರೂ, 96,844 ಹುದ್ದೆಗಳನ್ನು ಈಗಾಗಲೇ ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲಾಗಿದೆ. ಉಳಿದ 1.88 ಲಕ್ಷ ಹುದ್ದೆಗಳಲ್ಲಿ 24,300 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ ಎಂದರು.

ವಿವಿಧ ನಿಗಮ–ಮಂಡಳಿಗಳಲ್ಲಿ ಖಾಲಿ ಇರುವ 1,01,420 ಹುದ್ದೆ, ವಿವಿಧ ವಿಶ್ವವಿದ್ಯಾಲಯಗಳ 14,677 ಖಾಲಿ ಹುದ್ದೆಗಳ ಭರ್ತಿಗೂ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಅನುಕಂಪದ ನೇಮಕಾತಿ, ಬಡ್ತಿ ಮೂಲಕ ಭರ್ತಿ ಮಾಡುವ ಸ್ಥಾನಗಳು ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಇಲಾಖಾ ಹಂತದಲ್ಲೇ ಭರ್ತಿಗೆ ಅನುಮತಿ ನೀಡಲಾಗಿದೆ. ಉಳಿದ ಎಲ್ಲ ಖಾಲಿ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಲಾಗುವುದು ಎಂದರು.

ರಾಜ್ಯದ ಹಣಕಾಸಿನ ಮೇಲೆ ಪರಿಣಾಮ ಬೀರುವ ಯಾವುದೇ ಹುದ್ದೆಯನ್ನು ಸಾರ್ವಜನಿಕ ಹುದ್ದೆಗೆ ಸೇರಿಸುವ ಅಥವಾ ಸಾರ್ವಜನಿಕ ಸೇವೆಯಿಂದ ರದ್ದುಪಡಿಸುವ ಪ್ರಸ್ತಾವಗಳಿಗೆ ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕು. ಹುದ್ದೆಗಳ ಸೃಜನೆ ಅಥವಾ ಹುದ್ದೆಗಳ ಸಂಖ್ಯೆಯನ್ನು ಒಳಗೊಂಡ ಪ್ರಸ್ತಾವನೆ, ಯೋಜನೆಗಳ ಕುರಿತು ಆದೇಶಗಳನ್ನು ಹೊರಡಿಸುವ ಪೂರ್ವದಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಪೂರ್ವಾನುಮತಿ ಪಡೆಯದೆ ಇಲಾಖೆಗಳು ಹುದ್ದೆಗಳನ್ನು ಭರ್ತಿ ಮಾಡಿಕೊಂಡರೆ ಸೂಕ್ತ ಅನುದಾನ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ವಿವರ ನೀಡಿದರು.

> **3.50 ಕೋಟಿ ಜನಸಂಖ್ಯೆ, 150 ತಾಲ್ಲೂಕುಗಳು ಇದ್ದಾಗ 7.20 ಲಕ್ಷ ಸರ್ಕಾರಿ ನೌಕರರು ಇದ್ದರು. ಜನಸಂಖ್ಯೆ 7 ಕೋಟಿ ಇದೆ. ಸರ್ಕಾರಿ ನೌಕರರ ಸಂಖ್ಯೆ 5.12 ಲಕ್ಷಕ್ಕೆ ಇಳಿದಿದೆ**
> **ಡಾ.ಧನಂಜಯ ಸರ್ಜಿ,** ಬಿಜೆಪಿ ಸದಸ್ಯ

56,432 ಹುದ್ದೆ ಭರ್ತಿಗೆ ಕ್ರಮ

ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ 32,132 ಹುದ್ದೆಗಳು ಭರ್ತಿಯಾಗಬೇಕಿದೆ. ಈ ಪ್ರದೇಶವು ಸೇರಿ ಒಟ್ಟು 56,432 ಹುದ್ದೆಗಳ ಭರ್ತಿಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಒಳಮೀಸಲಾತಿಯ ಬಿಕ್ಕಟ್ಟಿನಿಂದಾಗಿ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಿತ್ತು. ಈಗ ಸಮಸ್ಯೆ ಬಗೆಹರಿದಿದ್ದು, ಆರ್ಥಿಕ ಇಲಾಖೆಯ ಅನುಮತಿ ಪಡೆದು ಹಂತ ಹಂತವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದರು.

ಕಲ್ಯಾಣ ಕರ್ನಾಟಕಕ್ಕೆ ಮಂಜೂರಾದ ಹುದ್ದೆಗಳಲ್ಲಿ ಶೇ 80ರಷ್ಟನ್ನು ಇಲಾಖಾ ಹಂತದಲ್ಲೇ ಭರ್ತಿ ಮಾಡಿಕೊಳ್ಳಲು ಇಲಾಖಾ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಸರ್ಕಾರಿ ಶಾಲೆ: 17 ಲಕ್ಷದಷ್ಟು ದಾಖಲಾತಿ ಕುಸಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದಲ್ಲಿ ಕಳೆದ 15 ವರ್ಷಗಳಲ್ಲಿ ಸರ್ಕಾರಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆ 17 ಲಕ್ಷದಷ್ಟು (ಶೇ 30) ಕಡಿಮೆಯಾಗಿದೆ ಎಂಬುದನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ.

ವಿಧಾನಸಭೆಯಲ್ಲಿ ಬಿಜೆಪಿಯ ಎಸ್. ಸುರೇಶ್ ಕುಮಾರ್ ಅವರು ಕೇಳಿದ ಪ್ರಶ್ನೆಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಈ ಉತ್ತರ ನೀಡಿದ್ದಾರೆ.

ಸರ್ಕಾರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ ಕುಸಿತ ಸೇರಿದಂತೆ ಶಾಲಾ ಶಿಕ್ಷಣದ ಸಮಸ್ಯೆಗಳೂ ಗಂಭೀರವಾಗಿದ್ದು ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ಒಂದು ದಿನ ವಿಶೇಷ ಚರ್ಚೆಗೆ ಕಾಲಾವಕಾಶ ನೀಡ ಬೇಕು ಎಂದು ಪಕ್ಷಾತೀತವಾಗಿ ಸದಸ್ಯರು ಮನವಿ ಮಾಡಿದರು. ಅದಕ್ಕೆ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಸಹಮತ ವ್ಯಕ್ತಪಡಿಸಿದರು.

‘ಶಿಕ್ಷಣ ಇಲಾಖೆಯ 10–15 ವರ್ಷಗಳ ಶೈಕ್ಷಣಿಕ ಮಾಹಿತಿ ವಿಶ್ಲೇಷಣಾ ವರದಿಗಳನ್ನು ಅವಲೋಕಿಸಿದಾಗ 15 ವರ್ಷಗಳಲ್ಲಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ 17 ಲಕ್ಷ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ’ ಎಂಬ ಸುರೇಶ್ ಕುಮಾರ್ ಅವರ ಪ್ರಶ್ನೆಗೆ, ಗಮನಕ್ಕೆ ಬಂದಿರುವುದಾಗಿ ಮಧು ಬಂಗಾರಪ್ಪ ಉತ್ತರ ನೀಡಿದ್ದಾರೆ.

‘ದಾಖಲಾತಿ ಕುಸಿತಕ್ಕೆ ಕಾರಣಗಳೇನು’ ಎಂಬ ಪ್ರಶ್ನೆಗೆ ಸಚಿವರು, ‘ಇಂಗ್ಲಿಷ್ ಮಾಧ್ಯಮ ಶಿಕ್ಷಣ, ಕೇಂದ್ರೀಯ ಪಠ್ಯಕ್ರಮದತ್ತ ಪೋಷಕರ ಒಲವು, ಪೋಷಕರ, ವಿದ್ಯಾರ್ಥಿಗಳ ವಲಸೆ ಮತ್ತು ರಾಜ್ಯದಲ್ಲಿ ಖಾಸಗಿ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆ ಆಗುತ್ತಿರುವುದು ಕಾರಣ’ ಎಂದಿದ್ದಾರೆ.

‘ದಾಖಲಾತಿ ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು’ ಎಂಬ ಪ್ರಶ್ನೆಗೆ, ‘ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವ ಬಿಸಿಯೂಟ, ಕ್ಷೀರಭಾಗ್ಯ, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ-ಸಾಕ್ಸ್ ವಿತರಣೆ ಸೇರಿದಂತೆ ಇತರೆ ಸೌಕರ್ಯ ಕಲ್ಪಿಸಲಾಗಿದೆ. ಜೊತೆಗೆ, ಸರ್ಕಾರಿ ಶಾಲೆ, ಪದವಿಪೂರ್ವ ಕಾಲೇಜುಗಳಲ್ಲೂ ಪ್ರತಿ ಮೂರು ತಿಂಗಳಿಗೊಮ್ಮೆ ಪೋಷಕರ ಸಭೆ ನಡೆಸಿ ಮಕ್ಕಳ ಕಲಿಕಾ ಪ್ರಗತಿ ಚರ್ಚಿಸಲಾಗುತ್ತದೆ. ಗ್ರಾಮ ಪಂಚಾಯಿತಿಗೊಂದು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಿ, ಅಲ್ಲಿ ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಒಂದೇ ಕಡೆ ಶಿಕ್ಷಣ ಒದಗಿಸುವ ಗುರಿ ಇದ್ದು, ಸದ್ಯ 900 ಕೆಪಿಎಸ್ ಶಾಲೆಗಳನ್ನು ಆರಂಭಿಸಲಾಗುತ್ತಿದೆ. 9,500ಕ್ಕೂ ಹೆಚ್ಚು ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜತೆಗೆ ಇಂಗ್ಲಿಷ್ ಮಾಧ್ಯಮವನ್ನೂ ಆರಂಭಿಸಲಾಗಿದೆ. ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ಕೈಗೊಂಡಿರುವ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದೂ ತಿಳಿಸಿದ್ದಾರೆ.

‘ಶೀಘ್ರ ಅನುದಾನ ಬಿಡುಗಡೆ’

ಮಧು ಬಂಗಾರಪ್ಪ

‘ಸರ್ಕಾರಿ ಶಾಲೆ, ಪಿಯು ಕಾಲೇಜುಗಳಲ್ಲಿ ಅಗತ್ಯವಿರುವ ಕಡೆ ಹೊಸ ಕೊಠಡಿ, ಶೌಚಾಲಯಗಳ ನಿರ್ಮಾಣ, ದುರಸ್ತಿ ಸೇರಿದಂತೆ ಮೂಲಸೌಕರ್ಯಕ್ಕೆ ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡಲಾಗುವುದು’ ಎಂದು ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ಬಿಜೆಪಿಯ ಮಹೇಶ್ ಟೆಂಗಿನಕಾಯಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಮೂರು ವಾರಗಳ ಹಿಂದಷ್ಟೇ ಸಂಪುಟ ಸಭೆಯಲ್ಲಿ ಸರ್ಕಾರಿ ಶಾಲೆ, ಕಾಲೇಜುಗಳಿಗೆ ಮೂಲಸೌಕರ್ಯ ಕಲ್ಪಿಸುವ ಕಾರ್ಯಕ್ಕೆ ಒಪ್ಪಿಗೆ ದೊರಕಿದೆ. ಹಣ ಬಿಡುಗಡೆ ಆದೇಶಕ್ಕೂ ಇತ್ತೀಚೆಗೆ ಸಹಿ ಹಾಕಲಾಗಿದೆ’ ಎಂದರು.

‘ಹೊಸ ತರಗತಿಗಳ ನಿರ್ಮಾಣಕ್ಕೆ ₹ 360 ಕೋಟಿ, ದುರಸ್ತಿಗೆ ₹100 ಕೋಟಿ, ಶೌಚಾಲಯಗಳಿಗೆ ₹ 90 ಕೋಟಿ ಬಿಡುಗಡೆ ಮಾಡಲಾಗುವುದು. ಪಿಯು ಕಾಲೇಜುಗಳಲ್ಲಿ ಮೂಲಸೌಕರ್ಯಕ್ಕೆ ಒಟ್ಟಾರೆ ₹ 97 ಕೋಟಿ ಒದಗಿಸಲಾಗುವುದು’ ಎಂದು ಹೇಳಿದರು.

ಕಾಣುವ ಕುರ್ಚಿಗೆ ಹಂಬಲಿಸಿದೆ ಮನ...

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ವಿ.ಸುನಿಲ್ ಕುಮಾರ್

ಸುವರ್ಣ ವಿಧಾನಸೌಧ(ಬೆಳಗಾವಿ): ‘ಕಾಣುವ ಕುರ್ಚಿಗೆ ಹಂಬಲಿಸಿದೆ ಮನ.... ಕೊಡಬಲ್ಲನೇ ಒಂದು ದಿನ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಉದ್ದೇಶಿಸಿ ಕಾವ್ಯಾತ್ಮಕವಾಗಿ ಹೇಳಿದ್ದು ಬಿಜೆಪಿಯ ವಿ. ಸುನಿಲ್‌ಕುಮಾರ್.

ಮೇಕೆದಾಟು ಯೋಜನೆ ಕುರಿತು ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರ ಪ್ರಶ್ನೆಗೆ ಉತ್ತರಿಸಲು ನಗುತ್ತಾ, ಕೈಮುಗಿದು ಹರ್ಷ ಭರಿತರಾಗಿ ಎದ್ದು ನಿಂತ ಶಿವಕುಮಾರ್ ಅವರನ್ನು ಸುನಿಲ್ ಕಾಲೆಳೆದ ಪರಿ ಇದು.

‘ಅದೇ ಡಿ.ಕೆ.ಶಿವಕುಮಾರಾ ಅಥವಾ ಹೊಸ ಡಿ.ಕೆ.ಶಿವಕುಮಾರಾ? ಡಿ.ಕೆ. ಶಿವಕುಮಾರ್ ಎಂಬುದಕ್ಕೆ ಒಂದು ಕಲ್ಪನೆ ಇದೆ. ದಿಢೀರ್ ಆಗಿ ಇಷ್ಟು ನಯ, ವಿನಯ ಎಲ್ಲಿಂದ ಹೇಗೆ ಬಂತು? ಈ ಸಂದರ್ಭದಲ್ಲಿ ಸಿ.ಅಶ್ವತ್ಥ್ ಅವರು ಹಾಡಿದ ಭಾಗೀತೆಯ ನೆನಪು ಬರುತ್ತದೆ. ಕಾಣದ ಕಡಲಿಗೆ ಹಂಬಲಿಸಿದೆ ಮನ. ಕಾಣಬಲ್ಲನೆ ಒಂದು ದಿನ ಅಂತ... ಆ ಪ್ರಕಾರ ಶಿವಕುಮಾರ ಅವರು ಕಾಣುವ ಕುರ್ಚಿಗೆ ಹಂಬಲಿಸಿದೆ ಮನ... ಕೊಡಬಲ್ಲನೇ ಒಂದು ದಿನ ಎಂದು ಹೇಳುತ್ತಿದ್ದಾರೆ’ ಎಂದು ಸುನಿಲ್ ಕಿಚಾಯಿಸಿದಾಗ, ಶಿವಕುಮಾರ್ ನಗುತ್ತಲೇ ತಲೆ ಆಡಿಸಿದರು.

‘ನಿಜವಾಗಿಯೂ ನಿಮಗೆ ವಿಪಕ್ಷದ ಬಗ್ಗೆ ನಯ ವಿನಯ ಶುರುವಾದರೆ ನಿಮ್ಮ ನಾಯಕತ್ವವನ್ನು ಒಪ್ಪುತ್ತೇವೆ. ಆದರೆ ನೀವು ಈ ರೀತಿ ನಯ ವಿನಯ ತೋರಿಸಿದರೆ ಹೇಗೆ’ ಎಂದು ಸುನಿಲ್ ಪ್ರಶ್ನಿಸಿದರು.

ಜತೆಯಾಗೇ ಹೋಗೋಣ: ‘ಮೇಕೆದಾಟು ಯೋಜನೆ ಆರಂಭಿಸುವ ಕುರಿತು ನಮ್ಮದೇನೂ ಇಲ್ಲ ಸರ್ಕಾರವೇ ತೀರ್ಮಾನ ಮಾಡಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ. ಕೇಂದ್ರ ಜಲಮಂಡಳಿಗೆ ಹೊಸದಾಗಿ ಅರ್ಜಿ ಹಾಕುತ್ತೇವೆ. ಪರಿಷ್ಕೃತ ಡಿಪಿಆರ್ ಸಿದ್ಧ ಮಾಡಿಕೊಡುತ್ತೇವೆ. ಆದಷ್ಟು ಬೇಗ ನಿಮ್ಮ ಎಲ್ಲರನ್ನೂ ಕರೆದುಕೊಂಡು ಹೋಗಿ ಭೂಮಿ ಪೂಜೆ ಮಾಡುತ್ತೇನೆ. ನಿಮ್ಮೆಲ್ಲರ ಸಹಕಾರ ಬೇಕು’ ಎಂದು ಶಿವಕುಮಾರ್ ಕೈಮುಗಿದು ಮನವಿ ಮಾಡಿದರು.

ಗಮನಸೆಳೆಯುವ ಸೂಚನೆಯೇ ನಕಲಿ

ಸುವರ್ಣ ವಿಧಾನಸೌಧ (ಬೆಳಗಾವಿ): ವಿಧಾನ ಸಭೆಯಲ್ಲಿ ಬಿಜೆಪಿಯ ಸಿಮೆಂಟ್ ಮಂಜು ಅವರ ಹೆಸರಿನಲ್ಲಿ ನಕಲಿ ಗಮನ ಸೆಳೆಯುವ ಸೂಚನೆ ನೀಡಿರುವುದು ಅಚ್ಚರಿಗೆ ಕಾರಣವಾಯಿತು.

ಗಮನ ಸೆಳೆಯುವ ಸೂಚನೆಯಡಿ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಸಿಮೆಂಟ್ ಮಂಜು ಹೆಸರು ಕೂಗಿದರು. ‘ಸಭಾಧ್ಯಕ್ಷರೇ ಅದು ನನ್ನದಲ್ಲ. ನಾನು ಗಮನ ಸೆಳೆಯುವ ಸೂಚನೆ ಕೊಟ್ಟಿಲ್ಲ. ಯಾರೋ ನನ್ನ ಸಹಿ ಮಾಡಿ ಕೊಟ್ಟಿದ್ದಾರೆ’ ಎಂದು ಗಮನಕ್ಕೆ ತಂದರು.

‘ಇದು ಹೇಗೆ ಹೀಗಾಯಿತು’ ಎಂದು ಸಭಾಧ್ಯಕ್ಷರು ಕೇಳಿದರು. ‘ನನಗೂ ಗೊತ್ತಿಲ್ಲ. ಯಾರೋ ನನ್ನ ಸಹಿ ಮಾಡಿ ಕೊಟ್ಟಿದ್ದಾರೆ’ ಎಂದು ಸಿಮೆಂಟ್ ಮಂಜು ಹೇಳಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಅದು ಹೀಗಾಗಲು ಹೇಗೆ ಸಾಧ್ಯ? ಇದು ಸರಿಯಲ್ಲ. ಹೀಗೆ ಮಾಡಿರುವುದು ತಪ್ಪು’ ಎಂದರು. ಸಭಾಧ್ಯಕ್ಷ ಯು.ಟಿ .ಖಾದರ್, ‘ಮುಂದೆ ಹೀಗಾಗದಂತೆ ನೋಡಿಕೊಳ್ಳಬೇಕು. ಪ್ರಶ್ನೆಗಳಿದ್ದರೇ ನೀವೆ ಬಂದು ಕೊಡಬೇಕು’ ಎಂದು ಸದಸ್ಯರಿಗೆ ಸೂಚಿಸಿದರು.

ಸಾಮಾಜಿಕ ಬಹಿಷ್ಕಾರ ಅಪರಾಧ ಮಸೂದೆ: ವಿಧಾನಸಭೆಯಲ್ಲಿ ಮಂಡನೆ

ಸುವರ್ಣ ವಿಧಾನಸಭೆ (ಬೆಳಗಾವಿ: ‘ಯಾವುದೇ ವ್ಯಕ್ತಿ, ಕುಟುಂಬ ಅಥವಾ ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ, ಅದನ್ನು ಅಪರಾಧವೆಂದು ಪರಿಗಣಿಸಿ ₹ 1 ಲಕ್ಷ ದಂಡ ಹಾಗೂ ಮೂರು ವರ್ಷದವರೆಗೆ ಜೈಲು ಶಿಕ್ಷೆಗೆ ಗುರಿಪಡಿಸಲು ಅವಕಾಶವಿರುವ ‘ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆ- 2025’ ಅನ್ನು ವಿಧಾನಸಭೆಯಲ್ಲಿ ಗುರುವಾರ ಮಂಡಿಸಲಾಯಿತು.

ಮಸೂದೆಯನ್ನು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಮಂಡಿಸಿದರು.

ಸಾಮಾಜಿಕ ಬಹಿಷ್ಕಾರವನ್ನು ಸಂಪೂರ್ಣ ನಿಷೇಧಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಬಹಿಷ್ಕಾರ ತೀರ್ಮಾನ ತೆಗೆದುಕೊಂಡವರು, ಈ ಉದ್ದೇಶದಿಂದ ಸಭೆ, ಪಂಚಾಯಿತಿ, ಜಮಾವಣೆ, ಅಭಿಪ್ರಾಯ ಸಂಗ್ರಹ ನಡೆಸುವುದು, ಬಹಿಷ್ಕಾರಕ್ಕೆ ಪ್ರತ್ಯಕ್ಷ, ಪರೋಕ್ಷ ಸಹಾಯ, ಒತ್ತಡ, ಪ್ರಚೋದನೆ ನೀಡುವವರನ್ನೂ ಅಪರಾಧಿಗಳೆಂದು ಪರಿಗಣಿಸಿ ಜೈಲು ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಮಸೂದೆ ಅವಕಾಶ ಕಲ್ಪಿಸಲಿದೆ.

‘ಕೈ’ಬಣ ಜಗಳ: ಮತ್ತೆ ಬೀದಿಗೆ

ವಾಲ್ಮೀಕಿ ನಾಯಕರ ಸಭೆ

ಒಂದನೇ ಪುಟದಿಂದ...

ವಾಲ್ಮೀಕಿ ಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ಶಾಸಕರಾದ ಕೆ.ಎನ್.ರಾಜಣ್ಣ, ಕಂಪ್ಲಿ ಗಣೇಶ್, ರಘುಮೂರ್ತಿ, ಬಸನಗೌಡ ತುರವೀಹಾಳ್, ಬಸನಗೌಡ ದದ್ದಲ್ ಸಭೆಯಲ್ಲಿ ಭಾಗಿಯಾಗಿದ್ದರು. ತಡರಾತ್ರಿಯವರೆಗೆ ಹಲವು ತಾಸು ಸಭೆ ನಡೆಯಿತು ಎಂದು ಗೊತ್ತಾಗಿದೆ.

‘ಶಕ್ತಿ ಪ್ರದರ್ಶನವಲ್ಲ’: ‘ಸತೀಶ ಜಾರಕಿಹೊಳಿ ನೇತೃತ್ವದಲ್ಲಿ ವಾಲ್ಮೀಕಿ ಸಮುದಾಯದ ನಾಯಕರು ಸಭೆ ನಡೆಸಿದ್ದೇವೆ. ಸಮುದಾಯದ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದೇವೆ. ಇದೇನು ಶಕ್ತಿ ಪ್ರದರ್ಶನವಲ್ಲ. ಸಮುದಾಯದ ಸಮಸ್ಯೆಗಳ ಜತೆಗೆ ಇತರ ವಿಚಾರಗಳನ್ನೂ ಚರ್ಚಿಸಿದ್ದೇವೆ. ಆ ವಿವರಗಳನ್ನು ನೀಡಲು ಸಾಧ್ಯವಿಲ್ಲ’ ಎಂದು ಕೆ.ಎನ್.ರಾಜಣ್ಣ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಸತೀಶ ಜಾರಕಿಹೊಳಿ ಮುಖ್ಯಮಂತ್ರಿ ಆಗುತ್ತಾರೆಯೇ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ರಾಜಣ್ಣ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

‘ಬದಲಾವಣೆಯಾದರೆ ದಲಿತರಿಗೆ ಸಿಗಲಿ’

‘ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರೇ ಮುಂದುವರಿಯುವುದಾದರೆ ನಮ್ಮ ಸಮಾಜದ ಶಾಸಕರ ವಿರೋಧ ಇಲ್ಲ. ವಾಲ್ಮೀಕಿ ಸಮುದಾಯದ ಎಲ್ಲರೂ ಅವರ ಬೆಂಬಲಕ್ಕೆ ನಿಲ್ಲುತ್ತೇವೆ. ಒಂದು ವೇಳೆ ಬದಲಾವಣೆ ಮಾಡುವುದಾದರೆ, ದಲಿತ ನಾಯಕರನ್ನೇ ಮುಖ್ಯಮಂತ್ರಿ ಮಾಡಬೇಕು. ಬೇರೆ ಯಾರೂ ಬೇಡ’ ಎಂದು ರಾಜನಹಳ್ಳಿ ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಮ್ಮ ಸಮಾಜದ ನಾಲ್ಕು–ಐದು ನಾಯಕರಿದ್ದಾರೆ. ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ, ಎಚ್.ಸಿ.ಮಹದೇವಪ್ಪ ಮತ್ತು ಸತೀಶ ಜಾರಕಿಹೊಳಿ ಇದ್ದಾರೆ. ಇವರಲ್ಲಿ ಯಾರಾದರೂ ಮುಖ್ಯಮಂತ್ರಿ ಆಗಲಿ. ನಮ್ಮ ಅಭ್ಯಂತರವಿಲ್ಲ’ ಎಂದರು.

‘ಬದಲಾವಣೆ ಉದ್ಭವಿಸಿಯೇ ಇಲ್ಲ’

‘ಸ್ವಾಮೀಜಿ ಅವರು ಹೇಳಿಕೆ ನೀಡಿದರು ಎಂದ ಮಾತ್ರಕ್ಕೆ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುತ್ತಾರೆ ಎಂದು ಏಕೆ ಭಾವಿಸಬೇಕು’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಶ್ನಿಸಿದರು.

ಪ್ರಸನ್ನಾನಂದ ಸ್ವಾಮೀಜಿ ಅವರ ಹೇಳಿಕೆ ಬಗ್ಗೆ ಸುದ್ದಿಗಾರರು ಪ್ರಸ್ತಾಪಿಸಿದಾಗ ಅವರು, ‘ಒಂದು ವರ್ಷದಿಂದ ಇಂತಹ ಚರ್ಚೆ ನಡೆಯುತ್ತಿದೆ. ಆದರೆ, ಸಿ.ಎಂ ಬದಲಾವಣೆ ಪ್ರಶ್ನೆ ಉದ್ಭವಿಸಿಯೇ ಇಲ್ಲ. ಅರ್ಧ ಅವಧಿ ಅವರಿಗೆ, ಅರ್ಧ ಅವಧಿ ಇವರಿಗೆ ಎಂದು ಯಾರೂ ನಮಗೆ ಹೇಳಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರ ಜಾಗಕ್ಕೆ ಬೇರೆಯವರು ಬರಲು ಅವಕಾಶವಿಲ್ಲ’ ಎಂದರು.

ಯತೀಂದ್ರ ಅವರ ಮಾತಿನಿಂದ ಸಿದ್ದರಾಮಯ್ಯ ಅವರಿಗೆ ಮುಜುಗರವಾಯಿತೆ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಅವರು (ಯತೀಂದ್ರ) ಹಾಗೆ ಹೇಳಬಾರದು. ಅವರು ಹೇಳಿದ್ದರಿಂದ ಸಿದ್ದರಾಮಯ್ಯ ಅವರಿಗೆ ಮುಜುಗರವಾಗಿರಬಹುದು. ಇತರರು ಅಂತಹ ಮಾತು ಆಡಿದರೆ ಯಾವುದೇ ಸಮಸ್ಯೆ ಇಲ್ಲ’ ಎಂದು ಉತ್ತರಿಸಿದರು.

ಪ್ರಶ್ನೋತ್ತರ

‘ಡ್ರಗ್ಸ್: ಬಾಡಿಗೆಗೆ ಮನೆ ಕೊಟ್ಟರೆ ಬುಲ್ಡೋಜರ್’

ವಿಧಾನಪರಿಷತ್

ಮಾದಕ ದ್ರವ್ಯಜಾಲ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹೆಚ್ಚಿನ ಲಾಭಕ್ಕಾಗಿ ಅಂತರರಾಜ್ಯ, ಅಂತರರಾಷ್ಟ್ರೀಯ ಜಾಲಗಳು ಕಾರ್ಯನಿರ್ವಹಿಸುತ್ತಿವೆ. ಅವರನ್ನು ಪತ್ತೆಹಚ್ಚುವ ಸಲುವಾಗಿ ವಿದೇಶಿ ಪ್ರಜೆಗಳಿಗೆ ಮನೆ ಬಾಡಿಗೆಗೆ ನೀಡಿರುವ ಮನೆ ಮಾಲೀಕರ ಮೇಲೆ ನಿಗಾ ವಹಿಸಲಾಗಿದೆ. ಮನೆ ಬಾಡಿಗೆಗೆ ನೀಡಿದರೆ ಮನೆಗಳನ್ನು ಬುಲ್ಡೋಜರ್‌ನಿಂದ ನೆಲಸಮ ಮಾಡಲು ಹಿಂಜರಿಯುವುದಿಲ್ಲ. ವಿಶೇಷವಾಗಿ ಆಫ್ರಿಕಾ ಖಂಡದ ವಿದ್ಯಾರ್ಥಿಗಳು ತೊಡಗಿದ್ದಾರೆ. ಪ್ರಕರಣದಲ್ಲಿ ಬಂಧಿತರಾದ 300ಕ್ಕಿಂತ ಹೆಚ್ಚು ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಲಾಗಿದೆ. ಸಮಸ್ಯೆ ಜಾಗತಿಕವಾಗಿದೆ. ರಾಜ್ಯದಲ್ಲಿ ಮಾದಕ ದ್ರವ್ಯಗಳ ಹಾವಳಿ ತಡೆಗಟ್ಟಲು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ನೇತೃತ್ವದಲ್ಲಿ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ ಸ್ಥಾಪಿಸಲಾಗಿದೆ

ಗೃಹ ಸಚಿವ ಜಿ.ಪರಮೇಶ್ವರ (ಪ್ರಶ್ನೆ: ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್)

₹2,800 ಕೋಟಿ ಕಾಮಗಾರಿ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಸುಮಾರು ₹2,800 ಕೋಟಿ ಮೊತ್ತದ ಕಾಮಗಾರಿಗಳು ನಡೆಯುತ್ತಿವೆ. ಪಕ್ಷ, ವ್ಯಕ್ತಿ ಎಲ್ಲವನ್ನೂ ಮೀರಿ ಅಲ್ಲಿನ ಜನರು ಅಭಿವೃದ್ಧಿ ಕೆಲಸಗಳನ್ನು ಮಂಜೂರು ಮಾಡಿಸಿಕೊಂಡಿದ್ದಾರೆ. ಅರಣ್ಯ ಭೂಮಿ ಬಳಕೆಗೆ ಕೇಂದ್ರದ ಅನುಮತಿ ಸಿಕ್ಕ ತಕ್ಷಣ ಕಾಮಗಾರಿಗಳೂ ಪೂರ್ಣಗೊಳ್ಳಲಿವೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ (ಪ್ರಶ್ನೆ: ಕಾಂಗ್ರೆಸ್‌ನ ರಮೇಶ್ ಬಾಬು)

ಬಜೆಟ್‌ನಲ್ಲಿ ವಸತಿನಿಲಯ

ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ಭಾಗದ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಸತಿನಿಲಯಗಳನ್ನು ನಿರ್ಮಿಸಲು ಮುಂದಿನ ಬಜೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು

ಮುಖ್ಯಮಂತ್ರಿ ಸಿದ್ದರಾಮಯ್ಯ (ಪ್ರಶ್ನೆ: ಬಿಜೆಪಿಯ ಶಾಂತರಾಮ್ ಬುಡ್ನಿ)

ಪತ್ತೆಯಾಗದ ಪ್ರಕರಣಗಳೇ ಅಧಿಕ

ದರೋಡೆ, ಕಳ್ಳತನ ಮತ್ತು ಸುಲಿಗೆ ಪ್ರಕರಣಗಳನ್ನು ಹತ್ತಿಕ್ಕಲು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಕ್ರಮಗಳನ್ನು ಮತ್ತಷ್ಟು ಬಿಗಿಗೊಳಿಸಲಾಗುವುದು. ಮೂರು ವರ್ಷಗಳಲ್ಲಿ 60 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ. ಅವುಗಳಲ್ಲಿ ವಾಹನ ಕಳವು ಪ್ರಕರಣಗಳು ಹೆಚ್ಚಿವೆ

ಗೃಹಸಚಿವ ಜಿ.ಪರಮೇಶ್ವರ (ಪ್ರಶ್ನೆ: ಬಿಜೆಪಿಯ ಕಿಶೋರ್ ಕುಮಾರ್ ಪುತ್ತೂರ್)

30 ದಿನಗಳ ವೇತನ: ಪರಿಶೀಲನೆ

ಎಎಸ್‌ಐ ಮತ್ತು ಸಿಬ್ಬಂದಿ ರಜಾ ದಿವಸಗಳಲ್ಲಿ ಕಾರ್ಯನಿರ್ವಹಿಸಿದ್ದಕ್ಕಾಗಿ ಪ್ರಸ್ತುತ ಲಭ್ಯವಿರುವ 15 ದಿವಸಗಳ ವೇತನವನ್ನು 30 ದಿನಗಳ ವೇತನಕ್ಕೆ ಪರಿಷ್ಕರಿಸುವ ಪ್ರಸ್ತಾವ ಪರಿಶೀಲನೆಯ ಹಂತದಲ್ಲಿದೆ. ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ ಕೆಲವು ನಿರ್ದಿಷ್ಟ ವೃಂದದ ಸಿಬ್ಬಂದಿಯನ್ನೂ ಒಳಗೊಂಡಂತೆ ಪೊಲೀಸ್ ಇಲಾಖೆಯ ಸಿಬ್ಬಂದಿಗೆ 30 ದಿನಗಳ ಹೆಚ್ಚುವರಿ ವೇತನವನ್ನು ಪಾವತಿಸಲು ಅವಕಾಶವಿರುತ್ತದೆ. ಪಿಎಸ್‌ಐ ಹುದ್ದೆಗೆ ನೇರ ನೇಮಕಾತಿ ಮತ್ತು ಮುಂಬಡ್ತಿಗೆ 70:30 ಅನುಪಾತವನ್ನು ನಿಗದಿಪಡಿಸಲಾಗಿದೆ

ಗೃಹ ಸಚಿವ ಡಾ.ಜಿ.ಪರಮೇಶ್ವರ, (ಕಾಂಗ್ರೆಸ್‌ನ ಡಿ.ಟಿ.ಶ್ರೀನಿವಾಸ)

‘₹ 50 ಕೋಟಿ ಅನುದಾನ’

ವಿಧಾನಸಭೆ

ರಾಜ್ಯದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಪರಿಷ್ಕೃತ ಪಠ್ಯಕ್ರಮದ ಅನುಸಾರ ಯಂತ್ರೋಪಕರಣಗಳನ್ನು ಖರೀದಿಸಿ ಒದಗಿಸಲು ₹ 50 ಕೋಟಿ ಅನುದಾನ ಒದಗಿಸಲಾಗಿದ್ದು, ಈಗಾಗಲೆ ಟೆಂಡರ್ ಪ್ರಕ್ರಿಯೆ ನಡೆದಿದೆ.

ಉದ್ಯಮಶೀಲತೆ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಕೌಶಲಾಭಿವೃದ್ಧಿ, (ಪ್ರಶ್ನೆ: ಬಿಜೆಪಿಯ ಬಿ.ಎಂ.ನಾಗರಾಜ್)

‘ಆಹಾರಧಾನ್ಯ ಹಂಚಿಕೆಗೆ ಕ್ರಮ’

ಸಣ್ಣ ಸಣ್ಣ ಗ್ರಾಮದ ಪಡಿತರ ಚೀಟಿದಾರರಿಗೆ ತೊಂದರೆಯಾಗದಂತೆ ನ್ಯಾಯಬೆಲೆ ಅಂಗಡಿ ವರ್ತಕರಿಗೆ ಗ್ರಾಮಗಳಲ್ಲಿ ಉಪ ಕೇಂದ್ರಗಳನ್ನು ತೆರೆದು ಆಹಾರಧಾನ್ಯ ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು. ಪಡಿತರ ಚೀಟಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಇದ್ದ ಕಡೆ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲಾಗುವುದು

ಆಹಾರ ಸಚಿವ ಕೆ.ಎಚ್. ಮುನಿಯಪ್ಪ, (ಪ್ರಶ್ನೆ: ಜೆಡಿಎಸ್‌ನ ಶರಣಗೌಡ ಕಂದಕೂರ)

ಮುಖ್ಯಮಂತ್ರಿ ಯಾನಕ್ಕೆ ₹47 ಕೋಟಿ

ಒಂದನೇ ಪುಟದಿಂದ...

ಕರ್ನಾಟಕ ವಿಧಾನಸಭೆಗೆ 2023ರಲ್ಲಿ ಚುನಾವಣೆ ನಡೆದ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಸರ್ಕಾರದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸಿದ್ದರು. ದೆಹಲಿ ಭೇಟಿ ಹಾಗೂ ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳಿಗೆ ಪ್ರಯಾಣಿಸಲು ಹಲವು ಬಾರಿ ವಿಮಾನ ಹಾಗೂ ಹೆಲಿಕಾಪ್ಟರ್ ಬಳಕೆ ಮಾಡಿದ್ದಾರೆ. 2023ನೇ ಆಗಸ್ಟ್ 18ರಿಂದ ಆರಂಭವಾದ ಅವರ ವಾಯು ಹಾರಾಟ ಇದುವರೆಗೂ ಮುಂದುವರಿದಿದೆ. ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿ ಬಳಸಿದ ಜಿಎಂಪಿ ಕಂಪನಿಯ ವಿಶೇಷ ವಿಮಾನಕ್ಕೆ ಒಂದೇ ದಿನದ ವೆಚ್ಚ ₹1 ಕೋಟಿಗೂ ಅಧಿಕ.

ಕೆಲವೊಮ್ಮೆ ಮೂರು ದಿನಗಳ ಪ್ರಯಾಣ ಮಾಡಿದ್ದು, ಬೆಂಗಳೂರು–ಮುಂಬೈ, ಬೆಂಗಳೂರು–ದೆಹಲಿ, ದೆಹಲಿ– ಮುಂಬೈ ಪ್ರಯಾಣ ಮಾಡಿದ್ದು ಒಟ್ಟು ₹79 ಲಕ್ಷ ವೆಚ್ಚ ಮಾಡಲಾಗಿದೆ. ಬೆಂಗಳೂರು ಸಮೀಪ ಇರುವ ಗೌರಿಬಿದನೂರಿಗೆ ಎಚ್‌ಎಎಲ್ ಏರ್‌ಪೋರ್ಟ್‌ನಿಂದ ಜಿಎಂಪಿ ಕಂಪನಿಯ ಹೆಲಿಕಾಪ್ಟರ್‌ನಲ್ಲಿ ಹೋಗಿದ್ದಕ್ಕೆ ₹7,78,800 ಖರ್ಚು ಮಾಡಲಾಗಿದೆ.

ರಾಜ್ಯಪಾಲರು, ಮುಖ್ಯಮಂತ್ರಿ ಹಾಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ವಿಮಾನ ಹಾಗೂ ಹೆಲಿಕಾಪ್ಟರ್ ಬಳಸಲು ಅವಕಾಶವಿದೆ ಎಂದು ಮಾಹಿತಿಯಲ್ಲಿ ವಿವರಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್
ಬೆಂಗಳೂರು ಪ್ರಾದೇಶಿಕ ಕಛೇರಿ

ಸಾರ್ವಜನಿಕ ಸೂಚನೆ

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಕಲಂ 35 ಎ ಜೊತೆಗೆ ಓದಲಾದ ಕಲಂ 56 ರ ಅಡಿಯಲ್ಲಿ ನಿರ್ದೇಶನಗಳು - ದಿ ಅನಾವರ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು, ಕರ್ನಾಟಕ - ಅವಧಿಯ ವಿಸ್ತರಣೆ

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಕಲಂ 35 ಎ ಜೊತೆಗೆ ಓದಲಾದ ಕಲಂ 56ರ ಅಡಿಯಲ್ಲಿ ... ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು, ಕರ್ನಾಟಕ - ಈ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳಿಗೆ ದಿನಾಂಕ ಜೂನ್ 12, 2024 ರ ನಿರ್ದೇಶನ ಸಂಖ್ಯೆ CO.DOS.SED No. S-1931/12.23.001/2024-25 ರ ಮೂಲಕ ಒಳಪಡಿಸಲಾಗಿತ್ತು ... DOR.MON/D-25/12.23.001/2025-26 ... ಡಿಸೆಂಬರ್ 12, 2025 ... [illegible]

2. ಅದರಂತೆ, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಕಲಂ 35 ಎ ರ ಉಪ ಕಲಂ (1) ರ ಜೊತೆಗೆ ಓದಲಾದ ಕಲಂ 56 ರ ಅಡಿಯಲ್ಲಿ ... ಡಿಸೆಂಬರ್ 12, 2025 ರಿಂದ ... ಮಾರ್ಚ್ 12, 2026 ... [illegible]

3. ಉಲ್ಲೇಖಿತ ನಿರ್ದೇಶನದ ಇತರ ನಿಯಮಗಳು ಮತ್ತು ಷರತ್ತುಗಳು ಬದಲಾಗದೆ ಇರುತ್ತವೆ.

ಬೆಂಗಳೂರು ಸಹಿ/-
ದಿನಾಂಕ: ಡಿಸೆಂಬರ್ 12, 2025 ಪ್ರಾದೇಶಿಕ ನಿರ್ದೇಶಕರು

ಕರ್ನಾಟಕ ಲೋಕೋಪಯೋಗಿ ಇಲಾಖೆ
ಪ್ರಧಾನ ಇಂಜಿನಿಯರ್‌ರವರ ಕಛೇರಿ, ಪಿ.ಆರ್.ಎ.ಎಂ.ಸಿ., ಪಿಡಬ್ಲ್ಯೂಡಿ, ಬೆಂಗಳೂರು-560001

ಸಂ: ಪ್ರಇಂ/ಲೋಇ/40/ಪಿಆರ್‌ಎಎಂಸಿ/2025-26/1332 ದಿನಾಂಕ: 10.12.2025

ಅಲ್ಪಾವಧಿ ಟೆಂಡರ್

ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ರಸ್ತೆ ಸುರಕ್ಷಾ ಕಾಮಗಾರಿಗಳಿಗೆ ಹಾಗೂ ಬೆಂಗಳೂರು ಜಿಲ್ಲೆಯಲ್ಲಿ ಮೂರು ಸರಕು ಸೇವೆಗೆ ಅಲ್ಪಾವಧಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ. ರವರು ರಾಜ್ಯಪಾಲರ ಪರವಾಗಿ ಆಹ್ವಾನಿಸುತ್ತಿದ್ದಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಕೆಪಿಪಿ ಪೋರ್ಟಲ್‌ನಿಂದ (https://kppp.karnataka.gov.in) ದಿನಾಂಕ: 12.12.2025ರಂದು ಅಪರಾಹ್ನ 05:30ರ ನಂತರ ಪಡೆಯಬಹುದಾಗಿರುತ್ತದೆ.

ಸಹಿ/-, ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ, ಲೋ.ಇ., ಬೆಂಗಳೂರು

ವಾಸಾಸಂಇ/ವಾಪ್ರ/ಎಲ್.ಓ/4381/2025-26

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಜ್ಜೈ, ಮಂಗಳೂರು-575004
ದೂರವಾಣಿ: 0824-2885755 CIN: U40109 KA 2002 SGC 030425

ಕ್ರಮ ಸಂಖ್ಯೆ: E-237061/268681 ದಿನಾಂಕ: 02.12.2025

ಟೆಂಡರು ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ವಿಧಾನದಲ್ಲಿ ಮಾತ್ರ)

ಮ.ವಿ.ಸ.ಕಂ ಯು ಈ ಕೆಳಗಿನ ಸಾಮಗ್ರಿಯ ತಯಾರಿಕೆ ಹಾಗೂ ಸರಬರಾಜಿಗಾಗಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಗ್ರಿಯ ವಿವರ	ಪ್ರಮಾಣ
MESCOM/2025-26/IND0123	ತ್ರಿಪಕ್ಷ ಗೊತ್ತುಪಾಡುಗಳನ್ನುಳ್ಳ ಸಮುಚ್ಚಯಗಳು	19,813.78 ಮೀಟರ್
MESCOM/2025-26/IND0150	ನಂ 8 ಸ್ಟ್ರೈನ್ ಇನ್ಸುಲೇಟರ್	1,20,000 ಸಂಖ್ಯೆಗಳು

ಆಸಕ್ತ ಅರ್ಹ ಬಿಡ್ಡುದಾರರು **ದಿನಾಂಕ: 12.12.2025** ಅಥವಾ ನಂತರ ವೆಬ್‌ಸೈಟ್ **www.kppp.karnataka.gov.in** ಗೆ ಲಾಗಾನ್ ಮಾಡಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ)(ಖರೀದಿ)

DIPR/DK/KSMCA/1238/25-26 dt: 11.12.2025

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ **1912**ಕ್ಕೆ ಕರೆ ಮಾಡಿ

NATIONAL INSTITUTE OF MENTAL HEALTH & NEURO SCIENCES
INSTITUTE OF NATIONAL IMPORTANCE
Post Box No. 2900, Hosur Road, Bengaluru – 29
Ph: 080-2699 5708, 5323, 5290 | Website: http://www.nimhans.ac.in

No. NIMH/RECT/Non-PG/JR&SR/ADVT-Jan/2025-26 Date: 08.12.2025

WALK-IN INTERVIEW NOTIFICATION

NIMHANS will be conducting the Walk-in Interview for the posts of Non-PG Senior Resident and Non-PG Junior Resident under various departments purely on contract basis. The interviews are scheduled to be held on **02.01.2026** and **03.01.2026 @ 09:00 AM** at the **Seminar Hall, 1st Floor, Director's Office, NIMHANS, Bengaluru – 560 029**

For further details, please visit the **"Recruitment and Notifications"** section on the **NIMHANS** website **http://www.nimhans.ac.in.**

Sd/-
DIRECTOR

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
ನವನಗರ, ಹುಬ್ಬಳ್ಳಿ-580 025
0836-2956097, 2224274, 2222161

ಕ್ರ.ಸಂ:ಹು.ಧಾ.ನ.ಪ್ರಾ/ಮಾ.ಶಿ/ನಿ.ಸಿ/ಇ-ಹರಾಜು/25-26 ದಿನಾಂಕ: 11-12-2025

ಸಾರ್ವಜನಿಕ ಪ್ರಕಟಣೆ.

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಇ-ಹರಾಜು ಅಧಿಸೂಚನೆ **ಸಂಖ್ಯೆ:ಹು.ಧಾ.ನ.ಪ್ರಾ/ಇ.ಹ.ಪ್ರ/2025-26/3924 ದಿನಾಂಕ: 17-11-2025**ರ ಪ್ರಕಟಣೆಯನ್ನು **ದಿನಾಂಕ: 19-11-2025** ಹಾಗೂ **20-11-2025** ರಂದು ದಿನಪತ್ರಿಕೆಯಲ್ಲಿ ನೀಡಿ, ಸದರಿ ಇ-ಹರಾಜಿನ ಲೈವ್ ಬಿಡ್ಡಿಂಗ್ **ದಿನಾಂಕ: 09-12-2025** ರಂದು ಬೆಳಿಗ್ಗೆ **11-00** ಗಂಟೆಯಿಂದ **ದಿನಾಂಕ: 11-12-2025** ರ ಸಾಯಂಕಾಲ **4-00** ಗಂಟೆಯವರೆಗೆ ನಿಗದಿಪಡಿಸಲಾಗಿತ್ತು. ಆದರೆ ಕೆಪಿಪಿ ತಂತ್ರಾಂಶದಲ್ಲಿ ತಾಂತ್ರಿಕ ಕಾರಣದಿಂದ **ದಿನಾಂಕ: 11-12-2025** ರಂದು ನೋಂದಾಯಿತ ಬಿಡ್‌ದಾರರಿಗೆ ಬಿಡ್ ಮಾಡಲು ತೊಂದರೆಯಾಗಿದ್ದು, ಕಾರಣ ಸದರಿ ಲೈವ್ ಬಿಡ್ಡಿಂಗ್‌ನ್ನು ತಾತ್ಕಾಲಿಕವಾಗಿ ಮುಂದೂಡಲು ತೀರ್ಮಾನಿಸಲಾಗಿರುತ್ತದೆ. ಮುಂದಿನ ಲೈವ್ ಬಿಡ್ಡಿಂಗ್ ದಿನಾಂಕವನ್ನು ದಿನಪತ್ರಿಕೆಯಲ್ಲಿ ಪ್ರಕಟಣೆ ಮೂಲಕ ಶೀಘ್ರದಲ್ಲಿ ತಿಳಿಸಲಾಗುವುದು. ಕಾರಣ ಇ-ಹರಾಜಿನಲ್ಲಿ ಭಾಗವಹಿಸಿದ ಬಿಡ್‌ದಾರರು ಸಹಕರಿಸಬೇಕಾಗಿ ಕೋರುತ್ತೇವೆ.

ಸಹಿ/- ಅಧ್ಯಕ್ಷರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
ಸಹಿ/- ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/974/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ
ಕೌಶಲ್ಯ ಭವನ, ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 29.
ದೂರವಾಣಿ: 080-25189108 e-mail ID: detadadm.2024@gmail.com

ಅಂತಿಮ ಕಾರಣ ಕೇಳುವ ನೋಟೀಸ್

ಶ್ರೀಮತಿ ಡಿ. ಸುಮ ಕಿರಿಯ ತರಬೇತಿ ಅಧಿಕಾರಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ನೆಲಮಂಗಲ ಆದ ನೀವು ಈ ಹಿಂದೆ ಯಾವುದೇ ಮುನ್ಸೂಚನೆ ನೀಡದೇ, ರಜೆಯನ್ನು ಮಂಜೂರು ಮಾಡಿಸಿಕೊಳ್ಳದೆ ಕರ್ತವ್ಯಕ್ಕೆ ಪದೇ ಪದೇ ಅನಧಿಕೃತ ಗೈರು ಹಾಜರಾಗಿರುವುದು ಕಂಡುಬಂದಿರುತ್ತದೆ ಹಾಗೂ ಪ್ರಸ್ತುತ ದಿನಾಂಕ:01-03-2023 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಈ ನಿಟ್ಟಿನಲ್ಲಿ ತಮ್ಮ ಮೇಲೆ ಶಿಸ್ತು ಕ್ರಮಕ್ಕಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957 ರ ನಿಯಮ-11 ರ ಪ್ರಕಾರ ದೋಷಾರೋಪಣಾ ಪಟ್ಟಿ ಸಂ. ಕೈತಉ/ತರಬೇತಿ-1/ಶಿಸ್ತು-1/ವಿವಿ-71/2022-23 (ಭಾಗ-2) ದಿನಾಂಕ:21-02-2023 ರಲ್ಲಿ ನೋಟೀಸ್ ಜಾರಿಮಾಡಲಾಗಿರುತ್ತದೆ.

ಸದರಿ ನೋಟೀಸ್‌ಗಳಿಗೆ ಸಮಜಾಯಿಷಿ ಸಲ್ಲಿಸದೆ ಹಾಗೂ ಕರ್ತವ್ಯಕ್ಕೂ ಕೂಡ ಹಾಜರಾಗದೇ ಇರುವುದರಿಂದ ನೀವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957 ರನ್ವಯ ಶಿಸ್ತು ಕ್ರಮಕ್ಕೆ ಅರ್ಹರಾಗಿರುತ್ತೀರಿ ಆದ್ದರಿಂದ, ಈ ನೋಟೀಸ್ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಈ ಬಗ್ಗೆ ಸೂಕ್ತ ಸಮಜಾಯಿಷಿಯನ್ನು ನೀಡುವಂತೆ ಈ ಮೂಲಕ ಅಂತಿಮವಾಗಿ ತಿಳಿಸಲಾಗಿದೆ. ತಪ್ಪಿದಲ್ಲಿ ನೀವು ಹೇಳುವುದು ಏನೂ ಇಲ್ಲ ಎಂದು ತಿಳಿದು ನಿಯಮಾನುಸಾರ ನಿಮ್ಮ ಮೇಲೆ ಸೂಕ್ತ ಶಿಸ್ತು ಕ್ರಮ ಕೈಗೊಂಡು ಸಿಸಿಎ ನಿಯಮ 8 (viii) ರಂತೆ ಸೇವೆಯಿಂದ ವಜಾಗೊಳಿಸಲಾಗುವುದು ಎಂದು ಈ ಮೂಲಕ ಸೂಚಿಸಿದೆ.

ಸಹಿ/-
DIPR/CP/4375/NR/2025-26 ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ

Office of the Engineer-in-Chief,
Planning & Road Asset Management Center (PRAMC),
4th Floor, PWD Annex Building, K.R. Circle, Bengaluru-01.

ಸಂಖ್ಯೆ: ಪ್ರಇಂ:ಪ್ರಾಮ್‌ಸಿ:ಲೋಇ:2025-26 ದಿನಾಂಕ: 11.12.2025

ಅಧಿಸೂಚನೆ

Sealed Quotations invited from the firms/Dealers for the work Establishment of millet Value Chain Park, Raichur ಕಾಮಗಾರಿಗೆ 4 TPH Seed Processing Unit ಯಂತ್ರೋಪಕರಣವನ್ನು Supply, Installation, Training & Commissioning ಮಾಡುವ ಕುರಿತು. ಸದರಿ ಕಾಮಗಾರಿಗೆ VICE-CHANCELLOR U.A.S Raichur & Special Officer (Seeds) University of Agricultural Sciences Raichur ರವರು ಅನುಮೋದಿಸಿರುವ ಪತ್ರದ ಸಂ:ಕೃ.ವಿ.ವಿ.ರಾ/ಬೀಜ ಘಟಕ/268/2025-26 **ದಿನಾಂಕ: 04.12.2025** ರಲ್ಲಿ ಸದರಿ ಕಾಮಗಾರಿಗೆ ಅವಶ್ಯವಿರುವ 4 TPH Seed Processing Unit ಯಂತ್ರೋಪಕರಣವನ್ನು Supply, Installation, Training & Commissioning ಮಾಡಲು ಅನುಮತಿ ಸೂಚಿಸಿರುತ್ತಾರೆ. ಅದರಂತೆ ಮೊಹರು ಬಂದ ಲಕೋಟೆಯಲ್ಲಿ ಯಂತ್ರೋಪಕರಣವನ್ನು Supply, Installation, Training & Commissioning ಮಾಡಲು ಅನುಭವವುಳ್ಳ ಸಂಸ್ಥೆಗಳಿಂದ ದರಗಳನ್ನು ಆಹ್ವಾನಿಸಲಾಗಿದ್ದು, ಸದರಿ ದರಗಳನ್ನು ಈ ಕಛೇರಿಗೆ **ದಿ: 22.12.2025 ರ ಸಂಜೆ: 4.00 ಗಂಟೆಯೊಳಗೆ** ಸಲ್ಲಿಸುವುದು. ಯಂತ್ರೋಪಕರಣವನ್ನು Supply, Installation, Training & Commissioning ಮಾಡುವುದು ಮತ್ತು ಇದರ ಬಗ್ಗೆ ವಿವರವಾದ ಮಾಹಿತಿಯನ್ನು ಪಡೆಯಲು ಕಛೇರಿಯ ಕೆಲಸದ ಸಮಯದಲ್ಲಿ ಬಂದು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು.
ವಾಸಾಸಂಇ/ಉನಿ-ಸಿ.ಪಿ/4385/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, ಮೈಸೂರು ಜಿಲ್ಲೆ, ಮೈಸೂರು
ಡಾ। ಬಾಬು ಜಗಜೀವನರಾಂ ಭವನದ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು-12
ದೂ.ಸಂ.:0821-2344661 ಇ-ಮೇಲ್:dswomysore9@gmail.com

ಸಂ:ಜಂ.ನಿ:ತಸ:ಸಿಆರ್:55:2025-26 ದಿನಾಂಕ: 10.12.2025

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮೈಸೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯ/ವಸತಿಶಾಲೆಗಳಿಗೆ ಗ್ರೂಪ್‌ವಾರು ಆಹಾರ ಪದಾರ್ಥಗಳು, ವಿವಿಧ ತರಕಾರಿ ಮತ್ತು ಇತರೆ ಸಾಮಗ್ರಿಗಳ ಪೂರೈಕೆಗಾಗಿ e-procurement ಮೂಲಕ ಟೆಂಡರ್ ಆಹ್ವಾನಿಸಲಾಗಿದೆ

1	ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳ ಸರಬರಾಜು ಅಂದಾಜು ಮೊತ್ತ ರೂ. 35,27,58,078.00	2 ವರ್ಷ ಅವಧಿ

ಟೆಂಡರ್ ಅರ್ಜಿಗಳನ್ನು ಇ-ಪ್ರಕ್ಯೂರ್‌ಮೆಂಟ್ **website: http://kppp.karnataka.gov.in** ಮೂಲಕ ಡೌನ್ ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ **ದಿನಾಂಕ: 24.12.2025 ರ ಸಮಯ 5.30 ಗಂಟೆಯವರೆಗೆ.**

ಸಹಿ/- ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ
ಮೈಸೂರು

ವಾಸಾಸಂಇ/ಮೈಸೂರು/1354/ಎಸ್‌ಎಸ್‌ಸಿ/2025-26

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಾಜರಾಜೇಶ್ವರಿನಗರ ವಿಭಾಗ, ಡಿಡಬ್ಲ್ಯೂಸಿ ರೆಮ್ಕೊ ಲೇಔಟ್ ಹತ್ತಿರ, ಜವರೇಗೌಡನ ದೊಡ್ಡಿ ಮುಖ್ಯರಸ್ತೆ, ರಾಜರಾಜೇಶ್ವರಿನಗರ, ಬೆಂಗಳೂರು-560098.

ಸಂಖ್ಯೆ: ಬೆಂಪನಪಾ/ಕಾಅ(ಟಿಇಸಿ)/ಟೆಂಡರ್/01/2025-26 ದಿನಾಂಕ: 11-12-2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಾಜರಾಜೇಶ್ವರಿನಗರ ವಿಭಾಗ, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಾಗಿ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಏಜೆನ್ಸಿದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು
1	ಬೆಂಗಳೂರು ಪಶ್ಚಿಮ ನಗರ ಪಾಲಿಕೆಗೆ ಬಾಡಿಗೆ ಆಧಾರದ ಮೇಲೆ ಟೋವಿಂಗ್ ವಾಹನವನ್ನು (ವಾಹನ, ಇಂಧನ, ಚಾಲಕ ಮತ್ತು ವಾಹನ ನಿರ್ವಹಣೆ ಸೇರಿದಂತೆ) ಒದಗಿಸುವುದು. **ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ): 2,46,00,000/-, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,69,000/-**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): **15-12-2025 ರಂದು ಸಂಜೆ 4.00 ಗಂಟೆವರೆಗೆ. 3)** ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **17-12-2025 ರಂದು ಮಧ್ಯಾಹ್ನ 3.00 ಗಂಟೆಗೆ. 4)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **22-12-2025 ರಂದು ಸಂಜೆ 4.00 ಗಂಟೆವರೆಗೆ. 5)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **24-12-2025 ರಂದು ಬೆಳಿಗ್ಗೆ 11.00 ಗಂಟೆಗೆ (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು). 6)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **26-12-2025 ರಂದು ಸಂಜೆ 4.00 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಟಿಇಸಿ, ರಾಜರಾಜೇಶ್ವರಿನಗರ ವಿಭಾಗ, ಬೆಂಪನಪಾ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560041
registrar@rguhs.ac.in +91-80-29601928

No. RGUHSB/PRAS/2/2025 (112741) ದಿನಾಂಕ: 11/12/2025

ಇ-ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

The Registrar Rajiv Gandhi University of Health Sciences invites tender for Services of Management and Publishing of Online Scientific E-Journals, E-News Letters on Turnkey Basis to RGUHS. More details on the Service are provided in the attached Terms of Reference.

Tender No. RGUHSK/2025-26/SE0027

1	ಡೌನ್‌ಲೋಡ್‌ಗಾಗಿ ಟೆಂಡರ್ ಡಾಕ್ಯೂಮೆಂಟ್‌ಗಳ ಲಭ್ಯತೆ	11/12/2025, 13:47 ಗಂಟೆ
2	ಬಿಡ್ ಪೂರ್ವ-ಭಾವಿ ಸಭೆ	18/12/2025, 11:30 ಗಂಟೆ
3	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	26/12/2025, 17:30 ಗಂಟೆ
4	ತಾಂತ್ರಿಕ ಬಿಡ್ ತೆರೆಯುವುದು	29/12/2025, 11:30 ಗಂಟೆ
5	ಆರ್ಥಿಕ ಬಿಡ್ ತೆರೆಯುವುದು	31/12/2025, 11:30 ಗಂಟೆ
6	ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/-
ಕುಲಸಚಿವರು

ವಾ.ಸಾ.ಸಂ.ಇ/ವಾಪ್ರ/4383/ಆಕಾರ್/2025-26

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
ದೇವರಾಜ ಅರಸು ಭವನ, 4ನೇ ಮಹಡಿ, ನಂ 16ಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು- 560052, ದೂ.080-22374832, 22374834
ಇ-ಮೇಲ್: mddbcdc@gmail.com, Web : www.dbcdc.karnataka.gov.in

ಸಂಖ್ಯೆ : ದೇಹಿನಿ/ಟೆಂ/ಕೊ.ಬಾ/ಸಿ.ಆರ್-73/2025-26 ದಿನಾಂಕ: 12-12-2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

2025-26ನೇ ಸಾಲಿನಲ್ಲಿ ನಿಗದಿಪಡಿಸಿದ ಗುರಿಯನ್ವಯ ಕೊಳವೆ ಬಾವಿಗಳನ್ನು ಕೊರೆಯಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಒಳಪಡುವ 1)ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, 2)ಕರ್ನಾಟಕ ಉಪ್ಪಾರಅಭಿವೃದ್ಧಿ ನಿಗಮ 3)ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, 4)ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, 5)ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ, 6)ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ, 7)ಕರ್ನಾಟಕ ಒಕ್ಕಲಿಗ ಅಭಿವೃದ್ಧಿ ನಿಗಮ. 8)ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, 9)ಕರ್ನಾಟಕ ಮರಾಠ ಸಮುಯದಾಯಗಳ ಅಭಿವೃದ್ಧಿ ಹಾಗೂ 10)ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, 11)ಕಾಡುಗೊಲ್ಲ ಅಭಿವೃದ್ಧಿ ನಿಗಮಗಳಿಂದ ಅನುಷ್ಠಾನ ಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ಡ್ರಿಲಿಂಗ್ ಏಜೆನ್ಸಿಗಳಿಂದ ಎರಡು ಡಾಕ್ಯೂಮೆಂಟ್ ವಿಧಾನದಲ್ಲಿ ಚಾಮರಾಜನಗರ ಜಿಲ್ಲೆಗೆ ಅಲ್ಪಾವದಿ ಟೆಂಡರ್ ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲಾಗಿದ್ದು ಟೆಂಡರ್‌ನಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಟೆಂಡರ್ ಸಲ್ಲಿಸುವ ವಿಧಾನ, ನಿಬಂಧನೆಗಳು, ಇ.ಎಂ.ಡಿ ಮೊತ್ತ ಕೊರೆಯಬೇಕಾದ ಕೊಳವೆ ಬಾವಿಗಳ ಸಂಖ್ಯೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https://kppp.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

1) ಪ್ರಿ-ಬಿಡ್ ಪ್ರಶ್ನೆಗಳನ್ನು (Querries) ಸಲ್ಲಿಸಲು ನಿಗಧಿ ಪಡಿಸಿದ ಕೊನೆಯ ದಿನಾಂಕ:13-12-2025ರ 17:30 ಗಂಟೆಯವರೆಗೆ. 2) ಪ್ರಿ-ಬಿಡ್ ಸಭೆಯ ದಿನಾಂಕ:15-12-2025 ಬೆಳಗ್ಗೆ 11:30ಕ್ಕೆ 3) ಇ-ಪೋರ್ಟಲ್ ಮುಖಾಂತರ ಬಿಡ್ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 19-12-2025 ರ 17:30 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20-12-2025 ರ ಬೆಳಿಗ್ಗೆ 11:00 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ:22-12-2025 ಬೆಳಿಗ್ಗೆ 11:00 ಗಂಟೆಗೆ.

ಸದರಿ ಟೆಂಡರ್ ಅನ್ನು ಪ್ರಕಟಣೆಯನ್ನು ತಿರಸ್ಕರಿಸುವ/ರದ್ದುಪಡಿಸುವ ಪೂರ್ಣ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ವಾ.ಸಾ.ಸಂ.ಇ/ವಾಪ್ರ/4400/2025-26

ಕಾರ್ಮಿಕ ರಾಜ್ಯ ವಿಮಾ ನಿಗಮ
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ
कर्मचारी राज्य बीमा निगम
श्रम एवं रोजगार मंत्रालय, भारत सरकार
EMPLOYEES' STATE INSURANCE CORPORATION
Ministry Of Labour & Employment, Govt. of India
क. रा. बी. नि.
E. S. I. C.
सत्यमेव जयते

ಪ್ರಾದೇಶಿಕ ಕಛೇರಿ, ಕರ್ನಾಟಕ
ನಂ.10, ಬಿನ್ನಿಫೀಲ್ಡ್ಸ್, ಬಿನ್ನಿಪೇಟೆ, ಬೆಂಗಳೂರು - 560 023
क्षेत्रीय कार्यालय, कर्नाटक
नं10., बिन्नीफील्ड्स, बिन्नीपेट, बेंगलुरू023 560 - .
REGIONAL OFFICE, KARNATAKA
No.10, Binnyfields, Binnypet, Bengaluru – 560 023.
Phone: 080-26742485, Email: rd-karnataka@esic.gov.in
Website: www.esic.gov.in

ENGAGEMENT OF ASSISTANT ENGINEER (CIVIL), ASSISTANT ENGINEER (ELECTRICAL), JUNIOR ENGINEER (CIVIL), JUNIOR ENGINEER (ELECTRICAL) ON CONTRACT BASIS

Applications are invited from Retired Engineers from Central / State PWD or CPSUs/PSUs for the posts of Assistant Engineer (Civil), Assistant Engineer (Electrical), Junior Engineer (Civil) and Junior Engineer (Electrical) on contract basis in Employees' State Insurance Corporation (ESIC), Regional Office, Bengaluru, Karnataka.
The details along with terms & conditions for engagement of engineers on contract basis are given below.

1	**Post**	i. **Assistant Engineer(Civil)** **No. of posts: 01** ii. **Assistant Engineer(Electrical)** **No. of posts: 03** iii. **Junior Engineer(Civil)** **No. of posts: 03** iv. **Junior Engineer (Electrical)** **No. of posts: 01**
2	**Place of Posting**	i. **Assistant Engineer (Civil) - No. of posts: 01** (ESIC Model Hospital, Rajajinagar, Bengaluru) ii. **Assistant Engineer (Electrical) - No. of posts: 03** ESIC Regional Office, Bengaluru - 01, ESIC Model Hospital , Rajajinagar, - 01, ESIC Hospital, Kalaburagi - 01 iii. **Junior Engineer (Civil) - 03** ESIC Regional Office - 01, ESIC Model Hospital , Rajajinagar - 01, ESIC Hospital, Kalaburagi - 01 iv. **Junior Engineer (Electrical)** - No. of posts: 01 (ESIC Hospital, Peenya)
3	**Qualification**	**Assistant Engineer (Civil)** – Degree / Diploma in Civil Engineering from recognized University/Institution. **Assistant Engineer (Electrical)** - Degree / Diploma in Electrical Engineering from recognized University / Institution. **Junior Engineer (Civil)** – Degree / Diploma in Civil Engineering from recognized University / Institution. **Junior Engineer (Electrical)** – Degree / Diploma in Electrical Engineering from recognized University/Institution.
4.	Eligibility	**Assistant Engineer (Civil)** - Candidates who held the post of Assistant Engineer (Civil) or superior post at the time of retirement from Central / State Public Works Department (PWD) or Central/ State Public Sector Undertakings (CPSUs/PSUs). **Assistant Engineer (Electrical)** - Candidates who held the post of Assistant Engineer (Electrical) or superior post at the time of retirement from Central / State Public Works Department (PWD) or Central/ State Public Sector Undertakings (CPSUs/PSUs). **Junior Engineer(Civil)** - Candidates who held the post of Junior Engineer (Civil) or superior post at the time of retirement from Central / State Public Works Department (PWD) or Central/ State Public Sector Undertakings (CPSUs/PSUs). **Junior Engineer (Electrical)** - Candidates who held the post of Junior Engineer (Electrical) or superior post at the time of retirement from Central / State Public Works Department (PWD) or Central/ State Public Sector Undertakings (CPSUs/PSUs). (Preference will be given to Retired Government Engineers having experience in building construction and maintenance.)
5.	Maximum Age	**64 years as on 26-12-2025 (last date for submission of application)**
6.	**Remuneration**	For retired employees from pensionable Government employment: Consolidated monthly remuneration as per extant Government norms. The admissible amount would be computed by deducting pension amount from the last drawn Basic salary. For retired employees from non-pensionable Government or Semi- Government employment like Autonomous bodies, PSUs etc.,: Consolidated monthly remuneration as given below would be admissible: For Assistant Engineer : **Rs 45,000/- per month.** For Junior Engineer : **Rs 33,630/- per month.** In addition, they are entitled to TA/DA for tours undertaken for official works, at rates applicable to regular Assistant Engineers/Junior Engineers of ESIC.
7.	Mode of Selection	Interview
8.	Date of Interview	Date and time of the Interview shall be fixed and intimated to the Shortlisted candidates in due course.
9.	Venue for Interview	**ESI Corporation, Regional Office, No.10, Binnyfields, Tank Bund Road, Binnypet, Bengaluru – 560 023.**
10.	**Last date for Submission of application**	Candidates should submit the duly filled in application form (Annexure-A) either by post/ hand/ e-mail on or before **26-12-2025.** Application through **E-mail** may be sent to pmd-ro.kar@esic.gov.in Application through **Speed post** may be addressed to: **Executive Engineer(PMD), ESI Corporation, Regional Office, No.10, Binnyfields, Tank Bund Road, Binnypet, Bengaluru - 560 023.** Application **by hand** may be submitted at the **Property Management Division, ESI Corporation, Regional Office, No.10, Binnyfields, Tank Bund Road, Binnypet, Bengaluru - 560 023.** Annexure-A available at **https://esic.gov.in/recruitments** and https://rokarnataka.esic.gov.in/recruitments under Recruitments Tab. Application should contain Mobile Number and e-mail ID of the applicant. **Call letters for Interview shall be issued through e-mail only.**
11.	**Leave Eligibility**	**Maximum one day leave for every month of completed service in Addition to Government Holidays.** **No other leave with pay would be admissible.**
12.	**Other Conditions**	**A.** Selected candidates will be required to sign an Agreement as per ESIC Headquarters' Letter No. Pt.PS/SE-V/Staff Matter/2013-PMD dated 08.03.2018 (Annexure-I). **B.** Tenure of contract is one year which will be extendable further on yearly basis based on satisfactory performance or until the appointment of a regular incumbent, whichever is earlier. However, no extension shall be granted beyond the age of 65 years.

Note: Candidates are required to bring all their certificates or documents in original along with two sets of self-attested photocopies on the date of Interview.

Place: Bengaluru
Date: 12-12-2025

EXECUTIVE ENGINEER (PMD)
FOR REGIONAL DIRECTOR
REGIONAL OFFICE, ESIC, KARNATAKA

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail:bgrr-cpc@federalbank.co.in Ph:080-22074610/24/25

BGRR/Pvt Sale/Q3/2025-26 **NOTICE FOR PRIVATE SALE OF GOLD** 11/12/2025

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective branches on any date after 17-12-2025 as shown below:

Br. Ainapur: Karchi Building, Opposite Pattan Panchayath,Taluk Athani, Belgaum, Karnataka, 591 303,Ph No. 08339-254084 :-14976400024837.
Br. Bangalore/R T Nagar: No.20, 1st Main Road, 108 'B' Bus Station, Ganga Nagar, R T Nagar P O, Bangalore, Karnataka- 560 032 :- 14726100220130,14726800072856,14726900003108.
Br. Ugarkhurd: Ghodagire Building, Opposite Post Office, Ugar Khurd, Athani Taluk, Belgaum, Karnataka-591316, Ph. No. 8339 272325 :- 14996400041821.
Br. Gonikopal: Sudharma Building,Near Masjid, Ponnampet Road Jn. Main Road, Gonikoppal, Kodagu- 571 213:- 19616100051871.

Bangalore 11-12-2025 **Senior Vice President & Zonal Head**

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ-1:ಟೆಂಡರ್-45:2025-26 ದಿನಾಂಕ: 09.12.2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಸಿ.ಇ.ಪಿ.ಎಂ.ಐ.ಜಡ್ (ಕೆ.ಎಂ.ಇ.ಆರ್.ಸಿ.) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:- (1) ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಇಲಾಖಾ ಹಾಸ್ಟಲ್‌ಗಳ ದುರಸ್ಥಿ/ಉನ್ನತೀಕರಣಕ್ಕಾಗಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿ. **ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಪಡೆಯುವುದು**
(2) ಚಿತ್ರದುರ್ಗ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಚಿತ್ರದುರ್ಗ ತಾಲ್ಲೂಕಿನಲ್ಲಿ 24 ವಸತಿ ನಿಲಯಗಳು, ಹೊಸದುರ್ಗ ತಾಲ್ಲೂಕಿನಲ್ಲಿ 06 ವಸತಿ ನಿಲಯಗಳು, ಹೊಳಲ್ಕೆರೆ ತಾಲ್ಲೂಕಿನಲ್ಲಿ 08 ವಸತಿ ನಿಲಯಗಳು ಮತ್ತು ಮೊಳಕಾಲ್ಮೂರು ತಾಲ್ಲೂಕಿನಲ್ಲಿ 07 ವಸತಿ ನಿಲಯಗಳಿಗೆ ದುರಸ್ಥಿ / ಉನ್ನತೀಕರಣಕ್ಕಾಗಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿ.
ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಪಡೆಯುವುದು
(3) ಚಿತ್ರದುರ್ಗ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯ ಚಿತ್ರದುರ್ಗ ತಾಲ್ಲೂಕಿನಲ್ಲಿ ಹಾಸ್ಟಲ್‌ಗಳು ಮತ್ತು ವಸತಿ ಶಾಲೆಗಳ ಉನ್ನತೀಕರಣಕ್ಕಾಗಿ ಹಾಗೂ ಹೊಸದುರ್ಗ ತಾಲ್ಲೂಕಿನಲ್ಲಿ ಹಾಸ್ಟಲ್‌ನ ಉನ್ನತೀಕರಣಕ್ಕಾಗಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿ. **ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಪಡೆಯುವುದು**

ಟೆಂಡರ್ ವಿವರಗಳು:- (1) ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ದಿನಾಂಕ: 09.12.2025 ರಿಂದ 19.12.2025 ರ 16.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪ್ರೀ ಬಿಡ್ ಮೀಟಿಂಗ್‌ನ್ನು ದಿನಾಂಕ: 16.12.2025 ರ ಪೂರ್ವಾಹ್ನ 11.30 ಗಂಟೆಗೆ ಲೋಕೋಪಯೋಗಿ ಇಲಾಖೆ, ವಿಭಾಗ ಕಛೇರಿಯಲ್ಲಿ ನಡೆಸಲಾಗುವುದು. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.12.2025 ರ ಅಪರಾಹ್ನ 16.30 ಗಂಟೆಯವರೆಗೆ (4) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.12.2025 ರ ಅಪರಾಹ್ನ 16.45 ಗಂಟೆಗೆ (5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು. (6) ಟೆಂಡರ್ ತಿದ್ದುಪಡಿ / ವಿಸ್ತರಣೆ / ಮಾರ್ಪಾಡುಗಳು ಇದ್ದರೆ ಕೆಪಿಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಕೆಪಿಪಿಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ 91 9240214000 & 91 9240214001. ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/524/2025-26 ಸಹಿ/- ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ-ಪಶ್ಚಿಮ) 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
	ಸಂ. ಬೆಂಜಮಂ/ಮುಅ(ತ್ಯಾನೀನಿ-ಪಶ್ಚಿಮ)/ಅಮುಅ(ತ್ಯಾನೀನಿ-ಹೆಚ್&ಎ.ವಿ-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/1731/2025-26 ದಿ: 09.12.2025	
1.	ಚಿಕ್ಕಬಾಣವಾರದ 5 ಎಂಎಲ್‌ಡಿ ಎಸ್‌ಟಿಪಿಗೆ ಬಿಡಿಎ ಶಿವರಾಮ ಕಾರಂತ್ ಲೇಔಟ್ ನ ಕೆರೆಗುಡ್ಡದಹಳ್ಳಿಯಿಂದ 800 ಮಿ.ಮೀ ವ್ಯಾಸದ ಸಬ್‌ಮೈನ್ ಒಳಚರಂಡಿಯನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ. 396.61 ಲಕ್ಷಗಳು / ರೂ. 5.95 ಲಕ್ಷಗಳು
	ಸಂ. ಬೆಂಜಮಂ/ಮುಅ(ತ್ಯಾನೀನಿ-ಪಶ್ಚಿಮ)/ಅಮುಅ(ತ್ಯಾನೀನಿ-ಹೆಚ್&ಎ.ವಿ-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/1733/2025-26 ದಿ: 09.12.2025	
2.	7ನೇ ಮುಖ್ಯ ರಸ್ತೆ ಆರ್‌ಎಂವಿ 2ನೇ ಹಂತದಲ್ಲಿ ಹಾಲಿಯಿರುವ 1200ಮಿ.ಮೀ ವ್ಯಾಸದ ಒಳಚರಂಡಿಯನ್ನು ಸಂಪರ್ಕಿಸಲು, 3ನೇ ಮುಖ್ಯ ರಸ್ತೆಯ ಉದ್ದಕ್ಕೂ ಆರ್‌ಎಂವಿ ಕ್ಲಬ್‌ನಿಂದ ಹಾಲಿಯಿರುವ 600ಮಿ.ಮೀ ವ್ಯಾಸದ ಆರ್‌ಸಿಸಿ ಎನ್‌ಪಿ-2 ದರ್ಜೆಯ ಒಳಚರಂಡಿ ಮಾರ್ಗದ ಬದಲಾಗಿ 600ಮಿ.ಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ದರ್ಜೆಯ ಒಳಚರಂಡಿ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ. 146.70 ಲಕ್ಷಗಳು / ರೂ. 2.2 ಲಕ್ಷಗಳು
	ಸಂ. ಬೆಂಜಮಂ/ಮುಅ(ತ್ಯಾನೀನಿ-ಪಶ್ಚಿಮ)/ಅಮುಅ(ತ್ಯಾನೀನಿ-ವಿ.ವಿ-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/1727/2025-26 ದಿ: 09.12.2025	
3.	ಬಾಳಯ್ಯನ ಕೆರೆಯಲ್ಲಿ ಹಾಲಿಯಿರುವ 800 ಮಿ.ಮೀ ವ್ಯಾಸದ ಕೊಳವೆ ಮಾರ್ಗಕ್ಕೆ ಸಂಪರ್ಕಿಸಲು ಕಾಮಾಕ್ಷಿಪಾಳ್ಯ ಬಸ್ ನಿಲ್ದಾಣದಿಂದ ಬಾಳಯ್ಯನ ಕೆರೆಯ ಎಸ್‌ಡಬ್ಲ್ಯೂಡಿ ಒಳಭಾಗದವರೆಗೆ 800ಮಿ.ಮೀ ಆರ್‌ಸಿಸಿ ಕೊಳವೆ ಮಾರ್ಗ ಒದಗಿಸಿ ಅಳವಡಿಸುವ ಕಾಮಗಾರಿ.	ರೂ. 373.30 ಲಕ್ಷಗಳು / ರೂ. 5.60 ಲಕ್ಷಗಳು
	ಸಂ. ಬೆಂಜಮಂ/ಮುಅ(ತ್ಯಾನೀನಿ-ಪಶ್ಚಿಮ)/ಅಮುಅ(ತ್ಯಾನೀನಿ-ವಿ.ವಿ-ಪ)/ಉಮುಅ(ತ್ಯಾನೀನಿ-ಪೂ&ಪ)/ತಾಂಸ-2/1729/2025-26 ದಿ: 09.12.2025	
4.	ಬೆಂಗಳೂರಿನ ಕಾಮಾಕ್ಷಿಪಾಳ್ಯದ ಬಾಳಯ್ಯನ ಕೆರೆಯಲ್ಲಿ ಕಾವೇರಿಪುರ ಮೈದಾನದಿಂದ ಹಾಲಿಯಿರುವ 800 ಮಿ.ಮೀ ವ್ಯಾಸದ ಕೊಳವೆ ಮಾರ್ಗದವರೆಗೆ 800 ಮಿ.ಮೀ ವ್ಯಾಸದ ಆರ್‌ಸಿಸಿ/ಡಿಡಬ್ಲ್ಯುಸಿ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ. 395.69 ಲಕ್ಷಗಳು / ರೂ. 5.94 ಲಕ್ಷಗಳು

ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 26.12.2025 ರಂದು ಸಂಜೆ 5.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 29.12.2025 ರ ಬೆಳಗ್ಗೆ 11.00 ಗಂಟೆಗೆ

ಸಹಿ/- ಮುಖ್ಯ ಅಭಿಯಂತರರು (ತ್ಯಾನೀನಿ-ಪಶ್ಚಿಮ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/4391/Zen/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ನಿಡಗುಂದಿ, ಜಿ:ವಿಜಯಪುರ.
ಇ-ಮೇಲ್:dam_division@rediffmail.com

ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2025-26/2388 ದಿನಾಂಕ:11.12.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Item Rate & Percentage basis from the eligible contractors for the work indents of Two Cover – (1) I .No. 2463 (others) – 50.73 Lakhs ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ 11.12.2025 ರಿಂದ 20.12.2025 ಸಾಯಂಕಾಲ 5.00 ಘಂಟೆಯವರೆಗೆ**

2) ತಾಂತ್ರಿಕ ಬಿಡ್ ತೆರೆಯುವ (**Two Cover**) **ದಿನಾಂಕ: 22.12.2025 ಮುಂಜಾನೆ 11.00 ಘಂಟೆಗೆ.**

3) ಆರ್ಥಿಕ ಬಿಡ್ ತೆರೆಯುವ (**Two Cover**) **ದಿನಾಂಕ: 28.12.2025 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/536/ಕೆಎಸ್‌ಎಂಸಿಎ/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಯಾವತ್ತೂ ಮನುಷ್ಯತ್ವದ ಮಹಿಮೆಯನ್ನು ಮರೆಯಬೇಡಿ. ನಮಗಿಂತಲೂ ಬೇರೆಯಾದ ದೇವರು ಹಿಂದೆ ಇರಲಿಲ್ಲ; ಮುಂದೆ ಬರುವುದಿಲ್ಲ. –ಸ್ವಾಮಿ ವಿವೇಕಾನಂದ

ಸಂಪಾದಕೀಯ

ಪಡಿತರ ಧಾನ್ಯಗಳ ಕಳ್ಳಸಾಗಣೆ ನಿಯಂತ್ರಣಕ್ಕೆ ಬಿಗಿ ಕ್ರಮ ಅಗತ್ಯ

ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಪಡಿತರ ಚೀಟಿದಾರರಿಗೆ ವಿತರಣೆಯಾಗುವ ಆಹಾರ ಧಾನ್ಯಗಳ ಕಳ್ಳಸಾಗಣೆ ದಶಕಗಳ ಕಾಲದಿಂದಲೂ ನಡೆಯುತ್ತಲೇ ಇದೆ. ಅನ್ನಭಾಗ್ಯ ಯೋಜನೆಯಡಿ ವಿತರಿಸುತ್ತಿರುವ ಅಕ್ಕಿ ಹೊರರಾಜ್ಯಗಳಿಗಷ್ಟೇ ಅಲ್ಲ, ದುಬೈ, ಸಿಂಗಪುರ ಸೇರಿದಂತೆ ವಿದೇಶಗಳಿಗೂ ಕಳ್ಳಸಾಗಣೆ ಆಗುತ್ತಿದೆ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರು ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಸದನದಲ್ಲೇ ಆರೋಪಿಸಿದ್ದಾರೆ. ಈ ಕುರಿತ ಪ್ರಶ್ನೆಗೆ ಉತ್ತರ ನೀಡಿರುವ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರು, ಪ್ರಸಕ್ತ ವರ್ಷದ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ಅವಧಿಯಲ್ಲಿ ಪಡಿತರ ಅಕ್ಕಿ ಕಳ್ಳಸಾಗಣೆ ಪ್ರಕರಣಗಳಲ್ಲಿ 570 ಮಂದಿಯನ್ನು ಬಂಧಿಸಿ, 29,600 ಕ್ವಿಂಟಲ್ ಅಕ್ಕಿ ವಶಪಡಿಸಿಕೊಳ್ಳಲಾಗಿದೆ ಎಂಬ ಮಾಹಿತಿ ಒದಗಿಸಿದ್ದಾರೆ. ಸಚಿವರ ಉತ್ತರವು ಪಡಿತರ ಧಾನ್ಯಗಳ ಕಳ್ಳಸಾಗಣೆ ಅವ್ಯಾಹತವಾಗಿ ಮುಂದುವರಿದಿರುವುದನ್ನು ಖಚಿತಪಡಿಸುವುದರ ಜೊತೆಯಲ್ಲೇ, ರಾಜ್ಯದಲ್ಲಿ ಪಡಿತರ ವಿತರಣಾ ವ್ಯವಸ್ಥೆಯು ದೋಷಮುಕ್ತವಾಗಿಲ್ಲ ಎಂಬುದನ್ನು ಬಹಿರಂಗಪಡಿಸಿದೆ. ಪಡಿತರ ಧಾನ್ಯಗಳ ಕಳ್ಳಸಾಗಣೆ ಕುರಿತು ಲೋಕಾಯುಕ್ತವು 2011ರಿಂದ ಈಚೆಗೆ ಹಲವು ಬಾರಿ ವರದಿಗಳನ್ನು ನೀಡಿದೆ. ಮಹಾಲೇಖಪಾಲರ (ಸಿಎಜಿ) ವರದಿಗಳಲ್ಲೂ ಹಲವು ಬಾರಿ ಬೆಳಕು ಚೆಲ್ಲಲಾಗಿತ್ತು.

ಬಡವರ ಘನತೆ ಎತ್ತಿಹಿಡಿಯುವುದು ಅನ್ನಭಾಗ್ಯ ಯೋಜನೆಯ ಗುರಿ. ಈ ದಿಸೆಯಲ್ಲಿ ಪಡಿತರ ಅಕ್ಕಿ ಕಳ್ಳಸಾಗಣೆ ದಂಧೆಗೆ ಮೂಗುದಾರ ಹಾಕಬೇಕಿದೆ.

ಆಹಾರ ಧಾನ್ಯಗಳ ಸಾಗಾಣಿಕೆಯ ಗುತ್ತಿಗೆ ಪಡೆದಿರುವ ಗುತ್ತಿಗೆದಾರರೇ ಮಾರ್ಗ ಬದಲಿಸಿ ಆಹಾರ ಧಾನ್ಯ ಕಳ್ಳಸಾಗಣೆ ಮಾಡುತ್ತಿರುವ ಪ್ರಕರಣಗಳೂ ವರದಿಯಾಗುತ್ತಿವೆ. ಸರ್ಕಾರದ ಅಧಿಕಾರಿಗಳು ಶಾಮೀಲು ಆಗಿರುವುದರಿಂದಲೇ ಬಡವರ ಹೊಟ್ಟೆ ತುಂಬಿಸಬೇಕಾದ ಪಡಿತರ ಧಾನ್ಯಗಳನ್ನು ಕಾಳಸಂತೆಗೆ ಸಾಗಿಸುವ ದಂಧೆ ನಿರಾತಂಕವಾಗಿ ಮುಂದುವರಿದಿದೆ.

ದೇಶದ ಎಲ್ಲ ನಾಗರಿಕರಿಗೂ ಅಗತ್ಯ ಪ್ರಮಾಣದ ಆಹಾರದ ಲಭ್ಯತೆಯ ಖಾತರಿ ಒದಗಿಸುವ ಉದ್ದೇಶದಿಂದ ಅನುಷ್ಠಾನದಲ್ಲಿರುವ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅನ್ನಭಾಗ್ಯ ಯೋಜನೆ ಜಾರಿಯಲ್ಲಿದೆ. ಆದರೆ, ಪಡಿತರ ಧಾನ್ಯಗಳ ಕಳ್ಳಸಾಗಣೆ ಹಾವಳಿ ನಿಯಂತ್ರಿಸಲು ಸರ್ಕಾರ ವಿಫಲವಾಗಿರುವುದರಿಂದ ಬಡವರಿಗೆ ಆಹಾರ ಭದ್ರತೆಯ ಖಾತರಿಯೇ ಇಲ್ಲದಂತಾಗಿದೆ. ನ್ಯಾಯಬೆಲೆ ಅಂಗಡಿಗಳಲ್ಲಿ ತೂಕದಲ್ಲಿ ಮೋಸ, ಪಡಿತರ ವಿತರಣೆಗೆ ಸತಾಯಿಸುವುದು ನಡೆಯುತ್ತಿದೆ. ಇದರಿಂದ ಹಿರಿಯ ನಾಗರಿಕರು, ಮಹಿಳೆಯರು ಮತ್ತು ನಿತ್ಯ ದುಡಿಮೆಗೆ ಹೋಗುವ ಜನರು ಪಡಿತರ ಧಾನ್ಯ ಪಡೆಯಲು ಪರದಾಡಬೇಕಾದ ಸ್ಥಿತಿ ಇದೆ. ಬಡ ಕುಟುಂಬಗಳು ಸೇವಿಸುವ ಆಹಾರದಲ್ಲಿ ಪೌಷ್ಟಿಕತೆ ಹೆಚ್ಚಿಸುವ ಉದ್ದೇಶದಿಂದ ಅನ್ನಭಾಗ್ಯ ಯೋಜನೆಯಡಿ ವಿತರಿಸುವ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡಿ, ತೊಗರಿ ಬೇಳೆ, ಸಕ್ಕರೆ, ಅಡುಗೆ ಎಣ್ಣೆ ಮುಂತಾದ ಅಗತ್ಯ ಪದಾರ್ಥಗಳನ್ನು ಒಳಗೊಂಡ ಇಂದಿರಾ ಕಿಟ್ ವಿತರಣೆಗೆ ರಾಜ್ಯ ಸರ್ಕಾರ ಮುಂದಾಗಿದೆ. ಸರ್ಕಾರದ ಈ ಯೋಜನೆಯ ಹಿಂದಿರುವ ಉದ್ದೇಶವು ಉತ್ತಮವಾದುದೇ ಆದರೂ, ಅಕ್ಕಿ ವಿತರಣೆಯಲ್ಲಿ ಲೋಪಗಳಾಗದಂತೆ ಹೆಚ್ಚು ಎಚ್ಚರ ವಹಿಸಬೇಕಾಗುತ್ತದೆ. ಪಡಿತರ ಚೀಟಿದಾರರಿಗೆ ಕಡಿಮೆ ಪ್ರಮಾಣದ ಅಕ್ಕಿ ವಿತರಿಸುವಾಗ ಕಳ್ಳಸಾಗಣೆ ನಡೆದರೆ ಈ ಪಡಿತರವನ್ನೇ ನೆಚ್ಚಿಕೊಂಡು ಬದುಕು ಸಾಗಿಸುವ ಕುಟುಂಬಗಳ ಮೇಲೆ ಘೋರ ದುಷ್ಪರಿಣಾಮ ಆಗುತ್ತದೆ.

ಪಡಿತರ ಅಕ್ಕಿಯನ್ನು ವಿವಿಧ ಬ್ರ್ಯಾಂಡ್‌ಗಳ ಹೆಸರಿನಲ್ಲಿ ದುಬಾರಿ ದರಕ್ಕೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವ ಆರೋಪಗಳಿವೆ. ಪಡಿತರ ಸಾಗಣೆ ಮತ್ತು ವಿತರಣೆ ಮೇಲೆ ನಿಗಾ ಇಡುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಇದಕ್ಕಾಗಿ ಆಧಾರ್ ಜೋಡಣೆ, ಬೆರಳಚ್ಚು ಗುರುತಿನ ದೃಢೀಕರಣ, ಪಡಿತರ ಧಾನ್ಯಗಳ ಸಾಗಾಣಿಕೆ ವಾಹನಗಳಿಗೆ ಜಿಪಿಎಸ್ ಸಾಧನ ಅಳವಡಿಕೆ, ಗೋದಾಮುಗಳಲ್ಲಿ ನಿಗಾ ಇಡುವಂತಹ ಕ್ರಮಗಳನ್ನು ಕೈಗೊಂಡಿದೆ. ಆದರೆ, ಈ ಯಾವ ಕ್ರಮಗಳೂ ಪಡಿತರ ಧಾನ್ಯಗಳ ವಿತರಣಾ ವ್ಯವಸ್ಥೆಯಲ್ಲಿನ ದೋಷ ಸರಿಪಡಿಸಲು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ಈಗ ವರದಿಯಾಗುತ್ತಿರುವ ಪ್ರಕರಣಗಳು ದೃಢಪಡಿಸುತ್ತವೆ. ಇಂತಹ ಅಕ್ರಮಗಳಿಗೆ ಕಡಿವಾಣ ಹಾಕಲು ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮಾಡುವ ಆಯ್ಕೆಯನ್ನು ಸರ್ಕಾರ ಪರಿಗಣಿಸಬಹುದು. ಅಗತ್ಯ ಪ್ರಮಾಣದ ಅಕ್ಕಿ ಲಭ್ಯವಿಲ್ಲದ ಕಾರಣದಿಂದ ಕೆಲವು ಸಮಯ ರಾಜ್ಯದಲ್ಲಿ ಡಿಬಿಟಿ ಜಾರಿಗೊಳಿಸಿದ ಅನುಭವವನ್ನು ಇದಕ್ಕಾಗಿ ಬಳಸಿಕೊಳ್ಳಬಹುದು. ಫಲಾನುಭವಿಗಳು ಸರ್ಕಾರ ನೀಡಿದ ಹಣ ಬಳಸಿಕೊಂಡು ತಮ್ಮ ಆಯ್ಕೆಯ ಧಾನ್ಯ ಖರೀದಿಸುವುದಕ್ಕೂ ಅವಕಾಶ ದೊರಕುತ್ತದೆ. ಬಡವರ ಜೀವನದ ಘನತೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಶ್ರೀಮಂತ ಕಾಳಸಂತೆಕೋರರ ಲಾಭಕ್ಕಾಗಿ ಅಲ್ಲ. ಅನ್ನಭಾಗ್ಯ ಯೋಜನೆಯ ಅನುಷ್ಠಾನದಲ್ಲಿರುವ ಲೋಪದೋಷಗಳಿಗೆ ತುರ್ತಾಗಿ ಪರಿಹಾರ ಕಂಡುಕೊಳ್ಳುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ಇಲ್ಲವಾದರೆ, ಬಡವರ ಹೊಟ್ಟೆ ತುಂಬಿಸುವುದಕ್ಕಾಗಿ ಜಾರಿಯಲ್ಲಿರುವ ಯೋಜನೆಯು ಕಾಳಸಂತೆಕೋರರ ದುರ್ಲಾಭಕ್ಕೆ ಬಳಕೆಯಾಗಿ, ಆಹಾರ ಭದ್ರತೆಯ ಖಾತರಿ ಒದಗಿಸುವ ಮೂಲ ಉದ್ದೇಶವೇ ವಿಫಲವಾಗುತ್ತದೆ.

ಜಾಲತಾಣ

ಸುಳ್ಳನ್ನು ಪ್ರಶ್ನಿಸುವವರಿಲ್ಲವೇ?

ಹತ್ತಾರು ವರ್ಷಗಳಿಂದ ಮತ್ತು ಅದೆಷ್ಟೋ ನೈಸರ್ಗಿಕ ಚಟುವಟಿಕೆಗಳಿಂದ ಬೆಳೆದು ನಿಂತಿರುವ ಅರಣ್ಯವನ್ನು ಕಡಿದು ಅಲ್ಲಿ ಅಕೇಶಿಯಾ, ನೀಲಗಿರಿ ಸಸಿ ನೆಟ್ಟು ನೆಡುತೋಪನ್ನಾಗಿ ಮಾಡಿ; ಜನರಿಗೆ ನಾವು ಅರಣ್ಯವನ್ನು ಯಥಾಸ್ಥಿತಿಗೆ ತಂದಿದ್ದೇವೆ ಎಂದು ಕಳೆದ 30 ವರ್ಷಗಳಿಂದ ಹೇಳುತ್ತಾ ಬಂದಿರುವ ಕರ್ನಾಟಕ ಸರ್ಕಾರದ ಸುಳ್ಳನ್ನು ಪ್ರಶ್ನಿಸುವವರು ಯಾರು ಇಲ್ಲವೇ?

ಕಿರಣ್ ಕೊಡ್ಲಾಡಿ, 'ಎಕ್ಸ್'ನಿಂದ

ಕಿಡಿನುಡಿ

ದ್ವೇಷಭಾಷಣ ತಡೆಗೆ ಕಾನೂನು ತರುತ್ತಿರುವುದು ಸಿದ್ದರಾಮಯ್ಯ ಅವರ ರಾಜಕಾರಣಕ್ಕೆ ಕಪ್ಪುಚುಕ್ಕೆ. ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಂವಿಧಾನದ ಬಗ್ಗೆ ಮಾತನಾಡುವ ಅವರು, ಅದರ ತದ್ವಿರುದ್ಧವಾಗಿ ನಡೆದುಕೊಂಡಿದ್ದಾರೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಮಂಗಳವಾರ, 12-12-2000

• ಕಂಪ್ಯೂಟರ್ ಶಿಕ್ಷಣ ಜನವರಿಯಲ್ಲಿ ಜಾರಿ

ಬೆಂಗಳೂರು, ಡಿ. 11– ಆಯ್ದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ತರಬೇತಿ ನೀಡುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ 'ಮಾಹಿತಿ ಸಿಂಧು' ಬರುವ ಜನವರಿಯಿಂದ ಪ್ರಾರಂಭವಾಗಲಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಉದ್ಘಾಟಿಸಲಿದ್ದಾರೆ.

ಐದು ವರ್ಷಗಳ ಕಾಲ ಸುಮಾರು ರೂ. 204 ಕೋಟಿ ವೆಚ್ಚದ ಈ ಯೋಜನೆಯಲ್ಲಿ ಮೊದಲ ಹಂತದಲ್ಲಿ ಹೋಬಳಿಯಲ್ಲಿರುವ ಒಂದು ಸಾವಿರ ಪ್ರೌಢಶಾಲೆಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಇದಕ್ಕೆ ರಾಷ್ಟ್ರದಲ್ಲಿ ಕಂಪ್ಯೂಟರ್ ತರಬೇತಿ ನೀಡುವಲ್ಲಿ ಪ್ರಖ್ಯಾತವಾಗಿರುವ ಎನ್‌ಐಐಟಿ, ಆಪ್ಟೆಕ್ ಹಾಗೂ ಎಜುಕಾಂ ಡಾಟಾ ಮ್ಯಾಟ್ರಿಕ್ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ.

75 ವರ್ಷಗಳ ಹಿಂದೆ

ಮಂಗಳವಾರ, 12-12-1950

• ಆಹಾರ ಸಚಿವರ ಸಮ್ಮೇಳನ

ಮುಂಬಯಿ, ಡಿ. 11– ಕೇಂದ್ರ ಆಹಾರ ಸಚಿವ ಕೆ.ಎಂ. ಮುನ್ಷಿಯವರ ಅಧ್ಯಕ್ಷತೆಯಲ್ಲಿ ಸೇರಿದ ಅಖಿಲ ಭಾರತ ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ವ್ಯವಸ್ಥೆ ರದ್ದುಪಡಿಸುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ಕಂಡುಬಂದವು.

ಇಪ್ಪತ್ತೆರಡು ಪ್ರಾಂತ್ಯಗಳ ಹಾಗೂ ಚೀಫ್ ಕಮಿಷನರ್ ಪ್ರಾಂತ್ಯಗಳ ಪ್ರತಿನಿಧಿಗಳು, ಇಡೀ ದೇಶದಲ್ಲಿ ಸಂಯುಕ್ತ ಆಹಾರ ನೀತಿಯಿರಬೇಕೆಂದು ಒಪ್ಪಿದರು.

• ಬೆಂಗಳೂರೊಳಗೆ ವಿಮಾನಾಘಾತ

ಬೆಂಗಳೂರು, ಡಿ. 11– ಈ ದಿನ ಬೆಳಿಗ್ಗೆ 8.15 ಗಂಟೆಗೆ 'ಪ್ರೆಂಟಿಸ್' ವಿಮಾನವೊಂದು ಸಿವಿಲ್ ಪ್ರದೇಶದ ಕಮಲಾಬಾಯಿ ಸ್ಕೂಲಿನ ಬಳಿ, ಪಕ್ಕದಲ್ಲಿ ಬರುತ್ತಿದ್ದ ವಿಮಾನಕ್ಕೆ ಆಕಾಶದಲ್ಲೆ ಡಿಕ್ಕಿಯಾಗಿ ನೆಲಕ್ಕೆ ಬಿದ್ದು ಭಸ್ಮವಾಯಿತು. ವೈಮಾನಿಕ ಸ್ಥಳದಲ್ಲೇ ಮೃತಪಟ್ಟ.

ಹೈಕಮಾಂಡ್: ಮೌನ–ದುಮ್ಮಾನ

ಜನರಾಜಕಾರಣ

ಸಂದೀಪ್ ಶಾಸ್ತ್ರಿ

> ಅಧಿಕಾರದ ಕಚ್ಚಾಟಕ್ಕೆ ಪರಿಹಾರ ಕಂಡುಕೊಳ್ಳಲು ವಿಫಲವಾಗಿರುವ ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿ ಕಾಣಿಸುತ್ತಿದೆ. ಬಿಜೆಪಿ ಹೈಕಮಾಂಡ್ ಕೂಡ ರಾಜ್ಯ ಘಟಕದ ಭಿನ್ನಮತ ಪರಿಹರಿಸಿಲ್ಲ. ಈ ನಡುವೆ, ಮುಂದಿನ ವಿಧಾನಸಭಾ ಚುನಾವಣೆ ಎದುರಿಸಲು ಮಾರ್ಗದರ್ಶನಕ್ಕಾಗಿ ಉಭಯ ಪಕ್ಷಗಳು ಹೈಕಮಾಂಡ್‌ನತ್ತಲೇ ನೋಡುತ್ತಿವೆ.

ಕರ್ನಾಟಕದ ರಾಜಕಾರಣದ ಮಟ್ಟಿಗೆ ನಾವು ಬಹಳ ಗಮನ ಸೆಳೆಯುವ, ಆಸಕ್ತಿ ಕೆರಳಿಸುವ ಕಾಲಘಟ್ಟವೊಂದರಲ್ಲಿ ಇದ್ದೇವೆ. ರಾಜ್ಯದ ಎರಡು ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ನೆನಪಿನಲ್ಲಿ ಉಳಿಯುವಂತಹ ಬೆಳವಣಿಗೆಗಳು ಕಳೆದ ಕೆಲವು ತಿಂಗಳುಗಳಿಂದ ನಡೆಯುತ್ತಿವೆ. ಬಹುತೇಕ ಸಂದರ್ಭಗಳಲ್ಲಿ ಈ ಬೆಳವಣಿಗೆಗಳು ಸಂಬಂಧಪಟ್ಟ ರಾಜಕೀಯ ಪಕ್ಷಗಳ ವರಿಷ್ಠರ ಕೆಲವು ಕ್ರಮಗಳು ಹಾಗೂ ನಿಷ್ಕ್ರಿಯತೆ ಜೊತೆ ನೇರ ಸಂಬಂಧ ಹೊಂದಿವೆ. ಇಲ್ಲಿ ಜೆಡಿಎಸ್ ಬಗ್ಗೆ ಚರ್ಚೆ ಮಾಡುತ್ತಿಲ್ಲ, ಈ ಪಕ್ಷವು ಕಾಂಗ್ರೆಸ್ ಅಥವಾ ಬಿಜೆಪಿಯಂತಹ ಹೈಕಮಾಂಡ್ ವ್ಯವಸ್ಥೆ ಹೊಂದಿಲ್ಲ.

ಮೊದಲು ಕಾಂಗ್ರೆಸ್ಸಿನ ಬೆಳವಣಿಗೆಗಳ ಬಗ್ಗೆ ಅವಲೋಕನ ನಡೆಸೋಣ. ಸುಮಾರು ಎರಡೂವರೆ ವರ್ಷಗಳ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ, ಇಲ್ಲಿನ ನಾಯಕತ್ವದ ಹೊಣೆಯನ್ನು ಯಾರಿಗೆ ವಹಿಸಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸಬೇಕಾಗಿತ್ತು. ಹೈಕಮಾಂಡ್ ನಡೆಸಿದ ಮನವೊಲಿಕೆಯ ಕಾರಣದಿಂದಾಗಿ ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಒಪ್ಪಿದರು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಎರಡನೆಯ ಅವಧಿಯನ್ನು ಆರಂಭಿಸಿದರು. ಉಪ ಮುಖ್ಯಮಂತ್ರಿ ಹುದ್ದೆಯನ್ನು ಒಬ್ಬರಿಗೆ ಮಾತ್ರ ನೀಡಬೇಕು (ಅವರಿಗೆ ತಮ್ಮ ಆಯ್ಕೆಯ ಒಂದು ಖಾತೆ ಪಡೆಯಲು ಅವಕಾಶ ನೀಡಲಾಯಿತು) ಎಂದು ಹೈಕಮಾಂಡ್ ಸ್ಪಷ್ಟಪಡಿಸಿತು. ಅಲ್ಲದೆ, ಉಪ ಮುಖ್ಯಮಂತ್ರಿ ಹುದ್ದೆ ಪಡೆದವರಿಗೆ ಕೆಪಿಸಿಸಿ ಅಧ್ಯಕ್ಷರಾಗಿಯೂ ಮುಂದುವರಿಯಲು ಅವಕಾಶ ನೀಡಲಾಯಿತು. ವಿಧಾನಸಭೆಯ ಅರ್ಧ ಅವಧಿ ಪೂರ್ಣಗೊಂಡ ನಂತರದಲ್ಲಿ, ಉಪ ಮುಖ್ಯಮಂತ್ರಿ ಹುದ್ದೆಯಲ್ಲಿರುವವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗುತ್ತದೆ ಎಂಬ ಭರವಸೆಯನ್ನು ನೀಡಲಾಗಿದೆ ಎಂಬ ಗುಸುಗುಸು ಕೂಡ ಇತ್ತು.

ಹಲವು ಸಂಗತಿಗಳ ವಿಚಾರವಾಗಿ ರಾಜ್ಯದ ನಾಯಕತ್ವದಲ್ಲಿ ಅಸಮಾಧಾನ ಯಾವಾಗ ಮೂಡುತ್ತದೆ ಎಂಬ ಪ್ರಶ್ನೆಯಷ್ಟೇ ಉಳಿದಿತ್ತು. ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಿದಾಗ ಸರ್ಕಾರದ ನಾಯಕತ್ವ ಬದಲಾವಣೆ ಮಾಡುವ ಭರವಸೆ ನೀಡಲಾಗಿತ್ತೇ ಎಂಬ ಕುರಿತು ಎರಡೂ ಗುಂಪುಗಳ ನಡುವೆ ಮಾತು ಬೆಳೆದಾಗ ಅಸಮಾಧಾನವೂ ಶುರುವಾಯಿತು. 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ 2019ರ ಫಲಿತಾಂಶಕ್ಕಿಂತ ಉತ್ತಮ ಸಾಧನೆ ತೋರಿದರೂ, ಎದುರಾಳಿಗಿಂತ ಹಿಂದೆಬಿದ್ದಾಗ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಅಗತ್ಯದ ಬಗ್ಗೆ ಪಿಸುಮಾತುಗಳು ಆರಂಭವಾದವು.

ಇದಾದ ನಂತರದಲ್ಲಿ, ಕಾಂಗ್ರೆಸ್ ಪಕ್ಷದ ಕೆಲವು ಹಿರಿಯರು ಕೂಡ ಸರ್ಕಾರದಲ್ಲಿ ಒಂದೇ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಿದ್ದರ ಬಗ್ಗೆ ಪ್ರಶ್ನಿಸಲು ಆರಂಭಿಸಿದರು. ಸಾಮಾಜಿಕ ಪ್ರಾತಿನಿಧ್ಯವು ಇನ್ನಷ್ಟು ಉತ್ತಮವಾಗಬೇಕು ಎಂದಾದರೆ ಇನ್ನಷ್ಟು ಹುದ್ದೆಗಳನ್ನು ಸೃಷ್ಟಿಸಬೇಕು ಎಂದು ವಾದಿಸಿದರು. ಸಂಪುಟದ ಸದಸ್ಯರು ಭಿನ್ನ ರೀತಿಯಲ್ಲಿ ಮಾತನಾಡುವುದು ನಿತ್ಯದ ದೃಶ್ಯವಾಯಿತು. ವಿಧಾನಸಭೆಯ ಅರ್ಧ ಅವಧಿ ಹತ್ತಿರವಾದಂತೆಲ್ಲ, ಸರ್ಕಾರದ ನಾಯಕತ್ವದ ಬದಲಾವಣೆಯ ಪರವಾಗಿ ಹಾಗೂ ಅದರ ವಿರುದ್ಧವಾಗಿ ಮಾತನಾಡುವುದು ಇನ್ನಷ್ಟು ಗಟ್ಟಿಯಾಯಿತು. ಮುಖ್ಯಮಂತ್ರಿ ಹುದ್ದೆಯನ್ನು ಬಯಸುವ ಹೊಸ ನಾಯಕರು ಮುನ್ನೆಲೆಗೆ ಬಂದರು, ರಾಜ್ಯ ರಾಜಕಾರಣದ ಸಂಕೀರ್ಣ ಜಾತಿ ಲೆಕ್ಕಾಚಾರ ಕೂಡ ತೆರೆಯ ಮೇಲೆಯೇ ಕಾಣಿಸಿಕೊಂಡಿತು. ವಿಭಿನ್ನ ಜಾತಿ ಗುಂಪುಗಳಿಗೆ ಸೂಕ್ತವಾದ ಹಾಗೂ ಸಮರ್ಪಕವಾದ ಪ್ರಾತಿನಿಧ್ಯವು ಸಿಗಬೇಕು ಎಂಬ ಆಧಾರದಲ್ಲಿ ವಾದ–ಪ್ರತಿವಾದ ಜೋರಾದವು. ಈ ಬಗೆಯ ಮಾತುಗಳನ್ನು ಯಾವ ನಿಯಂತ್ರಣವೂ ಇಲ್ಲದೆ ಆಡುತ್ತಿದ್ದಾಗ ಪಕ್ಷದ ಕೇಂದ್ರ ನಾಯಕತ್ವವು ಉದ್ದೇಶಪೂರ್ವಕವಾಗಿ ಮೌನವಾಗಿತ್ತು. ಬಹುಶಃ ಈ ಮೌನವು ಪಕ್ಷದ ಭಿನ್ನ ಬಣಗಳು ತಮ್ಮ ಬೇಡಿಕೆಗಳನ್ನು ಇನ್ನಷ್ಟು ಗಟ್ಟಿಯಾಗಿ ಮಂಡಿಸಲು ಅನುವು ಮಾಡಿಕೊಟ್ಟಿತು.

ಎದ್ದು ಕಾಣುವ ಅಪಸ್ವರ ಹಾಗೂ ಆಂತರಿಕ ಕಚ್ಚಾಟವು ತೀವ್ರವಾಗುತ್ತಿದ್ದಾಗ ಪಕ್ಷದ ಹೈಕಮಾಂಡ್ ಬಹಳ ಉದ್ವೇಗರಹಿತವಾಗಿ ಇತ್ತು, ಮೌನ ವಹಿಸಿತ್ತು. ಸೂಕ್ತವಾದ ಸಂದರ್ಭದಲ್ಲಿ ತಾನು ಮಧ್ಯಪ್ರವೇಶಿಸುವುದಾಗಿ ಆಗಾಗ ಹೇಳುವುದನ್ನು ಹೊರತುಪಡಿಸಿದರೆ ಹೈಕಮಾಂಡ್ ಇನ್ನೇನನ್ನೂ ಮಾಡಲಿಲ್ಲ. 'ಸೂಕ್ತವಾದ ಸಮಯ' ಅಂದರೆ ನಿರ್ದಿಷ್ಟವಾಗಿ ಏನು ಎಂಬ ಪ್ರಶ್ನೆಯು ಹಲವರಲ್ಲಿ ಮೂಡಿತ್ತು. ಪಕ್ಷದಲ್ಲಿ ಎಲ್ಲವೂ ಚೆನ್ನಾಗಿಯೇ ಇದೆ ಎಂಬ ಹೇಳಿಕೆಗಳು ಮತ್ತೆ ಮತ್ತೆ ಬಂದವು. ಆದರೆ, ಮೇಲ್ಪದರದ ಅಡಿಯಲ್ಲಿ 'ಎಲ್ಲವೂ ಅಷ್ಟೇನೂ ಚೆನ್ನಾಗಿಲ್ಲ' ಎಂಬುದು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಎರಡೂವರೆ ವರ್ಷ ಪೂರ್ಣಗೊಳ್ಳುವುದರ ಮೊದಲು ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶವು ಪ್ರಕಟವಾಗಿದ್ದುದು, ಅದು ಪ್ರಕಟವಾದ ಸಂದರ್ಭದ ಕಾರಣದಿಂದಾಗಿಯೂ ಮಹತ್ವ ಪಡೆದುಕೊಂಡಿತು. ಬಿಹಾರದಲ್ಲಿ ಕಾಂಗ್ರೆಸ್ ಪಕ್ಷ ಅನುಭವಿಸಿದ ಹಿನ್ನಡೆಯು, ಕರ್ನಾಟಕದಲ್ಲಿ ಆಂತರಿಕ ಸಂಘರ್ಷವನ್ನು ಶಮನಗೊಳಿಸುವುದು ಕಷ್ಟವಾಗುವ ಬಗೆಯಲ್ಲಿ ಹೈಕಮಾಂಡ್ ಅನ್ನು ದುರ್ಬಲಗೊಳಿಸುತ್ತದೆ ಎಂದು ಕೆಲವರು ವಿಶ್ಲೇಷಿಸಿದರು. ಈ ಸಂದರ್ಭದಲ್ಲಿ ತಮ್ಮ ದನಿ ಎತ್ತರಿಸಿದ ಉಪ ಮುಖ್ಯಮಂತ್ರಿಯ ಬೆಂಬಲಿಗರು, ಅವರನ್ನು ಕರ್ನಾಟಕದ ಮುಖ್ಯಮಂತ್ರಿಯನ್ನಾಗಿ ಮಾಡುವ ಅಗತ್ಯ ಇದೆ ಎಂದು ವಾದಿಸಲು ಆರಂಭಿಸಿದರು.

ಸರ್ಕಾರದ ಇಬ್ಬರು ಪ್ರಮುಖರ ನಡುವಿನ 'ಮಾತಿನ ಸಮರ'ವು ಆಡಳಿತ ಯಂತ್ರವನ್ನು ಸ್ಥಗಿತದ ಸ್ಥಿತಿಗೆ ತಂದಂತೆ ಕಾಣಿಸಿತು. ತಾವು ಹೈಕಮಾಂಡ್ ಸೂಚನೆಯನ್ನು ಪಾಲಿಸುವುದಾಗಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಸ್ಪಷ್ಟಪಡಿಸಿದರು. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇಲ್ಲದಿರುವ ಕಾರಣದಿಂದಾಗಿ, ಆ ಪಕ್ಷದ ಹೈಕಮಾಂಡ್ ದುರ್ಬಲ ಸ್ಥಿತಿಯಲ್ಲಿದೆ ಎಂಬುದು ಈಗ ಸ್ಪಷ್ಟವಾಗಿದೆ. ರಾಜ್ಯದ ನಾಯಕರ ಮೇಲೆ ಹೆಚ್ಚಿನ ನಿಯಂತ್ರಣ ಹೊಂದುವ ಶಕ್ತಿ ಅದಕ್ಕೆ ಈಗ ಇಲ್ಲ. ಇದು ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬ್, ಹಿಮಾಚಲ ಪ್ರದೇಶದಲ್ಲಿ ಸ್ಪಷ್ಟವಾಗಿ ಕಂಡಿದೆ. ಈಗ ಕರ್ನಾಟಕದಲ್ಲಿಯೂ ಸ್ಪಷ್ಟವಾಗಿ ಕಾಣಿಸುತ್ತಿದೆ. ಸಂಸತ್ತಿನ ಹಾಗೂ ವಿಧಾನಸಭೆಯ ಚಳಿಗಾಲದ ಅಧಿವೇಶನದ ಹಿನ್ನೆಲೆಯಲ್ಲಿ ಈಚೆಗೆ ನಡೆದ ಉಪಾಹಾರ ಸಭೆ ಕೂಡ ತಾತ್ಕಾಲಿಕ ಕದನ ವಿರಾಮದಂತೆ ಕಾಣಿಸುತ್ತಿದೆ.

ಈಗ ನಾವು ರಾಜ್ಯ ಬಿಜೆಪಿಯ ನಾಯಕತ್ವದ ಬಗ್ಗೆ, ಆ ಪಕ್ಷದ ವರಿಷ್ಠರ ಬಗ್ಗೆ ಗಮನ ಹರಿಸೋಣ. ಪಕ್ಷದ ರಾಜ್ಯ ಘಟಕವು ಬಣಗಳಾಗಿ ಒಡೆದಿದೆ. ಅದರಲ್ಲೂ, 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಸೋತ ನಂತರ ಅದು ಹೆಚ್ಚಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ರಾಜ್ಯದಲ್ಲಿ ಜಯ ಕಂಡಿದ್ದಕ್ಕೆ ಕಾರಣ ಪಕ್ಷದ ರಾಷ್ಟ್ರೀಯ ನಾಯಕತ್ವ ಹೊಂದಿದ್ದ ಒಳ್ಳೆಯ ಹೆಸರು ಎನ್ನಲಾಗಿದೆ. ಪಕ್ಷದ ರಾಷ್ಟ್ರೀಯ ನಾಯಕರು ರಾಜ್ಯ ಘಟಕದ ಅಧ್ಯಕ್ಷರನ್ನು ಅನುಮೋದಿಸಿದ್ದರಾದರೂ, ರಾಜ್ಯದ ನಾಯಕತ್ವಕ್ಕೆ ಸವಾಲು ಹಾಕಿದ ಹಲವು ಬಣಗಳು ಇಲ್ಲಿವೆ. ಕೆಲವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಯಿತಾದರೂ (ಅದು ಬಹಳ ತಡವಾಗಿ ತೆಗೆದುಕೊಂಡ ಸಣ್ಣ ಕ್ರಮ ಎಂದು ವಾದಿಸಬಹುದು), ಆ ಹೊತ್ತಿಗೆ ಪಕ್ಷದ ರಾಜ್ಯ ಘಟಕದಲ್ಲಿನ ಮೇಲಾಟವು ಬಹಿರಂಗ ಆಗಿತ್ತು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಕಾರ್ಯಕರ್ತರನ್ನು ಹುರಿದುಂಬಿಸಲು ಯತ್ನಿಸಿ, ಒಂದಿಷ್ಟು ಯಶಸ್ಸು ಸಾಧಿಸಿದರು. ಆದರೆ, ಪಕ್ಷದ ಇತರ ನಾಯಕರಿಂದ ದೊಡ್ಡ ಮಟ್ಟದಲ್ಲಿ ಬೆಂಬಲ ಸಿಗದೆ ಇದ್ದುದು ಪ್ರತಿಸ್ಪಂದನೆಯು ಅಷ್ಟೊಂದು ಉತ್ತಮವಾಗಿರದಂತೆ ಮಾಡಿತು. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವನ್ನು ರಾಜ್ಯದ ಹಲವು ಸಮಸ್ಯೆಗಳಿಗೆ ಹೊಣೆಗಾರನನ್ನಾಗಿ ಮಾಡಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ನಡೆಸಿದ ಯತ್ನಗಳಲ್ಲಿ ಬೆಂಬಲದ ಕೊರತೆಯು ಎದ್ದುಕಾಣುತ್ತಿತ್ತು. ರಾಜ್ಯ ಘಟಕದ ಅಧ್ಯಕ್ಷರ ವಿಚಾರವಾಗಿ ಬಿಜೆಪಿಯ ವರಿಷ್ಠರು ಅಧಿಕೃತ ತೀರ್ಮಾನವೊಂದನ್ನು ಇನ್ನೂ ತೆಗೆದುಕೊಂಡಂತಿಲ್ಲ. ಬಿಜೆಪಿಯ ಈಗಿನ ರಾಜ್ಯ ಘಟಕದ ಅಧ್ಯಕ್ಷರನ್ನು 2023ರ ನವೆಂಬರ್‌ನಲ್ಲಿ ಆ ಸ್ಥಾನಕ್ಕೆ ನೇಮಕ ಮಾಡಲಾಗಿದೆ. ಅವರು ತಮ್ಮ ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಎರಡು ವರ್ಷಗಳನ್ನು ಪೂರೈಸಿದ್ದಾರೆ. ಬಿಜೆಪಿಯ ಹೊಸ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗಾಗಿ ನಡೆದಿರುವ ಆಂತರಿಕ ಚುನಾವಣೆಗಳ ಭಾಗವಾಗಿ ಬಿಜೆಪಿಯ ಕೇಂದ್ರ ನಾಯಕತ್ವವು ರಾಜ್ಯದಲ್ಲಿ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಬಹುದೇ (ಇದನ್ನು ದೇಶದ ಇತರೆಡೆಗಳಲ್ಲಿ ಮಾಡಲಾಗುತ್ತಿದೆ) ಅಥವಾ ಮೂರು ವರ್ಷಗಳ ಅವಧಿ ಪೂರ್ಣಗೊಳ್ಳಲಿ ಎಂದು ಕಾಯಲಿದೆಯೇ? ಈ ವಿಚಾರವಾಗಿ ಪಕ್ಷ ಕೈಗೊಳ್ಳುವ ತೀರ್ಮಾನವನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ಪಕ್ಷವು ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಒಂದು ಅನುಕೂಲಕರ ಸ್ಥಿತಿ.

ರಾಜ್ಯದ ನಾಯಕತ್ವದ ಸ್ಥಿತಿಯನ್ನು ಬಿಜೆಪಿಯ ಕೇಂದ್ರ ನಾಯಕತ್ವವು ಈಗಲೂ ಪರೀಕ್ಷಿಸುತ್ತಿದೆಯೇ, ಅದು ಮಧ್ಯಪ್ರವೇಶ ಮಾಡಲು ಹಾಗೂ ರಾಜ್ಯದ ನಾಯಕರ ನಡುವೆ ಹೆಚ್ಚಿನ ಒಗ್ಗಟ್ಟು ಮೂಡುವಂತೆ ಮಾಡಲು ಸರಿಯಾದ ಸಮಯಕ್ಕಾಗಿ ಕಾದಿದೆಯೇ ಎಂಬುದು ಸ್ಪಷ್ಟವಾಗುತ್ತಿಲ್ಲ. ಜೆಡಿಎಸ್ ಜೊತೆ ಮಾಡಿಕೊಂಡಿರುವ ಮೈತ್ರಿಯು ಕೆಲವು ಸವಾಲುಗಳನ್ನೂ ಬಿಜೆಪಿಯಲ್ಲಿ ಸೃಷ್ಟಿಸಿದೆ.

2028ರ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ ಎಂಬುದು ಬಿಜೆಪಿಗೂ ಗೊತ್ತಿದೆ, ಕಾಂಗ್ರೆಸ್ಸಿಗೂ ಗೊತ್ತಿದೆ. ಚುನಾವಣೆ ಎದುರಿಸಲು ಮಾರ್ಗದರ್ಶನಕ್ಕಾಗಿ ಈ ಎರಡೂ ಪಕ್ಷಗಳ ರಾಜ್ಯ ಘಟಕಗಳು ವರಿಷ್ಠರತ್ತ ಮುಖ ಮಾಡಿವೆ. ಇಲ್ಲಿ ಎಡವಿದರೆ ರಾಜಕೀಯ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ.

ವಾಚಕರ ವಾಣಿ

ಭ್ರೂಣಹತ್ಯೆ ಮತ್ತು ಕನಸಿನ ಮದುವೆ!

'ಮದುವೆಗೆ ಹೆಣ್ಣು ಸಿಗುತ್ತಿಲ್ಲ, ಮಠ ನಿರ್ಮಿಸಿಕೊಡಿ' ಎಂದು ಮಂಡ್ಯ ಜಿಲ್ಲೆಯ ಮರಳಿಗ ಗ್ರಾಮದ ಯುವಕರು, ಗ್ರಾಮ ಸಭೆಗೆ ಅರ್ಜಿ ಸಲ್ಲಿಸಿರುವುದು ವರದಿಯಾಗಿದೆ. ವಿಪರ್ಯಾಸ ಎಂದರೆ ಕೆಲವು ವರ್ಷಗಳ ಹಿಂದೆ ಇದೇ ಜಿಲ್ಲೆಯಲ್ಲೇ ಅವ್ಯಾಹತವಾಗಿ ನಡೆದ ಹೆಣ್ಣುಭ್ರೂಣ ಹತ್ಯೆಯ ಕರ್ಮಕಾಂಡವು ಇಡೀ ರಾಜ್ಯದಲ್ಲಿ ಸಂಚಲನ ಸೃಷ್ಟಿಸಿತ್ತು. ಹೆಣ್ಣುಭ್ರೂಣ ಹತ್ಯೆ ಮಾಡುತ್ತಿರುವುದೇ ಯುವಕರ ಮದುವೆಗೆ ಯುವತಿಯರು ದೊರಕದೆ ಇರುವುದಕ್ಕೆ ಮೂಲಕಾರಣ. ಭ್ರೂಣಹತ್ಯೆ ಹೀಗೆಯೇ ಮುಂದುವರಿದರೆ ಮುಂದಿನ ವರ್ಷಗಳಲ್ಲಿ ಗೃಹ ಯೋಜನೆ ಬದಲಾಗಿ, ಮಠ ಯೋಜನೆ ಜಾರಿಗೊಂಡರೂ ಅಚ್ಚರಿಪಡಬೇಕಿಲ್ಲ. ಪೋಷಕರು ಎಚ್ಚತ್ತುಕೊಳ್ಳಲು ಇದು ಸಕಾಲ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ರಾಜ್ಯದಲ್ಲಿ ವನ್ಯಜೀವಿ ಸಂರಕ್ಷಣೆ ನಗಣ್ಯ

ಹುಣಸೂರು ತಾಲ್ಲೂಕಿನ ಗೌಡನಕಟ್ಟೆ ಗ್ರಾಮದ ಬಳಿ ರಕ್ಷಣೆ ಮಾಡಿದ್ದ ನಾಲ್ಕು ಹುಲಿ ಮರಿಗಳು ಪುನರ್ವಸತಿ ಕೇಂದ್ರದಲ್ಲಿ ಮೃತಪಟ್ಟಿರುವುದು ನೋವಿನ ಸಂಗತಿ. ಇತ್ತೀಚೆಗೆ ರಾಜ್ಯದಲ್ಲಿ ಹುಲಿಗಳ ಹತ್ಯೆ ಅವ್ಯಾಹತವಾಗಿ ನಡೆದಿದೆ. ಆದರೂ, ಅರಣ್ಯ ಇಲಾಖೆಯು ಅವುಗಳ ಸಂರಕ್ಷಣೆಯಲ್ಲಿ ಕಟ್ಟುನಿಟ್ಟಿನ ಕ್ರಮವಹಿಸುತ್ತಿಲ್ಲ. ಕಾಡಂಚಿನಲ್ಲಿ ವನ್ಯಜೀವಿಗಳು ಮತ್ತು ಮಾನವರ ನಡುವಿನ ಸಂಘರ್ಷ ಎಲ್ಲೆ ಮೀರಿದೆ. ಸಮುದಾಯದ ಸಹಭಾಗಿತ್ವದಡಿ ವನ್ಯಜೀವಿ ಸಂರಕ್ಷಣಾ ನಿಯಮಗಳನ್ನು ರೂಪಿಸುವ ಅಗತ್ಯವಿದೆ. ಇಲ್ಲದಿದ್ದರೆ ಭವಿಷ್ಯದಲ್ಲಿ ಹುಲಿ, ಚಿರತೆ, ಆನೆ ಸೇರಿದಂತೆ ಅಪರೂಪದ ಪ್ರಾಣಿ–ಪಕ್ಷಿಗಳ ಉಳಿಗಾಲ ಅಸಾಧ್ಯ.

ಸುರೇಶ್ ಎಂ.ಎನ್., ಬಿ.ಟಿ. ಹಳ್ಳಿ

ಅಧಿವೇಶನ: ಮತ್ತೆ ಗೊಂದಲದ ಗೂಡು

ಪ್ರತಿವರ್ಷದಂತೆ ಈ ಬಾರಿಯೂ ವಿಧಾನಮಂಡಲದ ಚಳಿಗಾಲದ ಅಧಿವೇಶನವು ಗೊಂದಲದ ಗೂಡಾಗಿದೆ. ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಕುರಿತ ಚರ್ಚೆಗೆ ಮಂಕು ಕವಿದಿದೆ. ಹೀಗಾದರೆ ಕೋಟ್ಯಂತರ ರೂಪಾಯಿ ವ್ಯಯಿಸಿ ಅಧಿವೇಶನ ನಡೆಸುವ ಉದ್ದೇಶವಾದರೂ ಏನು? ಒಂದೆಡೆ ವಿರೋಧ ಪಕ್ಷದ ನಾಯಕರು ಹೋರಾಟಗಾರರ ಜೊತೆ ಕೈಜೋಡಿಸಿ ಸದನದ ಹೊರಗೆ ಹೋರಾಟಕ್ಕಿಳಿದರೆ; ಆಡಳಿತ ಪಕ್ಷವು ಅದಕ್ಕೆ ಸದನದೊಳಗೆ ಪ್ರತಿಕ್ರಿಯಿಸುತ್ತಿದೆ. ಹೀಗೆ ಮುಂದುವರಿದರೆ ಉತ್ತರ ಕರ್ನಾಟಕದ ಜಿಲ್ಲೆಗಳ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಮರೀಚಿಕೆಯಾಗಲಿದೆ. ಈ ಭಾಗ ಪ್ರತಿನಿಧಿಸುವ ಶಾಸಕರೂ ಈ ಕುರಿತು ಚಕಾರ ಎತ್ತದಿರುವುದು ವಿಷಾದಕರ.

ಪ್ರದೀಪ ಬಿಸಲನಾಯಿಕ, ಚಿಕ್ಕೋಡಿ

'ಸುಪ್ರೀಂ' ಆದೇಶ ಪಾಲನೆ ಯಾರದು?

'ಕಣ್ವರ ಮಕ್ಕಳಿಗೆ ನ್ಯಾಯ ಸಿಕ್ಕೀತೆ?' ಲೇಖನವು (ಲೇ: ವೈ.ಎಸ್.ವಿ. ದತ್ತ, ಪ್ರ.ವಾ., ಡಿ. 10) ಹೊರಗುತ್ತಿಗೆ ನೌಕರರು ಎದುರಿಸುತ್ತಿರುವ ತವಕ–ತಲ್ಲಣಗಳ ಬಗ್ಗೆ ಬೆಳಕು ಚೆಲ್ಲಿದೆ. ಹೊರಗುತ್ತಿಗೆ ನೌಕರರ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ಒಂದು ವರ್ಷದಿಂದೀಚೆಗೆ ನಾಲ್ಕು ಬಾರಿ ಮಹತ್ವದ ಆದೇಶ ನೀಡಿದೆ. ಆದರೆ, ಅದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಲವಲೇಶದ ಅರಿವೂ ಇದ್ದಂತಿಲ್ಲ. ರಾಜ್ಯದ ಹೈಕೋರ್ಟ್ ನೀಡಿರುವ ತೀರ್ಪನ್ನು ನೆಪವಾಗಿಟ್ಟುಕೊಂಡು ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರ ಬಾಳಿಗೆ ಕೊಳ್ಳಿ ಇಟ್ಟಿದೆ. ದಶಕಗಳಿಂದ ಅತ್ಯಲ್ಪ ಗೌರವಧನಕ್ಕೆ ದುಡಿದ ವಿದ್ಯಾವಂತರನ್ನು ಏಕಾಏಕಿ ಬೀದಿಯಲ್ಲಿ ನಿಲ್ಲಿಸಿದೆ. ಹಾಗಿದ್ದರೆ, ಸುಪ್ರೀಂ ಕೋರ್ಟ್ ನೀಡಿರುವ ಆದೇಶಗಳನ್ನು ಪಾಲನೆ ಮಾಡಬೇಕಾದವರು ಯಾರು?

ವೃಂದಾ ಹೆಗಡೆ, ಸಾಗರ

ನರೇಂದ್ರ ಮೋದಿ ಅವರಿಗೊಂದು ಪತ್ರ

ಸಂಸತ್ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ, ಸದಸ್ಯರು ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿರುವ ಬಗ್ಗೆ ಪ್ರಶ್ನೆ ಕೇಳಿದಾಗ; ಅವರು 'ವಂದೇ ಮಾತರಂ' ಗೀತೆ ಬಗ್ಗೆ ಪ್ರಸ್ತಾಪಿಸಿದರು. ಮತ್ತೊಬ್ಬ ಸದಸ್ಯರು, ಇಂಡಿಗೊ ವಿಮಾನಯಾನ ಕಂಪನಿಯ ಏಕಸ್ವಾಮ್ಯದ ಬಗ್ಗೆ ಪ್ರಶ್ನೆ ಎತ್ತಿದಾಗ, ಜವಾಹರಲಾಲ್ ನೆಹರೂ ಅವರ ಬಗ್ಗೆ ಮತ್ತು ದೇಶ ವಿಭಜನೆ ವಿಷಯ ಕುರಿತು ಪ್ರಸ್ತಾಪಿಸಿದರು. ನಮ್ಮದು ಒಂದು ಪ್ರಶ್ನೆಯಿದೆ: ಮೋದಿಯವರು ಎಕನಾಮಿಕ್ಸ್‌ನಲ್ಲಿ ತಪ್ಪಾದಾಗಲೆಲ್ಲ ಹಿಸ್ಟರಿ ಬಗ್ಗೆ ಏಕೆ ಮಾತನಾಡುತ್ತಾರೆ?

ನಾಗಾರ್ಜುನ ಹೊಸಮನಿ, ಕಲಬುರಗಿ

ತಿಮ್ಮಕ್ಕನ ನೆನಪು ಉಳಿಸುವ ಕೆಲಸ ಆಗಲಿ

ಸಾಲುಮರದ ತಿಮ್ಮಕ್ಕ ಅವರ ಹೆಸರಲ್ಲಿ ಬೇಲೂರಿನಲ್ಲಿ ವಸ್ತು ಸಂಗ್ರಹಾಲಯ ಸ್ಥಾಪಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಇದನ್ನು ನೋಡಿಕೊಳ್ಳುವವರಿಗೆ ಲಾಭವಾದೀತು, ಅಷ್ಟೇ. ಅಷ್ಟಕ್ಕೂ ಬೇಲೂರು, ತಿಮ್ಮಕ್ಕನ ಹುಟ್ಟೂರಲ್ಲ. ಆಕೆಯ ಹೆಸರಲ್ಲಿ ನಿಜಕ್ಕೂ ಆಗಬೇಕಾದದ್ದು ಆಕೆಯ ಜೀವನ, ಕಾರ್ಯಗಳ ವಾಸ್ತವಿಕ ಸಂಗತಿಗಳನ್ನು ಅಧಿಕೃತವಾಗಿ ದಾಖಲಿಸುವ ಪುಸ್ತಕ.

ಈಗಾಗಲೇ ಆಕೆಯ ವಯಸ್ಸು, ಮರ ಬೆಳೆಸಲು ಒದಗಿದ ಕಾರಣ ಮೊದಲಾದುವನ್ನೆಲ್ಲ ಹಿತಾಸಕ್ತರು ಅತೀ ಉತ್ಪ್ರೇಕ್ಷಿತ ಸಂಕಥನವನ್ನು ಸೃಷ್ಟಿಸಿ ಪ್ರಚಾರ ಮಾಡಿದ್ದಾಗಿದೆ. ಇದು ಮುಂದೆ ಮತ್ತಷ್ಟು ಸುಳ್ಳು ಪುರಾಣಕ್ಕೆ ದಾರಿಯಾಗದಂತೆ ಈಗಲೇ ಕಡಿವಾಣ ಹಾಕುವುದು ರಾಜ್ಯ ಸರ್ಕಾರದ ಹೊಣೆ. ಸರ್ಕಾರಕ್ಕೆ ನಿಜಕ್ಕೂ ಕಾಳಜಿ ಇದ್ದರೆ ಹುಲಿಕಲ್‌ನಲ್ಲಿ ತಿಮ್ಮಕ್ಕನ ಮನೆ ಇದ್ದ ಜಾಗದಲ್ಲೇ ಅಥವಾ, ಆ ಊರಿನ ಮತ್ತೊಂದೆಡೆ (ಕುದೂರು ಆದೀತು) ವಿಶಾಲ ಜಾಗದಲ್ಲಿ ಸುಸಜ್ಜಿತವಾದ ಆಸ್ಪತ್ರೆ ನಿರ್ಮಿಸಲಿ ಅಥವಾ ಅಲ್ಲಿನ ಸರ್ಕಾರಿ ಶಾಲೆಗೆ ಸಾಲುಮರದ ತಿಮ್ಮಕ್ಕ ಅವರ ಹೆಸರನ್ನೇ ಇಡಲಿ.

ಟಿ. ಗೋವಿಂದರಾಜು, ಬೆಂಗಳೂರು

ಚುರುಮುರಿ

ಹೈಕಮಾಂಡ್ ಭಜನೆ!

• ಬಿ.ಎನ್. ಮಲ್ಲೇಶ್

'ಲೇ ತೆಪರ, ಏನಪ್ಪ ಇವತ್ತಿನ ಸುದ್ದಿ? ಏನಂತತಿ ನಿಮ್ ಟೀವಿ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಸುದ್ದಿನಾ? ಎಲ್ಲ ಹೈಕಮಾಂಡ್‌ಗೆ ಬಿಟ್ಟದ್ದು' ಎಂದ ತೆಪರೇಸಿ.

'ಲೇಯ್, ಅಧಿವೇಶನದಲ್ಲಿ ಸಿಎಂ ಏನಂದ್ರು, ಮಂತ್ರಿಗಳು, ಎಮ್ಮೆಲ್ಲೆಗಳು ಏನಂದ್ರು ಅದನ್ನ ಹೇಳೋ...'

'ಅದೇ... ಎಲ್ಲ ಹೈಕಮಾಂಡ್‌ಗೆ ಬಿಟ್ಟದ್ದು...'

'ಮತ್ತೆ ಇಡ್ಲಿ ವಡೆ, ನಾಟಿ ಕೋಳಿ?' ಕೊಟ್ರೇಶಿ ಕೊಕ್ಕೆ.

'ಅದು ಹೈಕಮಾಂಡ್ ಹೇಳಿದ್ದು...'

'ಮತ್ತೆ ಸಂಪುಟ ವಿಸ್ತರಣೆ?'

'ಅದು ಹೈಕಮಾಂಡ್ ಹೇಳಿದಾಗ ಮಾಡೋದು...'

'ಅಲ್ಲ, ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ? ಗೃಹಲಕ್ಷ್ಮೀದು ನಾಲ್ಕು ತಿಂಗಳ ಹಣ?'

'ಅದು ಹೈಕಮಾಂಡ್ ಕುರ್ಚಿ ಸಮಸ್ಯೆ ಇತ್ಯರ್ಥ ಮಾಡಿದ ಮೇಲೆ ಕೊಡೋದು...'

'ಲೇಯ್, ಎಲ್ಲದ್ಕೂ ಹೈಕಮಾಂಡ್ ಭಜನೆ ಮಾಡಿದ್ರೆ ನೀವೇನ್ ಸರ್ಕಾರ ನಡೆಸ್ತೀರೋ, ಸರ್ಕಸ್ ಮಾಡ್ತೀರೋ?'

'ನಾವು ಹೈಕಮಾಂಡ್ ಹೇಳಿದಂಗೇ ಎಲ್ಲ ಮಾಡೋದು...'

'ಥೋ... ಇವನ ಕತೆ ಇಷ್ಟೆ. ಮಂಜಮ್ಮ ನೀ ಹೇಳು, ನಿಮ್ ಹೈಕಮಾಂಡ್ ಏನಂತತಿ?' ದುಬ್ಬೀರ ಕೇಳಿದ.

'ನಮ್ದು ವೆರಿ ಸಿಂಪಲ್... ಒಂದು ದೇಶ, ಒಬ್ಬನೇ ನಾಯಕ...'

'ಮತ್ತೆ ಕರ್ನಾಟಕದಲ್ಲಿ ನಿಮ್ ಕಮಲ ಪಕ್ಷದಲ್ಲಿ ಮನೆಯೊಂದು ಆರು ಬಾಗಿಲಾಗಿದಾವೆ? ಅಧ್ಯಕ್ಷರನ್ನ ಇಳಿಸಿ, ವಿಪಕ್ಷ ನಾಯಕರನ್ನ ಇಳಿಸಿ ಅಂತ 'ಇಳಿಸೋ' ಆಂದೋಲನ ಶುರು ಆಗೇತಿ?'

'ಅದೆಲ್ಲ ಹೈಕಮಾಂಡ್‌ಗೆ ಬಿಟ್ಟದ್ದು...'

'ಓ... ನಿಮ್ದೂ ಅದೇ ಭಜನೇನಾ? ಲೇ ಗುಡ್ಡೆ ನಿಂದೇನೋ ಕತೆ?'

'ಅವುಂದೂ ಹೈಕಮಾಂಡ್‌ಗೆ ಬಿಟ್ಟದ್ದು...' ಎಂದ ಕೊಟ್ರೇಶಿ.

'ಏನು? ಗುಡ್ಡೆಗೂ ಒಂದು ಹೈಕಮಾಂಡಾ? ಯಾರು?'

'ಇನ್ಯಾರು, ಅವನೆಂಡ್ತಿ. ಇನ್ನು ಐದು ನಿಮಿಷದಲ್ಲಿ ಮನೆಗೆ ಬರದಿದ್ರೆ ಗೇಟ್ ಬಂದಾಗುತ್ತೆ, ಚಾಪೆ, ದಿಂಬು ಆಚೆಗೆ ಬೀಳುತ್ತೆ ಅಂತ ಫೋನ್ ಬರುತ್ತೆ ನೋಡ್ತಿರು...'

ಕೊಟ್ರೇಶಿ ಮಾತಿನ್ನೂ ಮುಗಿದಿರಲಿಲ್ಲ. ಗುಡ್ಡೆ ಫೋನ್ ರಿಂಗಾಯಿತು. ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಡೊಂಕು ಬುದ್ಧಿ ನಾಗರಿಕರಿಗೆ ಬಾಲದ ಚಿಂತೆ!

ಮನುಷ್ಯನ ಮೌಢ್ಯ ನಾಯಿಗಳ ಬಾಲವನ್ನೂ ಬಿಟ್ಟಿಲ್ಲ. ಅವುಗಳ ಬಾಲವನ್ನು ತುಂಡರಿಸುವುದು ಅಮಾನವೀಯ ಮಾತ್ರವಲ್ಲ, ಕಾನೂನುಬಾಹಿರವೂ ಹೌದು.

• ಡಾ. ಮುರಳೀಧರ ಕಿರಣಕೆರೆ

ಕಾರ್ಯನಿಮಿತ್ತ ಹಳ್ಳಿಯೊಂದಕ್ಕೆ ಹೋದಾಗ ಮಹಿಳೆಯೊಬ್ಬಳು ಸಣ್ಣ ದನಿಯಲ್ಲಿ ಕೇಳಿದಳು. 'ಸರ್, ಮರಗಟ್ಟಿಸೋದಕ್ಕೆ ಯಾವುದಾದ್ರೂ ಮಾತ್ರೆ ಬರೆದುಕೊಡ್ತೀರಾ?'. 'ಮರಗಟ್ಟಿಸೋ ಮಾತ್ರೆ ಏನಕ್ಕಮ್ಮ?' ಎಂದು ಕುತೂಹಲದಿಂದ ಕೇಳಿದೆ. 'ನಮ್ಮನೆ ನಾಯಿಯ ಬಾಲ ಕಟ್ ಮಾಡ್ಬೇಕಿತ್ತು. ಆ ಜಾಗ ಮರಗಟ್ಟಿದ್ರೆ ಅದಕ್ಕೆ ನೋವು ಆಗಲ್ಲಲ್ವಾ...' ಎಂದಾಗ, ಅವಳ ಉದ್ದೇಶ ಕೇಳಿ ಗಾಬರಿಯಾಗಿತ್ತು.

'ಹಂಗೆಲ್ಲ ಮರಗಟ್ಟಿಸೋದಕ್ಕೆ ಮಾತ್ರೆ ಬರಲ್ಲ. ಅಲ್ದೇ ಹಾಗೆಲ್ಲ ಸುಮ್ಸುಮ್ನೇ ಬಾಲ ಕಟ್ ಮಾಡ್ಬಾರ್ದು. ಇದು ಕಾನೂನು ಪ್ರಕಾರವೂ ತಪ್ಪು. ಅಷ್ಟಕ್ಕೂ ಬಾಲ ಕಟ್ ಮಾಡೋದು ಯಾಕೆ?' ಎಂದೆ. ನನ್ನ ಮಾತು ಇಷ್ಟವಾಗಲಿಲ್ಲವೆಂಬುದು ಅವಳ ವರ್ತನೆಯಲ್ಲೇ ಗೊತ್ತಾಗುವಂತಿತ್ತು. 'ಅದ್ರ ಬಾಲ ಸುರುಳಿ ಸುತ್ತಿದೆ. ಅದರೊಳಗೆ ನೊಣ ದಾಟಬಾರ್ದು ಅಂತ ಹಿರಿಯರು ಹೇಳ್ತಾರೆ. ಹಂಗಾದ್ರೆ ಮನೆಗೆ ಕೆಡುಕಂತೆ'.

ಆಕೆಯ ಮೌಢ್ಯದ ಮಾತು ಕೇಳಿ ಮರುಕದಿಂದ, 'ಅದೆಲ್ಲಾ ಬರೀ ಮೂಢನಂಬಿಕೆ. ಎಷ್ಟೋ ನಾಯಿಗಳಿಗೆ ಬಾಲ ಸುರುಳಿ ಸುತ್ಕಂಡಿರುತ್ತೆ. ಮನೆಯ ತೊಂದರೆ, ತಾಪತ್ರಯಗಳನ್ನು ಹೀಗೆ ನಾಯಿಬಾಲಕ್ಕೆ ಗಂಟು ಹಾಕ್ಬಾರ್ದಮ್ಮ' ಎಂದೆ. ಜನರಲ್ಲಿ ಬಲವಾಗಿ ಬೇರೂರಿರುವ ಈ ಮೌಢ್ಯದ ಬಗ್ಗೆ ಆಕೆಗೆ ಮನದಟ್ಟು ಮಾಡಿಸಲು ಪ್ರಯತ್ನಿಸಿದೆ.

'ಶಾಸ್ತ್ರ ಸುಮ್ನೆ ಮಾಡಲ್ಲ ಸರ್. ಮಾತ್ರೆ ಇಲ್ಲದಿದ್ರೆ ಹೋಗ್ಲಿ, ಹೆಂಗೂ ಬಾಲ ಅಲ್ವಾ, ಹಂಗೇ ಕಟ್ಮಾಡಿದ್ರೂ ಜಾಸ್ತಿ ನೋಯೋದಿಲ್ಲ ಅಲ್ವಾ?' ಎಂದು ಪ್ರಶ್ನಿಸಿದಳು. 'ನಿಮ್ಮ ಬೆರಳನ್ನು ಹಂಗೇ ತುಂಡು ಮಾಡಿದ್ರೆ ಎಷ್ಟು ನೋವಾಗುತ್ತೋ ಅಷ್ಟು ಆಗಬಹುದು' ಎಂದೆ ನಗುತ್ತಾ. ನನ್ನನ್ನು ವಿಚಿತ್ರವಾಗಿ ನೋಡುತ್ತಾ ಅಲ್ಲಿಂದ ಹೊರಟು ಹೋದಳು.

ನಾಯಿಯ ಬಾಲಕ್ಕೆ ಸಂಬಂಧಿಸಿದಂತೆ ಇಂತಹ ಕಂದಾಚರಣೆ ಹಲವೆಡೆ ಇದೆ. ಜನರ ಈ ಮೌಢ್ಯಕ್ಕೆ ಬಲಿಯಾಗಿ ಹಲವು ನಾಯಿಗಳು ಬಾಲ ಕಳೆದುಕೊಂಡು ಅಂಗವಿಕಲಗೊಂಡಿವೆ. ನಾಯಿಗಳು ಸೇರಿದಂತೆ ಪಶುಗಳಿಗೆ ಬಾಲವೆಂಬುದು ಶರೀರದ ಒಂದು ಪ್ರಮುಖ ಭಾಗ. ತನ್ನ ಸಂಗಾತಿಗಳು, ಇತರೆ ಪ್ರಾಣಿಗಳೊಂದಿಗೆ ಸಂವಹನದ ಜೊತೆಗೆ ದೇಹದ ಸಮತೋಲನ ಕಾಯ್ದುಕೊಳ್ಳುವಲ್ಲಿ ಬಾಲದ್ದು ನಿರ್ಣಾಯಕ ಪಾತ್ರ. ವೇಗವಾಗಿ ಓಡುವಾಗ, ತಿರುವುಗಳಲ್ಲಿ ದೇಹದ ಸ್ಥಿರತೆ ಕಾಪಾಡಿಕೊಳ್ಳಲು, ಈಜುವಾಗ ದಿಕ್ಕು ಬದಲಿಸಲು, ಕೀಟಗಳನ್ನು ಓಡಿಸಲು, ದೇಹದ ಉಷ್ಣತೆ ಕಾಯ್ದುಕೊಳ್ಳಲು, ವಾಸನೆ ಹರಡಿಸಲು ಬಾಲ ಉಪಯುಕ್ತ. ನಾಯಿಯ ಬಾಲದ ಚಲನೆಯನ್ನು ಗಮನಿಸಿ ಅದರ ವರ್ತನೆ, ಮನಃಸ್ಥಿತಿ ಅರಿಯಬಹುದು. ಹೀಗೆ ಬಾಲಕ್ಕೆ ಹಲವು ಕಾರ್ಯಗಳಿದ್ದರೂ, ಬಾಲವೇ ಇಲ್ಲದ ಮನುಷ್ಯರ ದೃಷ್ಟಿಯಲ್ಲಿ ಅದೊಂದು ನಿರುಪಯುಕ್ತ ಅಂಗ! ಹಾಗಾಗಿಯೇ ಸುರುಳಿ ಬಾಲವಿದ್ದರೆ ಅಪಶಕುನವೆಂದು ತುಂಡರಿಸುತ್ತಾರೆ. ಮತ್ತೆ ಡಾಬರ್‌ಮನ್, ರಾಟ್‌ವೀಲರ್, ಬಾಕ್ಸರ್‌ನಂತಹ ಶ್ವಾನ ತಳಿಗಳಲ್ಲಿ ಅವುಗಳ ಸೌಂದರ್ಯ ಹೆಚ್ಚುತ್ತದೆ ಎಂಬ ಕಾರಣಕ್ಕೆ ಬಾಲ ತೆಗೆಯುತ್ತಾರೆ. ಬಾಲವಿಲ್ಲದ ನಾಯಿಗಳನ್ನು ಸಾಕುವುದೇ ಕೆಲವರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ!



ಸುರುಳಿ ಬಾಲದ ಮೌಢ್ಯ ಗಟ್ಟಿಯಾಗಿ ತಲೆಯಲ್ಲಿ ಕೂತಿರುವ ಕಾರಣ ಹರಿತವಾದ ಕತ್ತಿಯಿಂದ ನಾಯಿಯ ಬಾಲ ಕತ್ತರಿಸಿ ಎಸೆಯುವವರು ಅವುಗಳಿಗಾಗುವ ನೋವು, ರಕ್ತಸ್ರಾವದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ನರತಂತುಗಳು ಹೆಚ್ಚಿರುವ ಬಾಲಕ್ಕೆ ಗಾಯವಾದಾಗ ನೋವೂ ಹೆಚ್ಚಿರುತ್ತದೆ. ಇದಕ್ಕಿಂತ ಕ್ರೂರವಾದ ಆಚರಣೆಯೂ ಹಲವೆಡೆಯಿದೆ. ನಾಯಿಯ ಬಾಲದ ಬುಡಕ್ಕೆ ಬಿಗಿಯಾಗಿ ರಬ್ಬರ್ ಬ್ಯಾಂಡ್ ಹಾಕುವುದು. ಇದರಿಂದಾಗಿ ಆ ಭಾಗಕ್ಕೆ ರಕ್ತ ಸಂಚಾರ ನಿಂತು ನಂತರದಲ್ಲಿ ಬಾಲ ಒಣಗಿ ಉದುರಿ ಬೀಳುತ್ತದೆ. ಅಂಗವೊಂದಕ್ಕೆ ರಕ್ತಸಂಚಾರ ನಿಂತಾಗ ಆಗುವ ನೋವು, ಯಾತನೆ ಅಪಾರ. ಮೂಕ ಪ್ರಾಣಿ ಬಾಯಿಬಿಟ್ಟು ಹೇಳಲಾಗದೆ ಒದ್ದಾಡುವುದು ಕಂದಾಚಾರದ ಕುರುಡು ಕಣ್ಣುಗಳಿಗೆ ಕಾಣದು! ನಾಯಿಗಳಲ್ಲಿ ಬಾಲ ಕತ್ತರಿಸುವುದು, ಕಿವಿಗಳನ್ನು ಕತ್ತರಿಸಿ ನೇರವಾಗಿಸುವುದು, ಧ್ವನಿ ತಗ್ಗಿಸುವಿಕೆಯಂತಹ ಶಸ್ತ್ರಚಿಕಿತ್ಸೆಗಳು ಪ್ರಾಣಿ ಕ್ರೌರ್ಯ ತಡೆ ಕಾಯ್ದೆಯನ್ವಯ ಶಿಕ್ಷಾರ್ಹ ಅಪರಾಧ.

ನಾಯಿಗಳು ತಲೆಯೆತ್ತಿ ಊಳಿಡುವುದು ಅಪಶಕುನ ಎಂಬ ಗೊಡ್ಡು ನಂಬಿಕೆಯೂ ವ್ಯಾಪಕವಾಗಿದೆ. ಇದರಿಂದ ಆ ಮನೆಗೋ, ಊರಿಗೋ ಕೆಡುಕಾಗುವುದು ಎಂದು ನಂಬುವವರಿದ್ದಾರೆ. ಊಳಿಡುವ ನಾಯಿಗಳಿಗೆ ಹೊಡೆದು ಬಡಿದು ಸುಮ್ಮನಾಗಿಸಲು ಪ್ರಯತ್ನಿಸುತ್ತಾರೆ. ಹೀಗೆ ಆಕಾಶಕ್ಕೆ ಮುಖ ಮಾಡಿ ಊಳಿಡುವುದು ನಾಯಿಗಳಲ್ಲಿ ಸಂವಹನದ ಒಂದು ಮಾರ್ಗ. ಬೆದೆಯ ಸಮಯದಲ್ಲಿ, ಒಂಟಿಯಾಗಿದ್ದಾಗ, ಒತ್ತಡದಲ್ಲಿದ್ದಾಗ, ಗುಂಪಿನಿಂದ ಅಗಲಿದಾಗ ನಾಯಿಗಳು ಈ ವರ್ತನೆ ತೋರುತ್ತವೆ.

ದಿನವಿಡೀ ನಾಯಿಗಳನ್ನು ಮನೆಯಲ್ಲಿ ಒಂಟಿಯಾಗಿ ಕೂಡಿಹಾಕುವುದು, ಕಾಯಿಲೆ– ಚರ್ಮರೋಗದಿಂದ ಬಳಲುತ್ತಿರುವ ನಾಯಿಗಳನ್ನು ಬೀದಿಪಾಲು ಮಾಡುವುದು, ಕಚ್ಚುತ್ತದೆಯೆಂಬ ಕಾರಣಕ್ಕೆ ಎಲ್ಲೋ ಬಿಟ್ಟು ಬರುವುದು ಎಲ್ಲವೂ ಕ್ರೌರ್ಯವೇ. ಹೀಗೆ ಬೀದಿಪಾಲಾದ ನಾಯಿಗಳ ಆಕ್ರಮಣಕ್ಕೆ ದಾವಣಗೆರೆ ಜಿಲ್ಲೆಯಲ್ಲಿ ಅಮಾಯಕ ಹೆಣ್ಣುಮಗಳೊಬ್ಬಳು ಬಲಿಯಾದ ಇತ್ತೀಚಿನ ಘಟನೆ ನಮ್ಮ ಕಣ್ಣು ತೆರೆಯಿಸಬೇಕಿದೆ. ಸರಿಯಾಗಿ ಅರಿವು ಮೂಡಿದಾಗಲಷ್ಟೇ ಮಾನವನ ಡೊಂಕುಬಾಲ ನೆಟ್ಟಗಾದೀತು!

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಾಗರಿಕ ವಿಮಾನ ಸಮಸ್ಯೆಗಳ ಯಾನ

ವಿರಾಮ ಮತ್ತು ಆರಾಮ – ಇವು ವಿಮಾನಯಾನ ಕ್ಷೇತ್ರದ ಸಿಬ್ಬಂದಿಗೆ ಬೇಕಿರುವ ಪ್ರಮುಖ ಅಗತ್ಯಗಳು. ಭಾರತದ ವಿಮಾನಯಾನ ಕ್ಷೇತ್ರದಲ್ಲೀಗ ಇವುಗಳೇ ಕೊರತೆಗಾಗಿ ಕಾಡುತ್ತಿವೆ. ಕ್ಷೇತ್ರ ಹಿರಿದಾಗಿ ಹಿಗ್ಗುತ್ತಿದ್ದರೂ ಅದಕ್ಕೆ ತಕ್ಕ ಮೂಲಸೌಕರ್ಯ ಇಲ್ಲ. 'ಇಂಡಿಗೊ ಬಿಕ್ಕಟ್ಟಿಗೆ ಆ ಸಂಸ್ಥೆಯೇ ಕಾರಣ' ಎಂದು ಕೇಂದ್ರ ಸರ್ಕಾರ ದೂರಿದೆ. ಆದರೆ, ಕೇಂದ್ರವೂ ಸೇರಿದಂತೆ ಡಿಜಿಸಿಎ ಮತ್ತು ಇಂಡಿಗೊ ಕಾರ್ಯವೈಖರಿ ಬಗ್ಗೆ ದೆಹಲಿ ಹೈಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಈ ಪ್ರಕರಣದಲ್ಲಿ ಇಂಡಿಗೊ ಸಂಸ್ಥೆಯ ತಪ್ಪು ಎದ್ದು ತೋರುತ್ತಿದ್ದರೂ ಇಡೀ ಕ್ಷೇತ್ರದಲ್ಲಿ ಆಡಳಿತಾತ್ಮಕವಾದ ಹಲವು ಮೂಲಭೂತ ಸಮಸ್ಯೆಗಳಿವೆ

• ಸುಕೃತ ಎಸ್.

ಭಾರತದ ವಿಮಾನಯಾನ ಮಾರುಕಟ್ಟೆಯು ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿದೆ. ಹವಾಯಿ ಚಪ್ಪಲಿ ಹಾಕುವ ವ್ಯಕ್ತಿ ಕೂಡ ವಿಮಾನದಲ್ಲಿ ಹಾರಾಟ ನಡೆಸಬೇಕು ಎಂಬ ಉದ್ದೇಶದಿಂದ ಪ್ರಾದೇಶಿಕ ಸಂಪರ್ಕ ಯೋಜನೆಯಡಿ 2016ರಲ್ಲಿ ಉಡಾನ್ ಯೋಜನೆಯನ್ನು ಜಾರಿಗೆ ತರಲಾಯಿತು. ಇದರೊಂದಿಗೆ ಸಣ್ಣಸಣ್ಣ ನಗರ ಪ್ರದೇಶಗಳಲ್ಲಿಯೂ ವಿಮಾನ ನಿಲ್ದಾಣಗಳು ತಲೆ ಎತ್ತಿದವು, ವಿಮಾನ ಹಾರಾಟ ಆರಂಭವಾಯಿತು.

ಹೆಚ್ಚು ಹೆಚ್ಚು ಜನರು ವಿಮಾನದಲ್ಲಿ ಸಂಚರಿಸಲು ಆರಂಭಿಸಿದರು. ಇದಕ್ಕೆ ತಕ್ಕಂತೆ ವಿಮಾನಗಳ ಹಾರಾಟವನ್ನು ಹೆಚ್ಚಿಸಲಾಯಿತು. ಹೊಸ ಹೊಸ ಪ್ರದೇಶಗಳಿಗೆ ವಿಮಾನ ಹಾರಾಟ ಸಂಪರ್ಕ ಹೆಚ್ಚಿಸಲಾಯಿತು. ಆದರೆ, ಇದಕ್ಕೆ ತಕ್ಕಂತೆ ಮಾನವ ಸಂಪನ್ಮೂಲ, ಸುರಕ್ಷತಾ ಕ್ರಮಗಳ ಪಾಲನೆ, ಮೇಲ್ವಿಚಾರಣೆ ಸೇರಿದಂತೆ ಯಾವುದೇ ಮೂಲಭೂತ ವ್ಯವಸ್ಥೆಯು ವಿಸ್ತಾರಗೊಳ್ಳಲೇ ಇಲ್ಲ.

ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ (ಐಸಿಎಒ) ತನ್ನ ಇತ್ತೀಚಿನ ಮೇಲ್ವಿಚಾರಣೆ ಕುರಿತ ಲೆಕ್ಕಪರಿಶೋಧನಾ ವರದಿಯಲ್ಲಿ ಭಾರತಕ್ಕೆ ಶೇ 85.65ರಷ್ಟು ಅಂಕ ನೀಡಿದೆ. ಇದು ಜಗತ್ತಿನ ಸರಾಸರಿಯನ್ನೂ ಮೀರುತ್ತದೆ. ಆದರೆ, ಈ ಅಭಿವೃದ್ಧಿಯು ಕೇವಲ ಕಾಗದದ ಮೇಲೆ ಇದೆ, ವಾಸ್ತವದಲ್ಲಿ ಇಲ್ಲ ಎನ್ನುತ್ತದೆ ಸಂಚಾರ, ಪ್ರವಾಸ ಮತ್ತು ಸಂಸ್ಕೃತಿಯ ಸಂಸದೀಯ ಸ್ಥಾಯಿ ಸಮಿತಿ ವರದಿ.

ಏರುತ್ತಲೇ ಇದೆ ವಿಮಾನ ಏರುವವರ ಸಂಖ್ಯೆ

(ಕೋಟಿಗಳಲ್ಲಿ)



ವಿಮಾನಯಾನ ಕ್ಷೇತ್ರದಲ್ಲಿ ನಾಗರಿಕ ವಿಮಾನಯಾನ ಸಚಿವಾಲಯವೇ ಸರ್ವೋಚ್ಚ. ಇದರ ಅಡಿಯಲ್ಲಿ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ), ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ), ನಾಗರಿಕ ವಿಮಾನಯಾನ ಭದ್ರತಾ ಬ್ಯೂರೊ (ಬಿಸಿಎಎಸ್) ಮತ್ತು ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ಬರುತ್ತವೆ.

1,063 ಡಿಜಿಸಿಎಯಲ್ಲಿರುವ ಒಟ್ಟು ಹುದ್ದೆಗಳು

553 ಭರ್ತಿ ಆಗಿರುವ ಹುದ್ದೆಗಳು

297 ಹುದ್ದೆಗಳನ್ನು ಮುಂದಿನ 6 ತಿಂಗಳಲ್ಲಿ ಭರ್ತಿ ಮಾಡಲಾಗುವುದು ಎಂದು ಕೇಂದ್ರ ಹೇಳಿದೆ

ಡಿಜಿಸಿಎ ಸಿಬ್ಬಂದಿ ಕೊರತೆ

ತಾಂತ್ರಿಕ ವಿಚಾರ, ಸುರಕ್ಷತೆ, ಹಾರಾಟ ನಡೆಸಲು ವಿಮಾನವೊಂದು ಶಕ್ತವಾಗಿದೆಯೇ ಇಲ್ಲವೇ ಎನ್ನುವುದನ್ನು ಪರೀಕ್ಷಿಸುವುದು ಮತ್ತು ಇದಕ್ಕೆ ಸಂಬಂಧಿಸಿ ನಿಯಮಗಳನ್ನು ರೂಪಿಸುವುದು, ವಿಮಾನ ಹಾರಾಟ ಕಾರ್ಯಾಚರಣೆ, ಪರವಾನಗಿ ನೀಡುವುದು ಸೇರಿದಂತೆ ಡಿಜಿಸಿಎಗೆ ಹಲವು ಪ್ರಮುಖ ಜವಾಬ್ದಾರಿಗಳಿವೆ. ಆದರೆ, ಈ ಜವಾಬ್ದಾರಿಗಳನ್ನು ನಿರ್ವಹಿಸಲು ಬೇಕಿರುವ ತಜ್ಞ ಸಿಬ್ಬಂದಿಯೇ ಇಲ್ಲ.

ನೇಮಕಾತಿ ಮತ್ತು ಆಡಳಿತಾತ್ಮಕವಾಗಿ ಡಿಜಿಸಿಎಗೆ ಶಾಸನಬದ್ಧ ಸ್ವಾಯತ್ತೆ ನೀಡಬೇಕು ಎಂದು ತಜ್ಞರ ಹಲವು ಸಮಿತಿಗಳು ಶಿಫಾರಸು ಮಾಡಿವೆ. ಆದರೆ, ಇವುಗಳು ಕಾರ್ಯರೂಪಕ್ಕೆ ಬಂದಿಲ್ಲ. ಈ ಸಂಸ್ಥೆಯ ಹೆಚ್ಚಿನ ಹುದ್ದೆಗಳು ಯುಪಿಎಸ್‌ಸಿ ಮೂಲಕ ಭರ್ತಿಯಾಗುತ್ತವೆ. ಡಿಜಿಸಿಎಯೇ ಹೇಳುವಂತೆ, ಇದೊಂದು ನಿರಂತರ ಮತ್ತು ನಿಧಾನಗತಿಯ ಪ್ರಕ್ರಿಯೆ.

ಭಾರತೀಯ ವಾಯುಸೇನೆಯಿಂದಲೂ ಡಿಜಿಸಿಎಗೆ ನಿಯೋಜನೆ ಮಾಡಿಕೊಳ್ಳಲಾಗುತ್ತದೆ. ಆದರೆ, ಉತ್ತಮ ಸಂಬಳ, ವಿವಿಧ ಸೇವಾ ಸೌಲಭ್ಯಗಳು– ಭತ್ಯೆಗಳು ಇಲ್ಲಿ ಸಿಗುವುದಿಲ್ಲ. ಈ ಕಾರಣಕ್ಕೆ ವಾಯುಪಡೆಯ ಯಾವ ಅಧಿಕಾರಿಯೂ ಡಿಜಿಸಿಎನಲ್ಲಿ ಕೆಲಸ ಮಾಡುವುದಕ್ಕೆ ಒಪ್ಪಿಕೊಳ್ಳುವುದಿಲ್ಲ. ಈ ಎರಡು ಪ್ರಮುಖ ಕಾರಣಗಳಿಂದ ತಜ್ಞ ಹಾಗೂ ಸಾಮಾನ್ಯ ಸಿಬ್ಬಂದಿಯೂ ಇಲ್ಲದೆ ಡಿಜಿಸಿಎ ಸೊರಗುತ್ತಿದೆ. ಡಿಜಿಸಿಎ ಅಂಥ ಪ್ರಮುಖ ಸಂಸ್ಥೆಗೆ ಸಿಬ್ಬಂದಿ ಕೊರತೆ ತಲೆದೋರುವುದು ಆಡಳಿತಾತ್ಮಕವಾಗಿರುವ ಕೊರತೆ ಅಥವಾ ಸಮಸ್ಯೆ ಮಾತ್ರವಲ್ಲ, ಭಾರತದ ನಾಗರಿಕರ ಸುರಕ್ಷತೆಗೂ ಮಾರಕವಾಗಿರುವ ಸಮಸ್ಯೆ ಎಂದು ಸಂಸದೀಯ ಸ್ಥಾಯಿ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಪದೇ ಪದೇ ವಿನಾಯಿತಿ

ವಿಮಾನಯಾನ ಸಂಸ್ಥೆಗಳಲ್ಲೂ ಸಿಬ್ಬಂದಿ ಕೊರತೆ ಸಾಮಾನ್ಯ ಎಂಬಂತಾಗಿದೆ. ಎಲ್ಲ ಸಮಸ್ಯೆಗಳ ಮಧ್ಯೆಯೇ ಕಾರ್ಯನಿರ್ವಹಿಸುವುದನ್ನು ಈ ಸಂಸ್ಥೆಗಳು ಅಭ್ಯಾಸ ಮಾಡಿಕೊಂಡಿವೆ ಎಂದು ಸಂಸದೀಯ ಸ್ಥಾಯಿ ಸಮಿತಿ ಹೇಳಿದೆ. ವಾಚ್ ಡ್ಯೂಟಿ ಟೈಮ್ ಲಿಮಿಟೇಷನ್ (ಡಬ್ಲ್ಯುಡಿಟಿಎಲ್) ನಿಯಮದಡಿ ಎಟಿಸಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ಡಬ್ಲ್ಯುಡಿಟಿಎಲ್ ನಿಯಮಗಳಲ್ಲಿ ನೀಡಲಾಗಿರುವ ಮಿತಿಯನ್ನೂ ಮೀರಿ ವಿರಾಮ ಮತ್ತು ವಿಶ್ರಾಂತಿಯೇ ಇಲ್ಲದೆ ಕೆಲಸ ಮಾಡಲು ಡಿಜಿಸಿಎ ವಿನಾಯಿತಿ ನೀಡುತ್ತದೆ. ಆಡಳಿತಾತ್ಮಕ ವೈಫಲ್ಯಕ್ಕೆ ಇದು ಉತ್ತಮ ಉದಾಹರಣೆ ಎನ್ನುತ್ತದೆ ವರದಿ. 'ವಿಮಾನಯಾನ ಕೆಲಸದ ಅವಧಿ ಮಿತಿ' (ಎಫ್‌ಡಿಟಿಎಲ್) ಜಾರಿ ವಿಚಾರದಲ್ಲಿಯೂ ಡಿಜಿಸಿಎ ಹಲವು ವಿಮಾನಯಾನ ಸಂಸ್ಥೆಗಳಿಗೆ ಹಲವು ಬಾರಿ ವಿನಾಯಿತಿ ನೀಡಿದೆ.

ದೋಷ ಪತ್ತೆಯಲ್ಲಿ ಮುಂದೆ, ಪರಿಹಾರದಲ್ಲಿ ಹಿಂದೆ

2024	12,683 ಡಿಜಿಸಿಎ ಕಂಡುಹಿಡಿದ ದೋಷಗಳ ಸಂಖ್ಯೆ	81 ಒಂದನೇ ಹಂತದ ದೋಷಗಳು	12,602 ಎರಡನೇ ಹಂತದ ದೋಷಗಳು	961 2024 ಅಂತ್ಯವಾದರೂ ಸರಿಪಡಿಸದೇ ಉಳಿದ ಎರಡನೇ ಹಂತದ ದೋಷಗಳ ಸಂಖ್ಯೆ	
2025	4,692 ಡಿಜಿಸಿಎ ಪತ್ತೆ ಹಚ್ಚಿದ ದೋಷಗಳ ಸಂಖ್ಯೆ (ಏಪ್ರಿಲ್‌ವರೆಗಿನ ಮಾಹಿತಿ)	3,747 ಸರಿಪಡಿಸದೇ ಉಳಿದ ದೋಷಗಳ ಸಂಖ್ಯೆ	10 ಸರಿಪಡಿಸದ ಒಂದನೇ ಹಂತದ ದೋಷಗಳ ಸಂಖ್ಯೆ	1,294 ಸರಿಪಡಿಸದೇ ಉಳಿದ ಎರಡನೇ ಹಂತದ ದೋಷಗಳ ಸಂಖ್ಯೆ	945 ಸರಿಪಡಿಸಲಾದ ದೋಷಗಳ ಸಂಖ್ಯೆ

• **ಒಂದನೇ ಹಂತದ ದೋಷಗಳು:** ನಾಗರಿಕರ ಸುರಕ್ಷತಾ ನಿಯಮಗಳನ್ನು ಪಾಲಿಸದೇ ಇರುವುದು, ಪೈಲಟ್ ಮತ್ತು ವಿಮಾನ ಸಿಬ್ಬಂದಿಗೆ ತರಬೇತಿ, ವಿರಾಮ ಮತ್ತು ವಿಶ್ರಾಂತಿ ನೀಡದಿರುವುದು, ಸಿಬ್ಬಂದಿ ಕೊರತೆಯೊಂದಿಗೆ ಹಾರಾಟ ನಡೆಸಿರುವುದು, ವಿಮಾನದ ಪರಿಶೀಲನೆ ನಡೆಸದೇ ಇರುವುದು, ಪರವಾನಗಿ ಇಲ್ಲದ ವಿಮಾನಗಳನ್ನು ಹಾರಾಟಕ್ಕೆ ಬಳಸಿಕೊಳ್ಳುವುದು ಸೇರಿ ಇತರೆ **– ಇವು ಗಂಭೀರ ಸ್ವರೂಪದ ದೋಷಗಳು**

• **ಎರಡನೇ ಹಂತದ ದೋಷಗಳು:** ಆಡಳಿತಾತ್ಮಕ ತಪ್ಪುಗಳು, ಪ್ರಕ್ರಿಯೆಯಲ್ಲಿನ ವಿಳಂಬ, ಡಿಜಿಸಿಎಗೆ ನಿಯಮಿತವಾಗಿ ವರದಿ ನೀಡದೇ ಇರುವುದು, ಗಂಭೀರ ಸ್ವರೂಪದ ಸುರಕ್ಷತಾ ನಿಯಮಗಳಲ್ಲದೆ ಇರುವ ನಿಯಮಗಳನ್ನೂ ಪಾಲಿಸದೇ ಇರುವುದು ಸೇರಿ ಇತರೆ **–ಇವು ಗಂಭೀರ ಸ್ವರೂಪದ ದೋಷಗಳಲ್ಲ**

ವಿಮಾನಯಾನ ಕ್ಷೇತ್ರದ ವಿವಿಧ ಹಂತಗಳಲ್ಲಿನ ದೋಷಗಳನ್ನು ಡಿಜಿಸಿಎ ಪತ್ತೆ ಹಚ್ಚುತ್ತದೆ. ದೋಷಗಳನ್ನು ಪತ್ತೆ ಹಚ್ಚುವುದರಲ್ಲಿ ಸಂಸ್ಥೆಯು ಪ್ರಶಂಸಾರ್ಹ ಕಾರ್ಯವನ್ನೇ ಮಾಡುತ್ತಿದೆ. ಆದರೆ, ಕಂಡುಬಂದ ದೋಷಗಳನ್ನು ಸರಿಪಡಿಸುವುದಕ್ಕೆ ಮಾತ್ರ ಸಂಸ್ಥೆಗೆ ಸಾಧ್ಯವಾಗಿಲ್ಲ. ಇದಕ್ಕೆ ತಜ್ಞ ಸಿಬ್ಬಂದಿ ಕೊರತೆ ಮೂಲಕಾರಣ ಎನ್ನುತ್ತದೆ ಸ್ಥಾಯಿ ಸಮಿತಿ ವರದಿ. ಒಂದನೇ ಹಂತದ ದೋಷಗಳನ್ನು ತಕ್ಷಣದಲ್ಲಿಯೇ ಪರಿಹರಿಸಬೇಕಾಗುತ್ತದೆ. ಆದರೆ, ಇದು ಸಾಧ್ಯವಾಗುತ್ತಿಲ್ಲ.

ಎಟಿಸಿ: ತರಬೇತಿ ಇಲ್ಲ

ವಾಯು ಸಂಚಾರ ನಿಯಂತ್ರಕರ(ಎಟಿಸಿ) ಕೊರತೆಯೂ ಪ್ರಮುಖವಾಗಿದೆ. ತರಬೇತಿಯೇ ಇಲ್ಲದೆ ನೂರಾರು ಮಂದಿ ಎಟಿಸಿ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದೆಹಲಿ, ಮುಂಬೈ, ಬೆಂಗಳೂರು, ಹೈದರಾಬಾದ್ ಸೇರಿದಂತೆ ಹಲವು ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಅಧಿಕಾರಿಗಳನ್ನು ನಿಯಮಕ್ಕಿಂತಲೂ ಅಧಿಕ ಅವಧಿಗೆ ದುಡಿಸಿಕೊಳ್ಳಲಾಗುತ್ತಿದೆ. ಇದರಿಂದ ಕೆಲಸವು ಆಯಾಸದಾಯಕವಾಗಿದೆ.

ವಿಮಾನಗಳ ಟೇಕ್ ಆಫ್ ಮತ್ತು ಲ್ಯಾಂಡಿಂಗ್‌ಗೆ ಸೂಚನೆ ನೀಡುವ ಮತ್ತು ಇಂಧನ ಉಳಿಸಲು, ಟರ್ಬ್ಯುಲೆನ್ಸ್ ವೇಳೆ ವಿಮಾನವು ಎಷ್ಟು ಎತ್ತರದಲ್ಲಿ ಹಾರಾಟ ನಡೆಸಬೇಕು ಎಂಬುದನ್ನೆಲ್ಲಾ ಸೂಚಿಸುವ ಪ್ರಮುಖ ವಿಭಾಗಗಳನ್ನು ಎಷ್ಟೋ ನಿಲ್ದಾಣಗಳಲ್ಲಿ ವಿಲೀನಗೊಳಿಸಲಾಗಿದೆ. ರಾತ್ರಿ ವೇಳೆ ಈ ಕಾರ್ಯಗಳನ್ನು ನಿರ್ವಹಿಸುವಷ್ಟು ಸಿಬ್ಬಂದಿ ಇಲ್ಲದಂತಾಗಿದೆ. ಇದರಿಂದಾಗಿ ಸಿಬ್ಬಂದಿಯು ವಿರಾಮವೂ ಇಲ್ಲದೆ ವಿಶ್ರಾಂತಿಯೂ ಇಲ್ಲದೆ ಮಾನಸಿಕ ಒತ್ತಡ ಎದುರಿಸುವಂತಾಗಿದೆ.

ಎಟಿಸಿ ಅಧಿಕಾರಿಯಾಗಲು ಮೊದಲು ತರಬೇತಿ ನೀಡಲಾಗುತ್ತದೆ. ದೇಶದಲ್ಲಿ ಒಂದು ಬಾರಿಗೆ ಒಟ್ಟು 210 ಮಂದಿಗಷ್ಟೇ ತರಬೇತಿ ನೀಡುವ ಸೌಕರ್ಯವಿದೆ. ಒಂದು ವೇಳೆ 400 ಮಂದಿ ಎಟಿಸಿ ಅಧಿಕಾರಿ ಹುದ್ದೆಗೆ ನೇಮಕಗೊಳ್ಳುತ್ತಾರೆ ಎಂದಾದರೆ, ಈ ಪೈಕಿ 210 ಮಂದಿಗಷ್ಟೇ ತರಬೇತಿ ದೊರೆಯುತ್ತದೆ. ಉಳಿದವರನ್ನು ವಿವಿಧ ನಿಲ್ದಾಣಗಳಲ್ಲಿ ನೇರವಾಗಿ ಕಾರ್ಯನಿರ್ವಹಿಸಲು ಅನುಮತಿಸಲಾಗುತ್ತದೆ. ಇಂಥ ಪ್ರಮುಖ ಹುದ್ದೆಗಳಿಗೆ ತರಬೇತಿಯೇ ಇಲ್ಲದೆಯೇ ಕಾರ್ಯನಿರ್ವಹಿಸಲು ಬಿಡುವುದು ಜನರ ಸುರಕ್ಷತೆಗೆ ಮಾರಕ ಎಂದು ವರದಿಯಲ್ಲಿ ಹೇಳಲಾಗಿದೆ.

ಮತ್ತಷ್ಟು ಲಾಭದ ಉದ್ದೇಶ

ವಿಮಾನವೊಂದರಲ್ಲಿ ಗಂಭೀರವಾದ ನಿರ್ವಹಣಾ ಸಮಸ್ಯೆ ಕಂಡುಬಂದರೆ, ಅಂಥ ವಿಮಾನದ ಹಾರಾಟವನ್ನು ರದ್ದು ಮಾಡಬೇಕು. ಅದನ್ನು ದುರಸ್ತಿಗೆ ಕಳುಹಿಸಬೇಕು. ಆದರೆ, ಹಲವು ವಿಮಾನಯಾನ ಸಂಸ್ಥೆಗಳು ಇಂಥ ವಿಮಾನಗಳನ್ನು ಹಾರಾಟಕ್ಕೆ ಬಳಸುತ್ತವೆ. ದುರಸ್ತಿಗೆ ಕಳುಹಿಸುವ ಮೊದಲು ಸಮಸ್ಯೆ ಇರುವ ವಿಮಾನದಿಂದ ಬಂದಷ್ಟು ಲಾಭ ಬರಲಿ ಎನ್ನುವ ಕಾರಣಕ್ಕೆ ಸಂಸ್ಥೆಗಳು ಹೀಗೆ ಮಾಡುತ್ತಿವೆ.

ಆಧಾರ: ಸಂಚಾರ, ಪ್ರವಾಸ ಮತ್ತು ಸಂಸ್ಕೃತಿಯ ಸಂಸದೀಯ ಸ್ಥಾಯಿ ಸಮಿತಿಯ ಆಗಸ್ಟ್ ವರದಿ, ವಿಮಾನಯಾನ ಸಚಿವಾಲಯದ ವರದಿ, ಲೋಕಸಭೆಯಲ್ಲಿ ಸರ್ಕಾರ ನೀಡಿದ ಉತ್ತರಗಳು, ಪಿಟಿಐ

ರಾಷ್ಟ್ರೀಯ

ಪ್ರಜ್ವಲ್ ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮಹಿಳೆ ಮೇಲಿನ ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ಸೆಷನ್ಸ್ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ನನ್ನ ವಿರುದ್ಧದ ಇನ್ನೆರಡು ಕ್ರಿಮಿನಲ್ ಪ್ರಕರಣಗಳನ್ನು ಮತ್ತೊಂದು ಸೆಷನ್ಸ್ ಕೋರ್ಟ್‌ಗೆ ವರ್ಗಾಯಿಸಬೇಕು' ಎಂದು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ಪ್ರಜ್ವಲ್ ರೇವಣ್ಣ

ಅರ್ಜಿಯ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಾಂಚೋಲಿ ಅವರಿದ್ದ ಪೀಠವು, 'ವಿಚಾರಣಾ ದಾಖಲೆಗಳನ್ನು ಉಲ್ಲೇಖಿಸಿ ಮತ್ತು ಕರ್ನಾಟಕ ಹೈಕೋರ್ಟ್‌ನ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ನ್ಯಾಯಾಧೀಶರು ಈ ಹೇಳಿಕೆಗಳನ್ನು ನೀಡಿದ್ದಾರೆ' ಎಂದು ಹೇಳಿದೆ.

'ವಿಚಾರಣಾ ನ್ಯಾಯಾಧೀಶರ ಈ ಅಭಿಪ್ರಾಯಗಳು ಪಕ್ಷಪಾತದಿಂದ ಕೂಡಿವೆ ಎಂದು ಹೇಳಲು ಆಗುವುದಿಲ್ಲ' ಎಂದೂ ಪೀಠ ಸ್ಪಷ್ಟಪಡಿಸಿದೆ.

ಪ್ರಜ್ವಲ್ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಸಿದ್ಧಾರ್ಥ್ ಲೂತ್ರಾ ಮತ್ತು ಸಿದ್ಧಾರ್ಥ್ ದವೆ, 'ನ್ಯಾಯಾಧೀಶರು ವಕೀಲರ ವಿರುದ್ಧವೂ ಪ್ರತಿಕೂಲ ಹೇಳಿಕೆಗಳನ್ನು ನೀಡಿದ್ದಾರೆ' ಎಂದರು.

'ಕೆಲವೊಮ್ಮೆ ನಾವು ತಪ್ಪುಗಳನ್ನು ಮಾಡುತ್ತೇವೆ. ಆದರೆ, ನಾವು ಅದನ್ನು ಸರಿಪಡಿಸುತ್ತೇವೆ. ನಾವು ಇಷ್ಟು ದೊಡ್ಡ ಪ್ರಮಾಣದ ಪ್ರಕರಣಗಳನ್ನು ವಿಚಾರಣೆ ನಡೆಸುತ್ತಿದ್ದೇವೆ' ಎಂದು ಸಿಜೆಐ ಹೇಳಿದರು.

ಮನವಿ ಏನಿತ್ತು?: 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಈಗಾಗಲೇ ನನ್ನ ವಿರುದ್ಧ ಒಂದು ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ಪೂರ್ವಗ್ರಹ ಭಾವನೆ ಹೊಂದಿರುವ ಅಂಶಗಳನ್ನು ವ್ಯಕ್ತಪಡಿಸಿದ್ದಾರೆ. ಇದು ಅವರ ಅನ್ಯಾಯದ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 408ರ ಅಡಿಯಲ್ಲಿ ಸದ್ಯ ನಡೆಯುತ್ತಿರುವ ಮತ್ತೆರಡು ಪ್ರಕರಣಗಳ ವಿಚಾರಣೆಯನ್ನು ಬೆಂಗಳೂರಿನ ಮತ್ತೊಂದು ಸೆಷನ್ಸ್ ಕೋರ್ಟ್‌ಗೆ ವರ್ಗಾವಣೆ ಮಾಡಲು ಆದೇಶಿಸಬೇಕು' ಎಂದು ಪ್ರಜ್ವಲ್ ಕೋರಿದ್ದರು.

ಹೈಡ್ರೋಜನ್ ಕಾರು ಚಲಾಯಿಸಿದ ಜೋಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಅವರು ಹೈಡ್ರೋಜನ್ ಕಾರನ್ನು ಚಲಾಯಿಸಿಕೊಂಡು ಸಂಸತ್ ಅಧಿವೇಶನಕ್ಕೆ ಗುರುವಾರ ಬಂದರು.

ನವೀಕರಿಸಬಹುದಾದ ಇಂಧನ ಇಲಾಖೆ, ಟೊಯೋಟಾ ಕಿರ್ಲೋಸ್ಕರ್ ಕಂಪನಿ ಮತ್ತು ರಾಷ್ಟ್ರೀಯ ಸೌರಶಕ್ತಿ ಸಂಸ್ಥೆ ಜೊತೆಯಾಗಿ ತಯಾರಿಸಿದ ಹೈಡ್ರೋಜನ್ ಕಾರಿನಲ್ಲಿ ಬಂದ ಜೋಶಿ, ದೇಶದಲ್ಲಿ ಹೈಡ್ರೋಜನ್, ಹಸಿರು ಶಕ್ತಿ ಮತ್ತು ಹಸಿರು ಇಂಧನ ಬಳಕೆಗೆ ಉತ್ತೇಜನ ನೀಡಿದರು.

ಮಾನವೀಯ ಪರಿಗಣನೆಗಳು ಕನಿಷ್ಠ ಶಿಕ್ಷೆ ಮೀರುವಂತಿಲ್ಲ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಮಾನವೀಯ ನೆಲೆಗಟ್ಟಿನ ಪರಿಶೀಲನೆಗಳು ಶಾಸನಬದ್ಧ ಕನಿಷ್ಠ ಶಿಕ್ಷೆಯ ಮಿತಿಯನ್ನು ಮೀರಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಮಾದಕ ವಸ್ತು ಪ್ರಕರಣವೊಂದರಲ್ಲಿ ಮಹಿಳೆಗೆ ವಿಧಿಸಲಾದ ಶಿಕ್ಷೆಯ ವಿಚಾರದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಮದ್ರಾಸ್ ಹೈಕೋರ್ಟ್ 2024ರ ಜೂನ್‌ನಲ್ಲಿ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಮಹಿಳೆ ಮೇಲ್ಮನವಿ ಸಲ್ಲಿಸಿದ್ದರು.

ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ನಿಯಂತ್ರಣ (ಎನ್‌ಡಿಪಿಎಸ್) ಕಾಯ್ದೆ–1985ರ ಅಡಿಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಮಹಿಳೆಗೆ ವಿಧಿಸಲಾಗಿರುವ 10 ವರ್ಷಗಳ ಜೈಲು ಶಿಕ್ಷೆಯನ್ನು ಎತ್ತಿಹಿಡಿದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ.ರಾಮ್ ಮೋಹನ್ ನಾಯ್ಡು ಅವರು ವೇದಿಕೆಯೊಂದರಲ್ಲಿ ನೃತ್ಯ ಮಾಡುತ್ತಿರುವ ವಿಡಿಯೊವನ್ನು 'ಎಕ್ಸ್' ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ. 'ಇಂಡಿಗೊ ಬಿಕ್ಕಟ್ಟಿನಿಂದಾಗಿ ವಿಮಾನಗಳ ಹಾರಾಟ ವಿಳಂಬವಾಗಿರುವಾಗ, ವಿಮಾನ ನಿಲ್ದಾಣಗಳು ಪ್ರಯಾಣಿಕರಿಂದ ತುಂಬಿ ತುಳುಕುತ್ತಿರುವಾಗ ವಿಮಾನಯಾನ ಸಚಿವ ನೃತ್ಯ ಮಾಡುತ್ತಿದ್ದಾರೆ. ಈ ಸರ್ಕಾರಕ್ಕೆ ಆಡಳಿತಕ್ಕಿಂತಲೂ ಮನರಂಜನೆಯೇ ಮುಖ್ಯ. ನೃತ್ಯ ನಿಲ್ಲಿಸಿ, ನೀವು ಸೃಷ್ಟಿಸಿರುವ ಗೊಂದಲವನ್ನು ಸರಿಪಡಿಸಿ' ಎಂದು ಆ ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು.



ವಿಡಿಯೊದ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಹಲವರು ಇದೇ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ ಇದೇ ವಿಡಿಯೊವನ್ನು ಈ ಟಿವಿ ಆಂಧ್ರಪ್ರದೇಶ ಯೂಟ್ಯೂಬ್ ಚಾನೆಲ್‌ನಲ್ಲಿ ಈ ವರ್ಷದ ಜುಲೈ 29ರಂದು ಪೋಸ್ಟ್ ಮಾಡಿದ್ದು ತಿಳಿದು ಬಂತು. ವಿಜಯನಗರ ಜಿಲ್ಲೆಯ ಭೋಗಾಪುರಂನಲ್ಲಿ ನಡೆದ ಸಂಬಂಧಿಯೊಬ್ಬರ ಮದುವೆ ಆರತಕ್ಷತೆ ಕಾರ್ಯಕ್ರಮದಲ್ಲಿ ಸಚಿವರು ನೃತ್ಯ ಮಾಡುತ್ತಿರುವುದರ ಬಗ್ಗೆ ವಿಡಿಯೊದಲ್ಲಿ ಮಾಹಿತಿ ಇತ್ತು. ಇದು ಈಗಿನ ವಿಡಿಯೊ ಅಲ್ಲ ಎಂಬುದು ಇದರಿಂದ ಸ್ಪಷ್ಟವಾಯಿತು. ಬೇರೆ ಯೂಟ್ಯೂಬ್ ಚಾನೆಲ್‌ಗಳಲ್ಲೂ ಈ ವಿಡಿಯೊ ಪೋಸ್ಟ್ ಮಾಡಲಾಗಿದೆ. ಹಳೆಯ ವಿಡಿಯೊವನ್ನು ಪೋಸ್ಟ್ ಮಾಡಿ ಇಂಡಿಗೊ ಬಿಕ್ಕಟ್ಟಿನ ಸಂದರ್ಭದಲ್ಲಿ ಸಚಿವರು ನೃತ್ಯ ಮಾಡುತ್ತಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ. ಇವೆರಡಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6251

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ನೂಲುವ ಸಾಧನ (2)
3.ಅಭಿನಯಕಾರನಾಗಿರುವ ಶಿವ (4)
5.ಮಣಿ ಧರಿಸಿರುವ ಚಲುವೆ (3)
6.ಲೋಪಗಳನ್ನು ಸರಿಪಡಿಸುವವನು (4)
8.ಕೊನೆಗಿರುವ ಮಗ ತಿರುಗಿದಾಗ ಸೇರುವಿಕೆ! (4)
12.ಹೀಗೆ ಕಣ್ಮರೆಯಾಗುವುದು (4)
14.ಎಲ್ಲಾ ಬಗೆಯ ಅಭಿಮಾನವನ್ನು ತಳ್ಳಿಹಾಕಿದವನು (4)
15.ಧಾನ್ಯ ಸಂಗ್ರಹಿಸುವ ಸ್ಥಳವಿದು (3)
16.ಬುಡದಿಂದ ವ್ಯಕ್ತಗೊಂಡಿರುವ ಕಳವಳ (4)
17.ಸಂಸಾರ ಬಂಧನಕ್ಕೆ ಒಳಗಾದವನು (2)

ಮೇಲಿಂದ ಕೆಳಕ್ಕೆ

1.ಊರ ಮೆರವಣಿಗೆ ನೋಡುವಾಗ ಈ ಉಪದ್ರವ! (5)
2.ರಾಜ ಪತ್ನಿಯ ಆಲಯ (4)
3.ಅದೇ ತಾನೆ ಬಿರಿದಿರುವ ಹೂ (4)
4.ಬದುಕು ಈ ಬಂಡಿಯ ಹಾಗಂತೆ! (3)
7.ಬೆರಳಚ್ಚುವಿನಲ್ಲಿರುವ ಮೊಂಡುತನ ಗೊತ್ತಾಯಿತೇ? (2)
9.ಸುಲಭವಾಗಿ ತಲೆಗೆ ಹತ್ತದ ಲೆಕ್ಕಶಾಸ್ತ್ರ (3)
10.ಯಾವುದೇ ಉಪಯೋಗಕ್ಕೆ ಬಾರದವ (5)
11.ದಿವಸದ ಎಂಟನೆ ಒಂದು ಭಾಗದಷ್ಟು ಕಾಲ (2)
12.ನಡುವಣ ಪ್ರದೇಶ (4)
13.ಹೊಸ ಶೈಲಿಯ ಬರಹಗಾರ (4)
14.ಹಿತವಲ್ಲದ್ದು ಇದು (3)



6250ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನವೋನವ 3.ತಲೆಹೋಕ 5.ಕಲಗಚ್ಚು 7.ಪಡಪೋಸಿ 9.ಹುಂಜ 10.ಡಿಕ್ರಿ 11.ಮೆಲುನುಡಿ 14.ಕವಾಡಿಗ 17.ಗಟ್ಟಿಮುಟ್ಟು 18.ಮನಸ್ಸಾಕ್ಷಿ

ಮೇಲಿಂದ ಕೆಳಕ್ಕೆ: 1.ನರ್ತಕ 2.ನಹಗ 3.ತಡಬಡ 4.ಕಗ್ಗಂಟು 6.ಲವಾಜಮೆ 7.ಪಗಡಿ 8.ಸಿಡಿಮಿಡಿ 12.ನುಡಿಗಟ್ಟು 13.ಗಿಡಗ 15.ವಾಮನ 16.ಗವಾಕ್ಷಿ

ಸುಡೊಕು 6635

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		3		2		6		1
	6	2					9	
				3			4	8
	4		3		1		7	
1	3	7				4		5
			4		7		1	
	2		5				3	
6		9				5		4
	5				2		8	

6634 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಬಾಳು ಎಂಬುದಿದು ಋಣದ ರತ್ನದ ಗಣಿ

ನುಡಿ ಬೆಳಗು



ರೇಣುಕಾ ನಿಡಗುಂದಿ

ದೀರ್ಘವಾದ ರೈಲು ಯಾತ್ರೆಯಲ್ಲಿ ಸಿಗುವ ಅನೇಕ ನಿಲ್ದಾಣಗಳಲ್ಲಿ ಜನ ಹತ್ತುವುದು, ಇಳಿಯುವುದು ಇದ್ದೇ ಇರುತ್ತದೆ. ಇತ್ತೀಚೆಗೆ ಬರುವಾಗ ರಾತ್ರಿ ನಾಗ್ಪುರ ಸ್ಟೇಷನ್ನಿನಲ್ಲಿ ಒಬ್ಬರು ಹತ್ತಿದ್ದು ತಿಳಿಯಿತು. ಉತ್ತರ ಭಾರತದ ಹಿಂದಿ ಬೆಲ್ಟ್ ದಾಟಿ ಬೆಳಿಗ್ಗೆ ಕಾಚಿಗುಡ ತಲುಪಿದಾಗ ಇಡ್ಲಿ ತಿನ್ನಲು ಕಾದಿರುತ್ತೇವೆ. ಕಾಚಿಗುಡ ಬರುವುದರಲ್ಲಿತ್ತು. ರಾತ್ರಿ ಹತ್ತಿದ ನಮ್ಮ ಸಹಯಾತ್ರಿಯೊಬ್ಬರು ಕಾಚಿಗುಡದಲ್ಲಿ ಇಳಿಯುವ ತಯಾರಿ ನಡೆಸಿದ್ದರು. ಅವರೊಬ್ಬ ಎಂಜಿನಿಯರ್. ಬೆಳಿಗ್ಗಿನ ಮುಗುಳ್ನಗೆಯೊಂದಿಗೆ ಪರಸ್ಪರ ಪರಿಚಯ, ಮಳೆ ಬೆಳೆ ಇತ್ಯಾದಿ ಮಾತುಕತೆ ಮುಗಿದು ಆತ 'ಇರಿ, ನಿಮಗೆ ಮನೆಯಿಂದ ಇಡ್ಲಿ ತರಿಸುತ್ತೇನೆ' ಎಂದು ಹೇಳಿ ಬೇಡವೆಂದರೂ ಕೇಳದೇ ಪತ್ನಿಗೆ, ಡ್ರೈವರಿಗೆ ಫೋನಾಯಿಸಿಯೇ ಬಿಟ್ಟರು. ಅವರು ಕಾಚಿಗುಡ ಇಳಿಯುವ ಮುನ್ನ ನಮ್ಮ ಕೈಗೆ ಬಿಸಿ ಬಿಸಿ ಇಡ್ಲಿ ಸಾಂಬಾರ್, ವಡೆ ಇತ್ಯಾದಿಗಳ ಕೈಚೀಲವಿತ್ತು.

'ಎನಿತು ಜನ್ಮದಲಿ, ಎನಿತು ಜೀವರಿಗೆ ಎನಿತು ನಾವು ಋಣಿಯೋ?
ತಿಳಿದು ನೋಡಿದರೆ ಬಾಳು ಎಂಬುದಿದು ಋಣದ ರತ್ನದ ಗಣಿಯೋ!'
(ಜಿ.ಎಸ್. ಶಿವರುದ್ರಪ್ಪ)

ಇದ್ಯಾವ ಜನ್ಮದ ಋಣ? ಕೆಲಕ್ಷಣಗಳ ಹಿಂದಷ್ಟೇ ಮಾತಾಡಿದ ವ್ಯಕ್ತಿ ನಮಗೆ ತನ್ನ ಮನೆಯಿಂದ ರುಚಿಯಾದ ತಿಂಡಿ ತರಿಸಿಕೊಟ್ಟಿದ್ದಾನೆ. ಈ ಅನ್ನದ ಋಣವನ್ನು ಹೇಗೆ ತೀರಿಸುವುದು? ಇಂಥವೇ ವಿಚಾರಗಳು ಮನಸ್ಸಿನಲ್ಲಿ ಮಥಿಸುತ್ತಿದ್ದವು. ನಮ್ಮ ಹುಟ್ಟಿನಿಂದ ಸಾಯುವವರೆಗೂ ಈ ರೈಲು ಬೋಗಿಯಂತೆ ಎಷ್ಟೋ ಜನರು ನಮ್ಮ ಬದುಕಿನಲ್ಲಿ ಬರುತ್ತಾರೆ, ಹೋಗುತ್ತಾರೆ. ಒಂದಿಲ್ಲಾ ಒಂದು ಋಣವನ್ನು ತೀರಿಸಿ ಅಥವಾ ಹೊರಿಸಿ ಹೋಗಿರುತ್ತಾರೆ. ಹಾಗೆಯೇ ಆ ಋಣವನ್ನು ಇನ್ಯಾವುದೋ ರೂಪದಲ್ಲಿ ತೀರಿಸಿರುತ್ತೇವೆ. ಸಂಘಜೀವಿಯಾದ ಮನುಷ್ಯನ ಬದುಕು ಒಂದಿಲ್ಲಾ ಒಂದು ಋಣಭಾರದ ಚಕ್ರದಲ್ಲಿ ತಿರುಗುತ್ತಿರುತ್ತದೆ. ತಂದೆ ತಾಯಿ, ಗುರು ಹಿರಿಯರು, ನೆರೆ ಹೊರೆಯವರು, ಸ್ನೇಹಿತರು, ಎಲ್ಲೊ ಒಮ್ಮೆ ಭೇಟಿಯಾದವರು, ಅಪರಿಚಿತರು, ಸುತ್ತಲಿನ ಗಾಳಿ ಬೆಳಕು, ಅನ್ನ ಬೆಳೆಯುವ ರೈತ, ಭೂಮ್ತಾಯಿ ಹೀಗೆ ಎಲ್ಲರ, ಎಲ್ಲದರ ಋಣಭಾರದೊಂದಿಗೆ ಮನುಷ್ಯಜೀವಿ ಬಾಳುತ್ತಾನೆ. ಬದುಕು ಕಟ್ಟಿಕೊಳ್ಳುತ್ತಾನೆ.

ಹೊತ್ತು ಹೆತ್ತು ಬೆಳೆಸಿದ ತಂದೆ ತಾಯಿಗಳನ್ನು ವೃದ್ಧಾಪ್ಯದಲ್ಲಿ ಚೆನ್ನಾಗಿ ನೋಡಿಕೊಳ್ಳುವುದು, ಅವರ ಆಸೆಗಳನ್ನು ಈಡೇರಿಸುವುದು, ಅವರಿಗೆ ಸಮಯ ಕೊಡುವುದು ನಮ್ಮ ಕರ್ತವ್ಯವಾಗಿದೆ. ನನ್ನವ್ವ ತೀರಿಕೊಂಡಾಗ ತಲೆದಿಂಬಿನಡಿ ಕರವಸ್ತ್ರದಲ್ಲಿ ಕಟ್ಟಿಟ್ಟಿದ್ದ ಇಪ್ಪತ್ತು ಸಾವಿರ ರೂಪಾಯಿ ಸಿಕ್ಕಿತು. ಮರಣದಲ್ಲೂ ಯಾರಿಗೂ ತೊಂದರೆಯಾಗಬಾರದು, ಭಾರವಾಗಬಾರದು ಎಂಬ ಕಾಳಜಿ!

ದಿಲ್ಲಿಯಲ್ಲಿ ಉದ್ಯೋಗ ಅರಸುತ್ತಿದ್ದಾಗ ಒಬ್ಬ ಮಲಯಾಳಿ ಗೆಳತಿ ತನ್ನ ಆಫೀಸಿಗೆ ಕರೆದುಕೊಂಡುಹೋಗಿ ನನಗೆ ಅಂದಿನ ಕಾಲದ ಎಲೆಕ್ಟ್ರಾನಿಕ್ ಟೈಪ್‌ರೈಟರ್, ಟೆಲೆಕ್ಸ್, ಫ್ಯಾಕ್ಸ್ ಹೇಗೆ ಬಳಸೋದು ಹೇಳಿಕೊಟ್ಟಿದ್ದಳು.

ಒಂದು ಕ್ಷಣ ಹಿಂತಿರುಗಿ ನೋಡಿದರೆ ನಮ್ಮ ಬದುಕಿಗೆ ಬಂದು ನೆರಳಿನಂತೆ ಕಾಪಾಡಿದವರೆಷ್ಟೋ ಜನ ನೆನಪಾಗಬಹುದು. ಕೇಡು ಮಾಡಿದವರಿಗಿಂತ ಒಳಿತು ಮಾಡಿದವರನ್ನು ನೆನೆಯಬೇಕು. 'ಕೆರೆಯ ನೀರನು ಕೆರೆಗೆ ಚೆಲ್ಲುವಂತೆ' ಈ ಲೋಕದಿಂದ ಗಳಿಸಿದ್ದನ್ನು ಲೋಕಕ್ಕೇ ಸಂದಾಯಮಾಡಬೇಕು. ಪರಿಸರವನ್ನು ಸಂರಕ್ಷಿಸಿ ಪರಿಸರದ ಋಣವನ್ನು ತೀರಿಸಬೇಕು. ಜೊತೆಗೆ ಅತ್ಯಮೂಲ್ಯವಾದ ಈ ಬದುಕನ್ನು ನೀಡಿದ ಆ ದೇವರೆಂಬ ತತ್ವಕ್ಕೂ ಋಣಿಯಾಗಿರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ಡಿಸೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಅಷ್ಟಮಿ ಗಂ. 14-57 ನಕ್ಷತ್ರ: ಉತ್ತರಫಲ್ಗುನಿ ಗಂ. 29-50 ಯೋಗ: ಪ್ರೀತಿ ಗಂ. 11-12 ಕರಣ: ಕೌಲವ ಗಂ. 14-57 ವೃಶ್ಚಿಕ ಮಾಸದ 26 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00 ಸೂರ್ಯೋದಯ : 06-48 ಸೂರ್ಯಾಸ್ತ : 06-01, ಮುಸ್ಲಿಂ ದಿನಾಂಕ : 20 ಜುಮಾದುಸ್ಸಾನಿ ದಿನ ವಿಶೇಷ : ಕಾಲಭೈರವಾಷ್ಟಮಿ ಅದೃಷ್ಟ ಸಂಖ್ಯೆ : 4, 5

ಮೇಷ: ಎಲ್ಲಾ ಕಾರ್ಯಗಳನ್ನು ಸಫಲಗೊಳಿಸಿಕೊಳ್ಳಲು ಪ್ರಯತ್ನಿಸಬೇಕು, ಅದರಿಂದಾಗಿ ಸ್ಪರ್ಧಾತ್ಮಕ ವಾತಾವರಣ ಇರಲಿದೆ. ಸಂಗಾತಿಯ ಜೊತೆ ಖುಷಿಯ ಸಮಯವನ್ನು ಕಳೆಯುವ ಅವಕಾಶ ದೊರೆಯುವುದು.

ವೃಷಭ: ಇದುವರೆಗೆ ನೀವು ಮಾಡಿ ಮುಗಿಸಬೇಕೆಂದು ಆಲೋಚಿಸಿದ್ದ ಮನೆಯ ಕೆಲಸಗಳನ್ನೆಲ್ಲಾ ಪೂರ್ಣಗೊಳಿಸುವಿರಿ. ಈ ದಿನದ ಕಾರ್ಯಗಳನ್ನು ಮೊದಲೇ ನಿಶ್ಚಯಿಸಿಕೊಂಡು ಕ್ರಮ ಪ್ರಕಾರವಾಗಿ ಮಾಡುವುದು ಉತ್ತಮ.

ಮಿಥುನ: ಹಲವು ಅವಕಾಶಗಳು ಸಿಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಕಾರ್ಯ ಸಾಧನೆಗೆ ಅಧಿಕ ತಿರುಗಾಟ, ಗಣ್ಯರ ಭೇಟಿ ಅನಿವಾರ್ಯವಾಗುತ್ತದೆ. ಸಂಬಂಧಿಗಳ ಆಗಮನ ಹರ್ಷ ಉಂಟುಮಾಡುತ್ತದೆ.

ಕರ್ಕಾಟಕ: ಆತ್ಮಗೌರವದ ರಕ್ಷಣೆಯ ದೃಷ್ಟಿಯಿಂದ ಸಂದರ್ಭಗಳೊಡನೆ ರಾಜಿಮಾಡಿಕೊಳ್ಳುವುದು ಸೂಕ್ತ. ಹಿರಿಯರ ಆರೋಗ್ಯದ ಬಗ್ಗೆ ಯೋಚನೆ ಮಾಡಲೇಬೇಕಾಗುತ್ತದೆ. ಶೀತಬಾಧೆ ಉಂಟಾಗುವುದು.

ಸಿಂಹ: ಹಲವು ಪ್ರಯತ್ನದ ನಂತರ ಪ್ರವಾಸದ ಯೋಜನೆಯು ಕಾರ್ಯರೂಪಕ್ಕೆ ಬರಲಿದೆ. ಮನೋಬಲದಿಂದ ಕಾರ್ಯ ಸಾಧಿಸಿಕೊಳ್ಳುವಿರಿ. ದೈವಾನುಗ್ರಹದಿಂದ ನೀವು ಮಾಡುವ ಕೆಲಸದಲ್ಲಿ ಒಳ್ಳೆಯ ಲಾಭವನ್ನು ಪಡೆಯುವಿರಿ.

ಕನ್ಯಾ: ಆಯಾ ಋತುವಿನಲ್ಲಿ ಸಿಗುವಂತಹ ಆಹಾರ ಪದಾರ್ಥಗಳನ್ನು ಸಿದ್ಧಪಡಿಸಿ ಮಾರಾಟ ಮಾಡುವವರು ದೊಡ್ಡ ಮಟ್ಟದಲ್ಲಿ ಸ್ವಉದ್ಯೋಗವನ್ನು ಆರಂಭ ಮಾಡಬಹುದು. ಅಪರೂಪದ ಸಮಾರಂಭಕ್ಕೆ ಶುಭಾಹ್ವಾನ ಬರಲಿದೆ.

ತುಲಾ: ನಿಮ್ಮ ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆ ಹಾಕುವುದರಿಂದ ಅಡೆತಡೆಗಳು ನಿವಾರಣೆಯಾಗಲಿವೆ. ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆ ಮತ್ತು ಸಾಧನೆಗೆ ಪುರಸ್ಕಾರಗಳು ದೊರಕಲಿವೆ.

ವೃಶ್ಚಿಕ: ಮೇಲಧಿಕಾರಿಗಳ ಒತ್ತಡದಿಂದ ಕೆಲಸದಲ್ಲಿ ಆಯಾಸವೆನಿಸಿದಾದರೂ ಅಧಿಕಾರಿಗಳ ಮನ ಗೆಲ್ಲುವಂತಾಗುತ್ತದೆ. ಖಾದ್ಯ ತೈಲಗಳ ಮಾರಾಟಗಾರರಿಗೆ ಲಾಭವಾಗುವುದು. ಸ್ವಉದ್ಯೋಗಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿರುವುದು.

ಧನು: ಹಲವಾರು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸುವಂತಾಗುವುದು. ಆರ್ಥಿಕ ವೃದ್ಧಿ, ಆರೋಗ್ಯ ವೃದ್ಧಿ, ಆಕಸ್ಮಿಕ ಧನ ಪ್ರಾಪ್ತಿ ಯೋಗವಿದೆ.

ಮಕರ: ನ್ಯಾಯಾಲಯದಲ್ಲಿನ ವ್ಯಾಜ್ಯಗಳ ಬಗ್ಗೆ ಒಂದು ಅಂತಿಮವಾದ ನಿರ್ಧಾರವನ್ನು ತೆಗೆದುಕೊಳ್ಳಲು ವಕೀಲರ ಬಳಿ ವೈಯಕ್ತಿಕವಾಗಿ ಮಾತನಾಡಬೇಕಾಗುವುದು. ಸಹಚರರಲ್ಲಿ ವೃಥಾ ವೈರತ್ವ ಕಟ್ಟಿಕೊಳ್ಳದೆ ಕಾರ್ಯನಿರ್ವಹಿಸಿ.

ಕುಂಭ: ನಿಮ್ಮ ಸೌಭಾಗ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ವ್ರತಗಳನ್ನು ಮಾಡುವ ನಿರ್ಧಾರ ತೆಗೆದುಕೊಳ್ಳುವಿರಿ. ಮೇಲಧಿಕಾರಿಗಳು ನಿಮ್ಮ ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯ ನಿರ್ವಹಿಸಲು ಅಶಕ್ತರಾಗುವ ಸಂಭವವಿದೆ.

ಮೀನ: ಉದ್ಯೋಗ ಬದಲಾವಣೆ ಮಾಡುವ ಯೋಚನೆಯು ಸರಿಯಲ್ಲ, ಇದೇ ಉದ್ಯೋಗದಲ್ಲಿ ವರಮಾನ ಹೆಚ್ಚಿಸಿಕೊಳ್ಳುವ ದಾರಿ ಹುಡುಕಿ. ವಾತಾವರಣದಲ್ಲಾಗುವ ಬದಲಾವಣೆಯು ದೇಹದ ಮೇಲೆ ಪ್ರಭಾವ ಬೀರಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,758
ಇಂದಿನ ಅಂತ್ಯ: 25,898
ದಿನದ ಗರಿಷ್ಠ: 25,922
140

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹675
12 ಕ್ಕೆ ₹96
ಮೈಸೂರು: 100 ಕ್ಕೆ ₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹180
ಆರ್‌ಎಸ್‌ಎಸ್-5 ₹175
ಗುಡ್ ಲಾಟ್ ₹163

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಕೆ.ಜಿ) ₹299-743
ದ್ವಿತಳಿ (ಕೆ.ಜಿ.) ₹312-872

ಮುದ್ರಮನೆ ಕಾಫಿ
ಎಪಿ ₹28500
ಎಸಿ ₹15540
ಆರ್‌ಪಿ ₹18900
ಆರ್‌ಸಿ ₹10325

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಳೆಯ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1515 (1515)
ಎಳ್ಳು (ರಿಫೈನ್ಡ್) ₹1280 (1275)
ಸೂರ್ಯಕಾಂತಿ (ರಿಫೈನ್ಡ್) ₹1490 (1485)
ವನಸ್ಪತಿ ₹1250 (1240)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1400-2600
ಮಧ್ಯಮ ₹800-1400
ಸಣ್ಣ ₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹28000-28000
ತಿಪಟೂರು ₹27055-28500

‘ಭಾರತದ ಎಐಗೆ ಹೊಸ ಮುನ್ನುಡಿ’

ಕಾಗ್ನಿಜೆಂಟ್, ಇನ್ಫೊಸಿಸ್, ಟಿಸಿಎಸ್, ವಿಪ್ರೊ ಜತೆಗೆ ಮೈಕ್ರೊಸಾಫ್ಟ್ ಪಾಲುದಾರಿಕೆ


ಸತ್ಯ ನಾದೆಲ್ಲಾ

ಬೆಂಗಳೂರು (ಪಿಟಿಐ): ಏಷ್ಯಾದಲ್ಲೇ ಅತಿ ದೊಡ್ಡ ಹೂಡಿಕೆಯಾದ 17.5 ಶತಕೋಟಿ ಡಾಲರ್ (₹1.57 ಲಕ್ಷ ಕೋಟಿ) ಮೂಲಕ, ಭಾರತದ ಕೃತಕ ಬುದ್ಧಿಮತ್ತೆ (ಎ.ಐ) ಕ್ಷೇತ್ರದ ಮೂಲ ಸೌಕರ್ಯ ಅಭಿವೃದ್ಧಿಗೆ ಮೈಕ್ರೊಸಾಫ್ಟ್‌ನ ಬದ್ಧತೆ ಮತ್ತಷ್ಟು ಬಲಗೊಂಡಿದೆ’ ಎಂದು ಕಂಪನಿಯ ಅಧ್ಯಕ್ಷ ಮತ್ತು ಸಿಇಒ ಸತ್ಯ ನಾದೆಲ್ಲಾ ಹೇಳಿದರು.

ಇಲ್ಲಿ ನಡೆದ ಮೈಕ್ರೊಸಾಫ್ಟ್‌ನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಎ.ಐ ಆಧಾರಿತ ಕ್ಷೇತ್ರದಲ್ಲಿ ಲಕ್ಷಾಂತರ ಜನರಿಗೆ ಕೌಶಲ ತರಬೇತಿ ನೀಡುವ ಮೂಲಕ ಮೈಕ್ರೊಸಾಫ್ಟ್, ಭಾರತದ ಕ್ಲೌಡ್ ಕಂಪ್ಯೂಟಿಂಗ್ ಕ್ಷೇತ್ರದಲ್ಲೂ ಹೊಸ ಹೆಜ್ಜೆಗುರುತುಗಳನ್ನು ಮೂಡಿಸಲಿದೆ’ ಎಂದರು.

‘ಭಾರತದಲ್ಲಿ ಸ್ವಾಯತ್ತ ಎಐ ವ್ಯವಸ್ಥೆ ‘ಏಜೆಂಟ್- ಎಐ’ ಜಾರಿಯ ವೇಗವನ್ನು ಹೆಚ್ಚಿಸಲು ಮಾಹಿತಿ ತಂತ್ರಜ್ಞಾನ ವಲಯದ ಪ್ರಮುಖ ನಾಲ್ಕು ಕಂಪನಿಗಳಾದ ಕಾಗ್ನಿಜೆಂಟ್, ಇನ್ಫೊಸಿಸ್, ಟಿಸಿಎಸ್ ಮತ್ತು ವಿಪ್ರೊ ಜತೆಗೆ ಮಹತ್ವದ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ. ಎಐ ಮಾರುಕಟ್ಟೆ ವಿಸ್ತರಣೆಗಾಗಿ ಪ್ರತಿ ಕಂಪನಿಯು ತಲಾ 50 ಸಾವಿರ ಮೈಕ್ರೊಸಾಫ್ಟ್ ಕೋಪೈಲಟ್ ಪರವಾನಗಿ ನಿಯೋಜನೆ ಮಾಡಿಕೊಳ್ಳಲಿವೆ. ಈ ಪಾಲುದಾರಿಕೆಯಿಂದ ಕಂಪನಿಗಳ ಉತ್ಪಾದನಾ ಸಾಮರ್ಥ್ಯ, ದಕ್ಷತೆ ಹೆಚ್ಚಲಿದೆ’ ಎಂದರು.

‘ಮೈಕ್ರೊಸಾಫ್ಟ್‌ನ ಕ್ಲೌಡ್ ಕಂಪ್ಯೂಟಿಂಗ್ ವೇದಿಕೆಯಾದ ‘ಅಜೂರ್’ ಅನ್ನು ನಾವು ಜಗತ್ತಿನ ಕಂಪ್ಯೂಟರ್ ಆಗಿ ಬದಲಾಯಿಸುತ್ತೇವೆ. ಕ್ಲೌಡ್ ಸೇವೆಗಳಿಗಾಗಿ ಭಾರತವೂ ಸೇರಿದಂತೆ ಪ್ರಪಂಚದಾದ್ಯಂತ 70 ಡೇಟಾ ಕೇಂದ್ರಗಳು ನಿರ್ಮಾಣವಾಗಲಿವೆ. ಸದ್ಯ ನಾವು, ದಕ್ಷಿಣ, ಪಶ್ಚಿಮ ಮತ್ತು ಮಧ್ಯ ಭಾರತದಲ್ಲಿ ಮಾರುಕಟ್ಟೆ ಹೊಂದಿದ್ದು, ಶೀಘ್ರದಲ್ಲೇ ರಿಲಯನ್ಸ್ ಜಿಯೊ ಜತೆಗೂ ಪಾಲುದಾರಿಕೆ ಘೋಷಿಸಲಿದ್ದೇವೆ. ಭಾರತದಲ್ಲಿ ನಿರ್ಮಾಣಗೊಳ್ಳಲಿರುವ ಹೊಸ ಡೇಟಾ ಕೇಂದ್ರವು 2026ರಲ್ಲಿ ಕಾರ್ಯಾರಂಭವಾಗಲಿದೆ’ ಎಂದರು.

ಇ-ಶ್ರಮ: ಭಾರತದಲ್ಲಿ 20 ಲಕ್ಷಕ್ಕೂ ಹೆಚ್ಚು ಜನರಿಗೆ ಎಐ ಆಧಾರಿತ ಕೌಶಲ ತರಬೇತಿ ನೀಡಲಾಗುವುದು. ಅಸಂಘಟಿತ ವಲಯದ ಕಾರ್ಮಿಕರನ್ನು ಎಐ ಮೂಲಕ ಹೇಗೆ ಮೇಲೆತ್ತಬಹುದು ಎನ್ನುವುದಕ್ಕೆ ಸರ್ಕಾರದ ‘ಇ-ಶ್ರಮ’ ಕಾರ್ಯಕ್ರಮ ಉತ್ತಮ ಉದಾಹರಣೆ ಎಂದು ಹೇಳಿದರು.

‘ಡಿಜಿಟಲ್ ಸಾರ್ವಭೌಮತ್ವ ಮುಖ್ಯ’

ಎಐ ಬಳಕೆ ಹೆಚ್ಚಿದಂತೆ ರಾಷ್ಟ್ರಗಳು ತಮ್ಮ ಡೇಟಾ ಮೇಲೆ ಸಂಪೂರ್ಣ ನಿಯಂತ್ರಣ ಮತ್ತು ಬಲವಾದ ಸೈಬರ್ ಸುರಕ್ಷತೆ ಖಾತರಿಪಡಿಸಿಕೊಳ್ಳುವುದು (ಡಿಜಿಟಲ್ ಸಾರ್ವಭೌಮತ್ವ) ಬಹು ಮುಖ್ಯವಾಗಿದೆ. ‘ಅಜೂರ್’ ಇದನ್ನು ಬೆಂಬಲಿಸಲಿದೆ. 2030ರ ವೇಳೆಗೆ ಭಾರತವು ವೆಬ್ ಆಧಾರಿತ ವೇದಿಕೆ ‘ಗಿಟ್‌ಹಬ್’ ಮೂಲಕ ವಿಶ್ವದ ನಂ.1 ಸಮುದಾಯವಾಗಲಿದೆ ಎಂದು ನಾದೆಲ್ಲಾ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಆಮದು ಸುಂಕ ಹೆಚ್ಚಿಸಿದ ಮೆಕ್ಸಿಕೊ

ಮೆಕ್ಸಿಕೊ: ಭಾರತ, ಚೀನಾ ಸೇರಿದಂತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳದ ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇಕಡ 50ರಷ್ಟು ಆಮದು ಸುಂಕ ವಿಧಿಸಲು ಮೆಕ್ಸಿಕೊ ಸೆನೆಟ್ ಒಪ್ಪಿಗೆ ನೀಡಿದೆ.

ಹೊಸ ತೆರಿಗೆ ದರವು 2026ರ ಜನವರಿಯಿಂದ ಜಾರಿಗೆ ಬರಲಿದೆ. ಕಾರು, ಆಟೊ, ವಾಹನಗಳ ಬಿಡಿಭಾಗಗಳು, ಜವಳಿ, ಪ್ಲಾಸ್ಟಿಕ್, ಪಾದರಕ್ಷೆ, ಉಕ್ಕು ಸೇರಿದಂತೆ 1,400ಕ್ಕೂ ಹೆಚ್ಚು ಸರಕುಗಳಿಗೆ ಪರಿಷ್ಕೃತ ಸುಂಕ ಅನ್ವಯಿಸಲಿದೆ. ಕೆಲವು ಸರಕುಗಳಿಗೆ ಶೇ 35ರಷ್ಟು ಆಮದು ಸುಂಕ ಪಾವತಿಸಬೇಕಾಗುತ್ತದೆ.

ಚೀನಾ, ಭಾರತ, ದಕ್ಷಿಣ ಕೊರಿಯಾ, ಥಾಯ್ಲೆಂಡ್ ಮತ್ತು ಇಂಡೋನೇಷ್ಯಾ ದೇಶಗಳು ಮೆಕ್ಸಿಕೊ ಜತೆಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿಲ್ಲ. ಈ ದೇಶಗಳ ರಫ್ತಿನ ಮೇಲೆ ಸುಂಕ ಹೇರಿಕೆಯು ನಕಾರಾತ್ಮಕ ಪರಿಣಾಮ ಬೀರಲಿದೆ. ಚೀನಾಕ್ಕೆ ಇದು ಹೆಚ್ಚಿನ ಹೊಡೆತ ನೀಡಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಬುಧವಾರ ಸಂಜೆ ಮೆಕ್ಸಿಕೊ ಸೆನೆಟ್ ಆಮದು ಸುಂಕ ಹೆಚ್ಚಳದ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ. ಆಡಳಿತಾರೂಢ ಮೊರೆನಾ ಪಕ್ಷದ ಅಧ್ಯಕ್ಷೆ ಕ್ಲಾಡಿಯಾ ಶೀನ್‌ಬಾಮ್ ಅವರು ತೆರಿಗೆ ಹೆಚ್ಚಳದ ಪ್ರಸ್ತಾವ ಸಲ್ಲಿಸಿದ್ದರು. ದೇಶೀಯ ಉತ್ಪಾದನೆಯನ್ನು ಹೆಚ್ಚಿಸಲು ಇದು ಅನಿವಾರ್ಯವಾಗಿತ್ತು ಎಂದು ಹೇಳಿದ್ದಾರೆ. ತೆರಿಗೆ ಹೆಚ್ಚಳದ ಪರವಾಗಿ 76 ಸದಸ್ಯರು ಮತ ಚಲಾಯಿಸಿದರೆ, ಐದು ಮಂದಿ ಇದಕ್ಕೆ ವಿರುದ್ಧವಾಗಿ ಮತ ಚಲಾಯಿಸಿದರು. 35 ಸದಸ್ಯರು ಗೈರಾಗಿದ್ದರು.

ತೆರಿಗೆ ಹೆಚ್ಚಳಕ್ಕೆ ಟ್ರಂಪ್ ಕಾರಣ: ‘ಮೆಕ್ಸಿಕೊದ ಪ್ರಮುಖ ವ್ಯಾಪಾರ ಪಾಲುದಾರ ದೇಶವಾಗಿರುವ ಅಮೆರಿಕ ಜತೆಗೆ ನಡೆಯುತ್ತಿರುವ ಮಾತುಕತೆಯೇ ಆಮದು ಸುಂಕ ಹೆಚ್ಚಳಕ್ಕೆ ಕಾರಣ’ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಚೀನಾವು ಅಮೆರಿಕದ ಮಾರುಕಟ್ಟೆ ಪ್ರವೇಶಿಸಲು ಮೆಕ್ಸಿಕೊವನ್ನು ಹಿಂಬಾಗಿಲಾಗಿ ಬಳಸಿಕೊಳ್ಳುತ್ತಿದೆ ಎಂಬ ಆರೋಪ ಇದೆ. ಇದಕ್ಕೆ ಪ್ರತಿಯಾಗಿ ಅಮೆರಿಕವು ಮೆಕ್ಸಿಕೊದ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವ ಎಚ್ಚರಿಕೆ ನೀಡಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಅಧ್ಯಕ್ಷೆ ಕ್ಲಾಡಿಯಾ ಶೀನ್‌ಬಾಮ್ ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ.

ಮೋದಿ – ಟ್ರಂಪ್ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜತೆ ಗುರುವಾರ ದೂರವಾಣಿ ಸಂಭಾಷಣೆ ನಡೆಸಿದರು.

ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಎರಡೂ ದೇಶಗಳು ಮಾತುಕತೆಯಲ್ಲಿ ನಿರತವಾಗಿರುವ ಸಮಯದಲ್ಲೇ ಈ ಬೆಳವಣಿಗೆ ನಡೆದಿದೆ.

ವ್ಯಾಪಾರ, ತಂತ್ರಜ್ಞಾನ, ಇಂಧನ, ರಕ್ಷಣೆ ಮತ್ತು ಭದ್ರತಾ ಕ್ಷೇತ್ರದಲ್ಲಿನ ಸಹಕಾರವನ್ನು ವಿಸ್ತರಿಸುವ ಕುರಿತು ಉಭಯ ನಾಯಕರು ಅಭಿಪ್ರಾಯ ವಿನಿಮಯ ಮಾಡಿಕೊಂಡರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ- ಅಮೆರಿಕ ನಡುವಿನ ಸಮಗ್ರ ಜಾಗತಿಕ ಕಾರ್ಯತಂತ್ರ ಪಾಲುದಾರಿಕೆಯಲ್ಲಿನ ಪ್ರಗತಿಯ ಬಗ್ಗೆ ಇಬ್ಬರೂ ಚರ್ಚಿಸಿದರು. ಉಭಯ ದೇಶಗಳ ನಡುವೆ ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವು ಸ್ಥಿರವಾಗಿ ಬಲಗೊಳ್ಳುತ್ತಿರುವುದಕ್ಕೆ ತೃಪ್ತಿ ವ್ಯಕ್ತಪಡಿಸಿದರು ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ					
ಆಪಿ	54419-54829	ಚಾಲಿ	33500-42719		
ಬೆಟ್ಟೆ	36649-37099	ಕೋಕ	10600-36399	ಬಿಳಿಗೋಟು	26709-37808
ಕೆಂಪುಗೋಟು	30609-31010	ಕೆಂಪುಗೋಟು	30199-41399	ಚಾಲಿ	43099-48500
ರಾಶಿ	53939-54369	ರಾಶಿ	42009-60610	ಕೆಂಪುಗೋಟು	21699-32169
ಕುಮಟಾ		ಸಿಪ್ಪೆಗೋಟು	8989-23600	ರಾಶಿ	52799-58398
ಚಾಲಿ	35100-47019	**ಸಿದ್ದಾಪುರ**		**ಯಲ್ಲಾಪುರ**	
ಚಿಪ್ಪು	12630-35371	ಬಿಳಿಗೋಟು	26889-35699	ಆಪಿ	63369-69775
ಕೋಕ	11100-29270	ಚಾಲಿ	41699-47899	ಬಿಳಿಗೋಟು	14329-34719
ಹೊಸಚಾಲಿ	23610-36389	ಕೋಕ	20889-26669	ಕೋಕ	8612-27502
ಪುತ್ತೂರು		ಕೆಂಪುಗೋಟು	30119-30819	ಹಳೆಚಾಲಿ	31899-48199
ಕೋಕ	20000-35000	ರಾಶಿ	46699-57599	ಹೊಸಚಾಲಿ	34089-38723
ಹೊಸತು	26000-41000	ತಟ್ಟಿಬೆಟ್ಟೆ	24019-32089	ಕೆಂಪುಗೋಟು	12699-36899
ಸಾಗರ		**ಶಿರಸಿ**		ರಾಶಿ	47477-65199
ಬಿಳಿಗೋಟು	13269-35166	ಬೆಟ್ಟೆ	40699-51099	ತಟ್ಟಿಬೆಟ್ಟೆ	32989-52415

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE

Our beloved mother
JAYALAKSHMI
(wife of Late Malur Lakshamana Reddy)
passed away peacefully on 11th Dec 2025. She lived with grace, strength, and unwavering resilience till the end. Her warmth and wisdom touched everyone who knew her.
Visitation – She will be at her residence No. 30, 11th Main, 14th Cross, Wilson Garden, Bangalore until 9:00 AM tomorrow, 12th December-2025
Last Rites: Performed in Malur in the afternoon.
Gopi, Hemanth, Vani and her entire family
Mobile : 96328-52533, 94827-29093

ಭಾವಪೂರ್ಣ ಶ್ರದ್ಧಾಂಜಲಿ

ಬಿ.ಪಿ. ಅನುರಾಧಾ
ಇವರು ದಿನಾಂಕ: 10.12.2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ: 13.12.2025ರಂದು ಜೋಡಿ ತಿಮ್ಮಸಂದ್ರದಲ್ಲಿ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು.
ದುಃಖತಪ್ತರು
ಪತಿ, ಮಗ, ಸಹೋದರ, ಸಹೋದರಿಯರು ಮತ್ತು ಕುಟುಂಬಸ್ಥರು
Mob: 9945133933

ಉತ್ತರಕ್ರಿಯಾದಿ ಆಹ್ವಾನ ಪತ್ರಿಕೆ



ವೆಂಕಟರಮಣಗೌಡರು
ದಿನಾಂಕ: 03.12.2025ರ ರಾತ್ರಿ 9:26ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವನ್ನು ದಿನಾಂಕ: 13.12.2025, ಶನಿವಾರದಂದು ಬೆಳಿಗ್ಗೆ 9:00ಕ್ಕೆ ಪುಣ್ಯಾಹ ಹಾಗೂ 11:00ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಭೋಜನ: ಮಧ್ಯಾಹ್ನ : 12:00ಕ್ಕೆ
ವಿಳಾಸ: #211, 1st Main, 5th Cross, Domlur Layout, Bengaluru-560071
ಇಂತಿ: ವಿ. ಜಯಪ್ರಕಾಶ್ ಮತ್ತು ಕುಟುಂಬದ ಸದಸ್ಯರು

ಎಣ್ಣೆ ಪ್ಯಾಕೆಟ್ ಪರಿಶೀಲನೆ ಅಭಿಯಾನ

ಫ್ರೀಡಂ ಸನ್‌ಫ್ಲವರ್‌ನ ಅಭಿಯಾನಕ್ಕೆ ದ್ರಾವಿಡ್ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾದ್ಯ ತೈಲದ ಪ್ಯಾಕೆಟ್‌ಗಳಲ್ಲಿ ನಿಗದಿತ ಪ್ರಮಾಣದ ಎಣ್ಣೆ ಇದೆಯೇ’ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಫ್ರೀಡಂ ಸನ್‌ಫ್ಲವರ್ ಆಯಿಲ್ ಹಮ್ಮಿಕೊಂಡಿರುವ ‘ಪ್ಯಾಕ್ ರಿವ್ಯೂ ಸಿಸ್ಟಮ್’ ಜಾಗೃತಿ ಅಭಿಯಾನಕ್ಕೆ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಚಾಲನೆ ನೀಡಿದರು.

ಫ್ರೀಡಂ ಸನ್‌ಫ್ಲವರ್ ಆಯಿಲ್ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಣ್ಣೆ ಪ್ಯಾಕಿಂಗ್ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

‘ಗ್ರಾಹಕ ವ್ಯವಹಾರಗಳ ಸಚಿವಾಲಯದ ಮಾನದಂಡಗಳ ಪ್ರಕಾರ 1 ಲೀಟರ್ ಪ್ಯಾಕೆಟ್‌ನಲ್ಲಿ ಕನಿಷ್ಠ 910 ಗ್ರಾಂ ಖಾದ್ಯ ತೈಲ ಇರಲೇಬೇಕು. ಆದರೆ, ಕೆಲವು ಉತ್ಪಾದಕರು 1 ಲೀಟರ್ ಪ್ಯಾಕೆಟ್‌ನಂತೆ ಕಾಣುವ ಪ್ಯಾಕ್‌ಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಎಣ್ಣೆಯನ್ನು ತುಂಬಿ, ಮಾರಾಟ ಮಾಡುತ್ತಿದ್ದಾರೆ. ಇದರ ವಿರುದ್ಧ ಜಾಗೃತಿ ಮೂಡಿಸುವುದು ಅಭಿಯಾನದ ಮುಖ್ಯ ಉದ್ದೇಶ’ ಎಂದು ಫ್ರೀಡಂ ಸನ್‌ಫ್ಲವರ್ ಆಯಿಲ್‌ನ ತಯಾರಕರಾದ ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್‌ನ ಪ್ರತಿನಿಧಿಗಳು ತಿಳಿಸಿದರು.

‘ಗ್ರಾಹಕರು ದಾರಿ ತಪ್ಪುವುದನ್ನು ತಡೆಯಲು ಅವರೇ ‘ಥರ್ಡ್ ಅಂಪೈರ್’ ಆಗಿ ಕಾರ್ಯನಿರ್ವಹಿಸಬೇಕು. ಕಂಪನಿಯ ಲೇಬಲ್, ಪ್ರಮಾಣವನ್ನು ಪರಿಶೀಲಿಸಿಕೊಳ್ಳಬೇಕು’ ಎಂದು ರಾಹುಲ್ ದ್ರಾವಿಡ್ ಹೇಳಿದರು.

ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್‌ನ ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ, ‘ಹಣಕ್ಕೆ ತಕ್ಕ ಮೌಲ್ಯದ ಉತ್ಪನ್ನ ಪಡೆಯುವ ವಿಶ್ವಾಸ ಮೂಡಿಸುವುದು ನಮ್ಮ ಗುರಿ. ಲೇಬಲ್ ಓದುವ ಮತ್ತು ತೂಕವನ್ನು ಪರಿಶೀಲಿಸುವ ಮೂಲಕ ಗ್ರಾಹಕರು ತಮ್ಮ ಖರೀದಿಯನ್ನು ಖಚಿತಪಡಿಸಿಕೊಳ್ಳಬೇಕು’ ಎಂದರು.

‘ಪ್ಯಾಕ್ ರಿವ್ಯೂ ಸಿಸ್ಟಮ್’ ಜಾಗೃತಿ ಅಭಿಯಾನಕ್ಕೆ ರಾಹುಲ್ ದ್ರಾವಿಡ್ ಚಾಲನೆ ನೀಡಿದರು. ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್ಸ್‌ನ ಮಾರುಕಟ್ಟೆ ಮುಖ್ಯಸ್ಥ ಚೇತನ್ ಪಿಂಪಲ್ಕುಟೆ ಹಾಗೂ ಪಿ. ಚಂದ್ರಶೇಖರ ರೆಡ್ಡಿ ಉಪಸ್ಥಿತರಿದ್ದರು

ರೂಪಾಯಿ ಮೌಲ್ಯ 38 ಪೈಸೆ ಇಳಿಕೆ

ಮುಂಬೈ/ ನವದೆಹಲಿ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರದ ವಹಿವಾಟಿನಲ್ಲಿ 38 ಪೈಸೆಯಷ್ಟು ಕುಸಿದಿದೆ.

ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹90.32ಕ್ಕೆ ಇಳಿದಿದೆ. ಇದು ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ.

ಭಾರತ ಮತ್ತು ಅಮೆರಿಕದ ವ್ಯಾಪಾರ ಒಪ್ಪಂದವು ವಿಳಂಬವಾಗುತ್ತಿರುವುದು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಇದು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆನ್ಸೆಕ್ಸ್ , ನಿಫ್ಟಿ ಏರಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 426 ಅಂಶ ಏರಿಕೆಯಾಗಿ, 84,818ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 140 ಅಂಶ ಹೆಚ್ಚಳವಾಗಿ, 25,898ಕ್ಕೆ ಅಂತ್ಯಗೊಂಡಿದೆ.

ಬೆಳ್ಳಿ ₹2,400 ಏರಿಕೆ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರದ ವಹಿವಾಟಿನಲ್ಲಿ ಬೆಳ್ಳಿ ಧಾರಣೆ ಕೆ.ಜಿಗೆ ₹2,400 ಹೆಚ್ಚಳವಾಗಿ, ₹1,94,400ರಂತೆ ಮಾರಾಟವಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಫಜಲಪೂರ
ತಾ: ಅಫಜಲಪೂರ, ಜಿ: ಕಲಬುರಗಿ. E-mail : apmcafzalpur@gmail.com, Office Ph : 08470-283050

ಸಂ:ಕೃಮಾಇ/ಕೃಉಮಾಸ/ಅ/406/2025-26 ದಿನಾಂಕ: 08-12-2025

-: ಸಂಕ್ಷಿಪ್ತ ಟೆಂಡರ್ ಪ್ರಕಟಣೆ :-

ಸಮಿತಿಯ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಈ ಕೆಳಕಂಡ ಕಾಮಗಾರಿಯ ಟೆಂಡರ್‌ನ್ನು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-3 ರನ್ವಯ **https://kppp.karnataka.gov.in** ರ ಮೂಲಕ ಆಹ್ವಾನಿಸಲಾಗಿದೆ.

1) ಬಿಡ್ ಪೂರ್ವಭಾವಿ ಸಭೆ/ಸ್ಪಷ್ಟೀಕರಣ ದಿನಾಂಕ : **20-12-2025 ಬೆಳಿಗ್ಗೆ 11:00 ಗಂಟೆಗೆ,** 2) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **29-12-2025 ಸಾಯಂಕಾಲ 04:00 ಗಂಟೆಗೆ,** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **31-12-2025 ಬೆಳಿಗ್ಗೆ 11:00 ಗಂಟೆಗೆ,** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **02-01-2026 ಬೆಳಿಗ್ಗೆ 11:00 ಗಂಟೆಗೆ,** 05) ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ಸ್ಥಳ : **ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಛೇರಿ, ಅಫಜಲಪೂರ**

ಕಾಮಗಾರಿಯ ಹೆಸರು: **2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಅಫಜಲಪೂರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನ ಸಂ: 14A ರಿಂದ ನಿವೇಶನ ಸಂ: 13 ಮಧ್ಯ ಇರುವ ಜಾಗದಲ್ಲಿ ಮುಚ್ಚು ಹರಾಜು ಕಟ್ಟೆ ನಿರ್ಮಾಣ ಕಾಮಗಾರಿ.** 2) ಟೆಂಡರ್‌ಗಿಟ್ಟ ಮೊತ್ತ: **ರೂ. 94,01,652** GST ಹೊರತುಪಡಿಸಿ, 3) ಮುಂಗಡ ಠೇವಣಿ (ಇಎಂಡಿ) ರೂ. ಗಳಲ್ಲಿ : **ರೂ. 1,88,000,** 4) ಖಾಲಿ ಟೆಂಡರ್ ಫಾರ್ಮ ಬೆಲೆ (ತೆರಿಗೆ ಪ್ರತ್ಯೇಕ): ಇ-ಪೋರ್ಟಲ್‌ರಲ್ಲಿರುವಂತೆ, 5) ಕಾಮಗಾರಿಯ ಅವಧಿ : **165 ದಿನಗಳು (ಮಳೆಗಾಲ ಹೊರತುಪಡಿಸಿ).**

ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಫಜಲಪೂರ.
ಸಹಿ/- ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಫಜಲಪೂರ.

ವಾ.ಸಾ.ಸಂ.ಇ/ಕಲಬುರಗಿ/840/ಕೆ.ಎಸ್.ಎಂ.ಸಿ.&ಎ/2025-26

‘ಹೆಚ್ಚುವರಿ ಪರಿಹಾರವಾಗಿ ₹10 ಸಾವಿರದ ವೋಚರ್’

ಒಂದನೇ ಪುಟದಿಂದ...

‘ವಿಮಾನ ಹಾರಾಟ ಆರಂಭಕ್ಕೆ ನಿಗದಿಯಾಗಿದ್ದ ಸಮಯದ 24 ಗಂಟೆಗಳ ಒಳಗೆ ವಿಮಾನ ಹಾರಾಟವನ್ನು ರದ್ದು ಮಾಡಿದ್ದರೆ ಮತ್ತು ವಿಮಾನ ಟೇಕ್ ಆಫ್ ಆಗಿ ಲ್ಯಾಂಡಿಂಗ್ ಆಗುವವರೆಗಿನ ಸಮಯದ ಆಧಾರದಲ್ಲಿ ಪ್ರತಿ ಪ್ರಯಾಣಿಕನಿಗೂ ₹5 ಸಾವಿರದಿಂದ ₹10 ಸಾವಿರವನ್ನು ಇಂಡಿಗೊ ನೀಡುತ್ತಿದೆ. ಇದನ್ನು ಸರ್ಕಾರದ ಮಾರ್ಗಸೂಚಿಯ ಆಧಾರದಲ್ಲೇ ನೀಡಲಾಗುತ್ತಿದೆ. ಇದಕ್ಕೂ ಹೆಚ್ಚಿನ ಪರಿಹಾರ ರೂಪವಾಗಿ ವೋಚರ್ ನೀಡಲಾಗುತ್ತಿದೆ’ ಎಂದಿದೆ.

ಮೇಲ್ವಿಚಾರಣೆ ತಂಡ ನಿಯೋಜನೆ: ಇಂಡಿಗೊದ ಕಾರ್ಯವೈಖರಿಯ ಮೇಲೆ ನಿಗಾ ಇರಿಸಲು ಡಿಜಿಸಿಎ ತಂಡವೊಂದನ್ನು ನಿಯೋಜಿಸಲು ನಿರ್ಧರಿಸಿದೆ. ಈ ತಂಡವು ಗುರುಗ್ರಾಮದ ಇಂಡಿಗೊ ಕೇಂದ್ರ ಕಚೇರಿಯಲ್ಲಿಯೇ ಕಾರ್ಯನಿರ್ವಹಿಸಲಿದೆ. ವಿಮಾನಗಳ ಹಾರಾಟ ರದ್ದತಿ, ವಿಮಾನ ಸಿಬ್ಬಂದಿ ನಿಯೋಜನೆ, ಯೋಜನೆಯೇ ಇಲ್ಲದೆ ರಜೆ ಹಾಕುವುದು, ಸಿಬ್ಬಂದಿ ಕೊರತೆಯಿಂದ ಯಾವ ಮಾರ್ಗದಲ್ಲಿ ತೊಂದರೆಯಾಗುತ್ತಿದೆ, ಪರಿಹಾರ ನೀಡುತ್ತಿರುವ ಪ್ರಕ್ರಿಯೆ, ಲಗೇಜ್‌ಗಳ ಮರಳಿಸುವಿಕೆ- ಹೀಗೆ ಎಲ್ಲವನ್ನೂ ಈ ತಂಡ ಮೇಲ್ವಿಚಾರಣೆ ನಡೆಸಲಿದೆ. ಈ ತಂಡವು ಪ್ರತಿದಿನವೂ ಡಿಜಿಸಿಎಗೆ ವರದಿ ನೀಡಬೇಕು.

ದೇಶದ ಎಲ್ಲ 11 ವಿಮಾನ ನಿಲ್ದಾಣಗಳಿಗೆ ತೆರಳಿ ಡಿಜಿಸಿಎದ ಹಿರಿಯ ಅಧಿಕಾರಿಗಳು ಪರಿಶೀಲನೆ ನಡೆಸಲಿದ್ದಾರೆ. ಮುಂದಿನ 2-3 ದಿನಗಳಲ್ಲಿ ಎಲ್ಲ ಅಧಿಕಾರಿಗಳು ಅವರಿಗೆ ನೀಡಿರುವ ನಿಲ್ದಾಣಗಳಿಗೆ ತೆರಳಿ, 24 ಗಂಟೆಗಳ ಒಳಗೆ ವರದಿ ನೀಡಲಿದ್ದಾರೆ ಎಂದು ಡಿಜಿಸಿಎ ಬುಧವಾರ ಹೇಳಿಕೆ ಬಿಡುಗಡೆ ಮಾಡಿದೆ.

ಗುರುವಾರದ ಮಾಹಿತಿ

60 ಬೆಂಗಳೂರಿನಿಂದ ರದ್ದಾದ ಇಂಡಿಗೊ ವಿಮಾನಗಳ ಸಂಖ್ಯೆ

1,950 ಹಾರಾಟ ನಡೆಸಿದ ಇಂಡಿಗೊ ವಿಮಾನಗಳ ಸಂಖ್ಯೆ

‘ಆಂತರಿಕ ಮತ್ತು ಬಾಹ್ಯ ಘಟನೆಗಳಿಂದ ತೊಂದರೆ’

ವಿಕ್ರಂ ಸಿಂಗ್ ಮೆಹ್ತಾ

ಬಿಕ್ಕಟ್ಟು ಆರಂಭವಾದ ಹತ್ತು ದಿನಗಳ ಬಳಿಕ ಇದೇ ಮೊದಲ ಬಾರಿಗೆ ಬುಧವಾರ ಇಂಡಿಗೊ ಸಂಸ್ಥೆ ಮುಖ್ಯಸ್ಥ ವಿಕ್ರಂ ಸಿಂಗ್ ಮೆಹ್ತಾ ಪ್ರತಿಕ್ರಿಯೆ ನೀಡಿದ್ದಾರೆ. ‘ನಮ್ಮಿಂದಾದ ತೊಂದರೆಗೆ ಕ್ಷಮೆ ಕೇಳುತ್ತೇವೆ. ಆಂತರಿಕವಾದ ಮತ್ತು ಬಾಹ್ಯವಾದ ಅನಿರೀಕ್ಷಿತ ಘಟನಾವಳಿಗಳಿಂದ ಇಂಥ ದೊಡ್ಡ ಮಟ್ಟದ ಬಿಕ್ಕಟ್ಟು, ತೊಂದರೆ ಉದ್ಭವಿಸಿತು’ ಎಂದು ಹೇಳಿದರು.

‘ಸಣ್ಣದಾದ ತಾಂತ್ರಿಕ ಸಮಸ್ಯೆ ಎದುರಾಯಿತು, ಚಳಿಗಾಲದ ಋತುವಿನ ಆರಂಭಕ್ಕೆ ಸಂಬಂಧಿಸಿ ವಿಮಾನಗಳ ಹಾರಾಟದ ವೇಳಾಪಟ್ಟಿಯಲ್ಲಿ ಬದಲಾವಣೆಯಲ್ಲಿನ ಸಮಸ್ಯೆ, ಪ್ರತಿಕೂಲ ಹವಾಮಾನದ ಸಮಸ್ಯೆ, ವಿಮಾನಗಳ ಹಾರಾಟ ದಟ್ಟಣೆ ಸಮಸ್ಯೆ, ಸಿಬ್ಬಂದಿ ಕೆಲಸದ ವೇಳಾಪಟ್ಟಿ ಬಗೆಗಿನ ಹೊಸ ನಿಯಮಗಳ ಜಾರಿಯಲ್ಲಿನ ಸಮಸ್ಯೆಯಿಂದಾಗಿ ಬಿಕ್ಕಟ್ಟು ಉದ್ಭವಿಸಿತು’ ಎಂದರು.

‘ಮಾಹಿತಿ ನೀಡಿ’

‘ಒಂದು ವೇಳೆ ನೀವು ಟ್ರಾವೆಲ್ ಏಜೆನ್ಸಿಗಳಿಂದ ಇಂಡಿಗೊ ಟಿಕೆಟ್ ಬುಕ್ ಮಾಡಿಕೊಂಡಿದ್ದರೆ, ಆ ಪ್ರಯಾಣಿಕರ ಸಂಪೂರ್ಣ ಮಾಹಿತಿ ನಮ್ಮ ಬಳಿ ಇಲ್ಲ. ಇದರಿಂದ ಪರಿಹಾರ ತಲುಪಿಸುವುದು ಕಷ್ಟಕರವಾಗಲಿದೆ. ಆದ್ದರಿಂದ ಏಜೆನ್ಸಿ ಮೂಲಕ ಟಿಕೆಟ್ ಬುಕ್ ಮಾಡಿರುವ ಪ್ರಯಾಣಿಕರು ನಿಮ್ಮ ಮಾಹಿತಿಯನ್ನು customer.experience@goindigo.in ಮೂಲಕ ನಮಗೆ ನೀಡಿ’ ಎಂದು ಇಂಡಿಗೊ ಸಂಸ್ಥೆ ಪ್ರಯಾಣಿಕರಲ್ಲಿ ಮನವಿ ಮಾಡಿಕೊಂಡಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001
ದೂ.: 080-22215601, 22211246, ಫ್ಯಾಕ್ಸ್: 080-22215602

ಸಂ.: ಡಿವೈಇಎಸ್/ತಾಂಶಾ/ಕ್ರಿಯೋ/150/2025-26 ದಿನಾಂಕ: 09.12.2025

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ-ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ ನೃಪತುಂಗ ರಸ್ತೆ, ಬೆಂಗಳೂರು-560 001, ಕರ್ನಾಟಕ, ಭಾರತ ಇವರು, ಕರ್ನಾಟಕ ರಾಜ್ಯದಲ್ಲಿರುವ ವಿವಿಧ ಕ್ರೀಡಾಂಗಣದಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ	ಇ.ಎಂ.ಡಿ. ಮೊತ್ತ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಕ್ರೀಡಾಂಗಣದ ಒಳಚರಂಡಿ ದುರಸ್ತಿ ಉತ್ತರ ಭಾಗದಲ್ಲಿ ಹೆಚ್ಚುವರಿ ಪ್ರೇಕ್ಷಕರ ಗ್ಯಾಲರಿ ದುರಸ್ತಿ ಕಾಮಗಾರಿ ಹಾಗೂ ಬಾರ್ಬ್ ವೈರ್ ಬೇಲಿ ನಿರ್ಮಾಣ.	ರೂ. 124.74 ಲಕ್ಷಗಳು	ರೂ. 1,87,118/-	24.12.2025 ಸಮಯ 16:00 ಗಂಟೆ	26.12.2025 ಸಮಯ 11:00 ಗಂಟೆ
2	ಹಾವೇರಿ ಜಿಲ್ಲಾ ಕೇಂದ್ರದಲ್ಲಿರುವ ಮಹಿಳಾ ಕ್ರೀಡಾ ವಸತಿ ಕಟ್ಟಡದ ಕಾಂಪೌಂಡು ಎತ್ತರಿಸುವುದು ಹಾಗೂ ಶೌಚಾಲಯ ನವೀಕರಣ.	ರೂ. 49.89 ಲಕ್ಷಗಳು	ರೂ. 49,898/-	23.12.2025 ಸಮಯ 16:00 ಗಂಟೆ	24.12.2025 ಸಮಯ 17:30 ಗಂಟೆ
3	ಬೆಂಗಳೂರಿನ ವಿದ್ಯಾನಗರದ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ ವಿದ್ಯಾನಗರದ ಆಡಿಟೋರಿಯಂ ಹತ್ತಿರ ಒಳಚರಂಡಿ ನಿರ್ಮಾಣ. **(ಪರಿಶಿಷ್ಟ ಪಂಗಡ ಮೀಸಲು)**	ರೂ. 20.77 ಲಕ್ಷಗಳು	ರೂ. 25,000/-	22.12.2025 ಸಮಯ 16:00 ಗಂಟೆ	23.12.2025 ಸಮಯ 17:30 ಗಂಟೆ

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (htttps://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-, ಉಪ-ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

ವಾಸಾಸಂಇ/ವಾಪ್ರ/ಎಲ್‌ಸಿ/4402/2025-26

‘ಗೋಲ್ಡ್ ಕಾರ್ಡ್’ಗೆ ಟ್ರಂಪ್ ಚಾಲನೆ

ನ್ಯೂಯಾರ್ಕ್/ವಾಷಿಂಗ್ಟನ್(ಪಿಟಿಐ): ಅಮೆರಿಕ ಪೌರತ್ವ ಪಡೆಯಬೇಕು ಎಂದು ಬಯಸುವ ವಲಸಿಗರಿಗಾಗಿ ಹತ್ತು ಲಕ್ಷ ಡಾಲರ್ ಶುಲ್ಕದ (ಅಂದಾಜು ₹9 ಕೋಟಿ) ‘ಗೋಲ್ಡ್ ಕಾರ್ಡ್’ಗೆ ಚಾಲನೆ ನೀಡಿದ್ದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಅಮೆರಿಕ್ಕೆ ಗಮನಾರ್ಹ ಕೊಡುಗೆ ನೀಡಬಲ್ಲಂಥ ಅಭ್ಯರ್ಥಿಗಳ ಸಾಮರ್ಥ್ಯ ಪರಿಗಣಿಸಿ, ವೀಸಾ ಆಧಾರಿತ ಈ ಸೌಲಭ್ಯವನ್ನು ನೀಡಲಾಗುತ್ತದೆ.

ಡೊನಾಲ್ಡ್ ಟ್ರಂಪ್

ಅಮೆರಿಕದ ವಿಶ್ವವಿದ್ಯಾಲಯಗಳು/ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಪೂರ್ಣಗೊಳಿಸಿದ ಪ್ರತಿಭಾವಂತರನ್ನು ನೇಮಕ ಮಾಡಿಕೊಳ್ಳುವ ಕಂಪನಿಗಳಿಗೆ ‘ಗೋಲ್ಡ್ ಕಾರ್ಡ್’ ಅನುಕೂಲವಾಗಲಿದೆ.

ಈ ಕಾರ್ಡ್‌ಗೆ ಚಾಲನೆ ನೀಡಿ ಮಾತನಾಡಿದ ಟ್ರಂಪ್,‘ಅಮೆರಿಕದಲ್ಲಿ ಉನ್ನತ ವ್ಯಾಸಂಗ ಪೂರೈಸುವ ಭಾರತ ಮತ್ತು ಚೀನಾ ವಿದ್ಯಾರ್ಥಿಗಳು, ಮರಳಿ ತಮ್ಮ ದೇಶಗಳಿಗೆ ಹೋಗಬೇಕಾಗುತ್ತದೆ. ಇದು ನಾಚಿಕೆಗೇಡಿನ ವಿಚಾರ’ ಎಂದು ಹೇಳಿದ್ದಾರೆ.

ಬಾಂಗ್ಲಾ: ಫೆ.12ಕ್ಕೆ ಚುನಾವಣೆ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಮುಂದಿನ ವರ್ಷ ಫೆಬ್ರುವರಿ 12ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದೆ. ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದ ದಂಗೆಯಿಂದಾಗಿ 2024ರ ಆಗಸ್ಟ್‌ನಲ್ಲಿ ಶೇಕ್ ಹಸೀನಾ ನೇತೃತ್ವದ ಸರ್ಕಾರ ಪತನಗೊಂಡ ಬಳಿಕ ನಡೆಯಲಿರುವ ಮೊದಲ ಚುನಾವಣೆ ಇದು.

‘ಸಾರ್ವತ್ರಿಕ ಚುನಾವಣೆಯ ಮತದಾನದ ಪ್ರಕ್ರಿಯೆ ಫೆಬ್ರುವರಿ 12ರ ಬೆಳಿಗ್ಗೆ 7.30ರಿಂದ ಸಂಜೆ 4.30ರ ವರೆಗೆ ನಡೆಯಲಿದೆ’ ಎಂದು ಮುಖ್ಯ ಚುನಾವಣಾ ಆಯುಕ್ತ ಎಎಂಎಂ ನಾಸಿರುದ್ದೀನ್ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರದ ಹಲವು ಸುಧಾರಣಾ ಪ್ರಸ್ತಾವಗಳ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ತಿಳಿದುಕೊಳ್ಳಲು ಜನಮತಸಂಗ್ರಹ ಪ್ರಕ್ರಿಯೆ ಕೂಡಾ ಮತದಾನದ ದಿನ ನಡೆಯಲಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಮೆಟ್ರೋ ಸಿಟಿಯಲ್ಲಿ SSLC_PUC ITI diploma_degree ಆದಂತಹ ಅಭ್ಯರ್ಥಿಗಳಿಗೆ ಉಚಿತ ವಸತಿಯೊಂದಿಗೆ ತಿಂಗಳಿಗೆ 18000- 24000 Disha 9900019932, 9148730932

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080 25300714

ತನ್ಮಯಿ OIL Companyಗೆ PUC Degree Basic Tally Computer ಕಲಿತವರು ಕೆಲಸಕ್ಕೆ ಬೇಕಾಗಿದ್ದಾರೆ. ವೇತನ 16000 ರಿಂದ 20000 ಶೇಷಾದ್ರಿಪುರಂ ಬೆಂಗಳೂರು 9019626612.

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188.

Wanted

ರಾಜಾಜಿನಗರದಲ್ಲಿರುವ ಪ್ರೈವೇಟ್ ಲಿಮಿಟೆಡ್ ಕಂಪನಿಯ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು 30 ವರ್ಷದೊಳಗಿನ ಯುವಕರು ಬೇಕಾಗಿದ್ದಾರೆ ಸಂಪರ್ಕಿಸಿ: 9108458798/ 9845579620

ಭವಿಷ್ಯ

Astrology

★ಸಂಕಷ್ಟದಲ್ಲಿದ್ದಿರಾ?★ ನಿಮ್ಮ ಪ್ರೇಮಕಥೆ, ಅನಾರೋಗ್ಯ, ಶತ್ರುನಾಶ, ದಾಂಪತ್ಯ ಮತ್ತು ಸಂತಾನ ವೇದನೆಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿರಿ. ವಿಜಯನಗರ, ಬೆಂಗಳೂರು. 9353143216

ಪ್ರವಾಸ

Travel

18/13/8 ದಿನಗಳ ಗ್ರಾಂಡ್ ಯುಕೆ ಮತ್ತು ಯುರೋಪ್ 10ದೇಶಗಳು. ಯುಕೆ, ಫ್ರಾನ್ಸ್ ನೆದರ್ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಸ್ವಿಜರ್ ಲ್ಯಾಂಡ್, ಲಿಚೆನ್ ಟೆನ್ ಸ್ಟೈನ್, ಇಟಲಿ ಆಸ್ಟ್ರೀಯಾ, ವ್ಯಾಟಿಕನ್ ವಿಮಾನ,ವೀಸಾ,ತೆರಿಗೆ, ಊಟ,ವಸತಿ, ಟಿಪ್ಸ್ ಇನ್ಶೂರೆನ್ಸ್ ಎಲ್ಲಾ ಪ್ರವಾಸದರದಲ್ಲಿ ಒಳಗೊಂಡಿರುತ್ತದೆ. ಸಂಪರ್ಕಿಸಿ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್, ಬಸವನಗುಡಿ, ಬೆಂಗಳೂರು-04, 9880079644, 9900080793, 9900080794

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

CONNECT

Mega THE AIRPORT TAXI
ಚಾಲಕರಿಂದ ಮಾಲಿಕರಾಗುವ ಸುವರ್ಣ ಅವಕಾಶ
Scan Me For Office Location

ಚಾಲಕರಿಂದ ಮಾಲಿಕರಾಗಲು ಅತ್ಯುತ್ತಮ ಅವಕಾಶಗಳೊಂದಿಗೆ, ಪೆಟ್ರೋಲ್ ಮತ್ತು ಸಿ.ಎನ್.ಜಿ ಅಳವಡಿತ ಹೊಚ್ಚ ಹೊಸ ಟಯೋಟ ಹೈರೈಡರ್ ಕಾರನ್ನು ಸ್ವಂತ ಮಾಡಿಕೊಳ್ಳುವ ಸುವರ್ಣ ಅವಕಾಶ.
1) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ 24 /7 ಗ್ರಾಹಕರ ಸೇವೆ
2) ಡಬಲ್ ಡ್ರೈವರ್‌ಗೆ ಅವಕಾಶ
3) 24 /7 ಏರ್‌ಪೋರ್ಟ್ ಆರ್.ಎಫ್.ಐ.ಡಿ ಕಾರ್ಡ ಸೌಲಭ್ಯ
4) ಬೆಂಗಳೂರು ನಗರದಿಂದ ಏರ್‌ಪೋರ್ಟ್‌ಗೆ ರಿಟರ್ನ್‌ಟ್ರಿಪ್ ಅವಕಾಶ
5) 24 /7 ಕಾಲ್‌ಸೆಂಟರ್ ಸೌಲಭ್ಯ
ಕಾರ್ ಬುಕಿಂಗ್ ಮಾಡಿಕೊಳ್ಳಲು ಈ ಕೂಡಲೇ ಸಂಪರ್ಕಿಸಿ ಮೊದಲು ಬಂದವರಿಗೆ ಮೊದಲ ಆದ್ಯತೆ ಕೂಡಲೇ ಸಂಪರ್ಕಿಸಿ
ಅಮರ್ ಬಾಬು 7019530368 | ಜಯಕುಮಾರ್ 9900221021 | ಪ್ರದೀಪ್ 9632411024 | ಆನಂದ್ 9972790713
ಬೆಂಗಳೂರು ಮೆಗಾ ಕ್ಯಾಬ್ಸ್ ಪ್ರೈವೇಟ್ ಲಿಮಿಟೆಡ್, ಕಂಟ್ರಿ ಕ್ಲಬ್ ಮುಂಭಾಗ, ಬಾಗಲೂರು ಮುಖ್ಯ ರಸ್ತೆ, ಯಲಹಂಕ, ಬೆಂಗಳೂರು-560064

ಸಾಯಿದುರ್ಗಾ ಜ್ಯೋತಿಷ್ಯ ಕೇಂದ್ರ
ವಂಶಪಾರಂಪರ್ಯ ಜ್ಯೋತಿಷ್ಯರು ಪಂ|| ಶ್ರೀರಾಮ್ ಭಟ್ಟ್
ಶ್ರೀ ದುರ್ಗಾದೇವಿಯ ಉಪಾಸಕರು
ನಂ.1 ವಶೀಕರಣ ಸ್ಪೆಷಲಿಸ್ಟ್
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವಿವಾಹ, ಸತಿ-ಪತಿ ಕಲಹ, ಸಂತಾನ ಬಾಗ್ಯ, ದಾಂಪತ್ಯದಲ್ಲಿ ತೊಂದರೆ,ಅತ್ತೆ ಸೊಸೆ ಕಲಹ, ವಿದೇಶ ಪ್ರಯಾಣ, ಕೋರ್ಟ್ ಕೇಸ್, ರಾಜಕೀಯ, ಶತ್ರುಕಾಟ, ಅನಾರೋಗ್ಯ, ಸಾಲಬಾಧೆ, ಮನೆಯಲ್ಲಿ ಅಶಾಂತಿ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಪ್ರೀತಿಯಲ್ಲಿ ನಂಬಿ ಮೋಸ, ವಾಸ್ತು ದೋಷ, ಭೂತ ಪ್ರೇತ ಬಾಧೆ, ಕುಜ ದೋಷ, ಸರ್ಪ ದೋಷ, ಧನವಶ, ಜನವಶ, ಶತ್ರುಬಾದೆ, ಮಾಟ-ಮಂತ್ರ ತಡೆ, ಇನ್ನೂ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ ಕೇರಳದ ಶ್ರೀ ಭದ್ರಕಾಳಿ ಪೂಜಾ ಶಕ್ತಿಯಿಂದ ಕೇವಲ 9 ದಿನಗಳಲ್ಲಿ ಪರಿಹಾರ ಮಾಡಿಕೊಡಲಾಗುತ್ತದೆ.
ವಿಶೇಷ ಸೂಚನೆ: ಅಮಾವಾಸ್ಯೆ, ಹುಣ್ಣಿಮೆ, ಸೂರ್ಯ, ಚಂದ್ರ ಗ್ರಹಗಳ ಜಪಸಿದ್ಧಿಯಿಂದ ಸ್ತ್ರೀ-ಪುರುಷ ವಶೀಕರಣಕ್ಕೆ ಗಂಧರ್ವ ಸಂಮ್ಮೋಹಿನಿ ಕವಚವನ್ನು ಮಾಡಿಕೊಡಲಾಗುತ್ತದೆ.
ಪೋನಿನ ಮೂಲಕ ಪ್ರಶ್ನೆ, ಪೋನಿನ ಮೂಲಕ ಉತ್ತರ ಪೋನಿನ ಮೂಲಕ ಪರಿಹಾರ. ಸಂಪರ್ಕಿಸಿ: 9880403406

ಲೂಥ್ರಾ ಸಹೋದರರ ಬಂಧನ

25 ಜೀವಗಳನ್ನು ಬಲಿಪಡೆದ ಗೋವಾ ನೈಟ್ ಕ್ಲಬ್ ಅಗ್ನಿ ಅವಘಡ

ಪಣಜಿ (ಪಿಟಿಐ): ಇಪ್ಪತ್ತೈದು ಜೀವಗಳನ್ನು ಬಲಿ ಪಡೆದ ಉತ್ತರ ಗೋವಾದ ನೈಟ್‌ಕ್ಲಬ್ ಅಗ್ನಿ ಅವಘಡಕ್ಕೆ ಸಂಬಂಧಿಸಿದಂತೆ ಥಾಯ್ಲೆಂಡ್‌ಗೆ ಪರಾರಿಯಾಗಿದ್ದ ಮಾಲೀಕರಾದ ಸೌರಭ್ ಹಾಗೂ ಗೌರವ್ ಲೂಥ್ರಾ ಸಹೋದರರನ್ನು ಅಲ್ಲಿನ ಪೊಲೀಸರು ಫುಕೆಟ್‌ನಲ್ಲಿ ಗುರುವಾರ ಬಂಧಿಸಿದ್ದಾರೆ.

ಡಿ.6ರಂದು ರಾತ್ರಿ ಅಗ್ನಿ ಅವಘಡ ಸಂಭವಿಸಿತ್ತು. ಇದಾದ ಕೆಲವೇ ಗಂಟೆಗಳಲ್ಲಿ ಇವರಿಬ್ಬರೂ ಥಾಯ್ಲೆಂಡ್‌ಗೆ ಪರಾರಿಯಾಗಿದ್ದರು. ಆರೋಪಿಗಳನ್ನು ವಶಕ್ಕೆ ಪಡೆಯಲು ಇಂಟರ್‌ಪೋಲ್ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಿತ್ತು. ಭಾರತ ಸರ್ಕಾರದ ಮನವಿ ಮೇರೆಗೆ ಇವರಿಬ್ಬರನ್ನು ಬಂಧಿಸಲಾಗಿದೆ ಎಂದು ಥಾಯ್ಲೆಂಡ್ ಪೊಲೀಸರು ಖಚಿತಪಡಿಸಿದ್ದಾರೆ.

'ಲೂಥ್ರಾ ಸಹೋದರರನ್ನು 24 ಗಂಟೆಗಳ ಒಳಗಾಗಿ ಭಾರತಕ್ಕೆ ಕರೆತರಲು ಪ್ರಕ್ರಿಯೆಗಳು ನಡೆಯುತ್ತಿವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಉತ್ತರ ಗೋವಾದ ಅರ್ಪೋರಾ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ 'ಬರ್ಚ್ ಬೈ ರೋಮಿಯೊ ಲೇನ್ ನೈಟ್ ಕ್ಲಬ್' ಕಟ್ಟಡವನ್ನು ಗೋವಾ ಪ್ರವಾಸೋದ್ಯಮ ಇಲಾಖೆ ಈಗಾಗಲೇ ನೆಲಸಮಗೊಳಿಸಿದೆ. ಈ ನೈಟ್‌ಕ್ಲಬ್ ಲೂಥ್ರಾ ಸಹೋದರರ ಒಡೆತನಕ್ಕೆ ಸೇರಿದ ಮೂರನೇ ಆಸ್ತಿಯಾಗಿದೆ. ನೈಟ್ ಕ್ಲಬ್‌ನಲ್ಲಿ ಅಗ್ನಿ ಆಕಸ್ಮಿಕ ನಡೆದಾಗ ಪೊಲೀಸರು, ಅಧಿಕಾರಿಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದರೆ, ಲೂಥ್ರಾ ಸಹೋದರರು ತಡರಾತ್ರಿ 1.17ರ ಸುಮಾರಿಗೆ ಟ್ರಾವೆಲ್ ಪೋರ್ಟಲ್ ಮೂಲಕ ಟಿಕೆಟ್ ಕಾಯ್ದಿರಿಸಿ, ಇಂಡಿಗೊ ವಿಮಾನದ ಮೂಲಕ ಥಾಯ್ಲೆಂಡ್‌ಗೆ ಪ್ರಯಾಣಿಸಿದ್ದರು.

'ನೈಟ್ ಕ್ಲಬ್ ಅಗ್ನಿ ಅವಘಡ ನಡೆದ ಪ್ರದೇಶದ ಪಂಚಾಯಿತಿ ಅಧಿಕಾರಿಯೊಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಆತ ತನಿಖೆಗೆ ಸಹಕಾರ ನೀಡುತ್ತಿಲ್ಲ' ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಇಲ್ಲಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಿಷೇಧ: ಅಗ್ನಿ ಅವಘಡದ ಬೆನ್ನಲ್ಲೇ, ಹೋಟೆಲ್, ಬಾರ್, ರೆಸ್ಟೋರೆಂಟ್, ನೈಟ್‌ಕ್ಲಬ್ ಸೇರಿದಂತೆ ಪ್ರವಾಸಿಗರು ಸೇರುವ ಸ್ಥಳಗಳಲ್ಲಿ ಪಟಾಕಿ, ಸ್ಪಾರ್ಕ್ಲರ್ಸ್ ಸೇರಿದಂತೆ ಬೆಳಕು, ಶಾಖ, ಹೊಗೆಯನ್ನುಂಟು ಮಾಡುವ ರಾಸಾಯನಿಕ ವಸ್ತುಗಳ ಬಳಕೆಯನ್ನು ಉತ್ತರ ಗೋವಾ ಜಿಲ್ಲಾಡಳಿತ ನಿಷೇಧಿಸಿದೆ. ಇಂತಹ ವಸ್ತುಗಳನ್ನು ಸುಡುವುದು, ಎಸೆಯುವುದು ಅಥವಾ ಹೊಗೆಯನ್ನು ಸೃಷ್ಟಿಸಲು ಸ್ಮೋಕ್ ಜನರೇಟರ್‌ಗಳ ಬಳಕೆಯನ್ನೂ ನಿಷೇಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೋವಾ ಪೊಲೀಸರು ಮತ್ತು ಸಿಬಿಐ ಆದಷ್ಟು ಬೇಗ ಲೂಥ್ರಾ ಸಹೋದರರನ್ನು ಥಾಯ್ಲೆಂಡ್‌ನಿಂದ ಭಾರತಕ್ಕೆ ಕರೆತರಲಿದ್ದಾರೆ
ಪ್ರಮೋದ್ ಸಾವಂತ್
ಗೋವಾ ಮುಖ್ಯಮಂತ್ರಿ

ಸೌರಭ್ ಹಾಗೂ ಗೌರವ್ ಲೂಥ್ರಾ ಸಹೋದರರನ್ನು ಥಾಯ್ಲೆಂಡ್‌ನಲ್ಲಿ ಪೊಲೀಸರು ಬಂಧಿಸಿದರು – ಪಿಟಿಐ ಚಿತ್ರ

ಸಹ ಪಾಲುದಾರ ಪೊಲೀಸ್ ಕಸ್ಟಡಿಗೆ

ಲೂಥ್ರಾ ಸಹೋದರರ ಜತೆಗೆ ಬರ್ಚ್ ಬೈ ರೋಮಿಯೊ ಲೇನ್ ನೈಟ್‌ಕ್ಲಬ್‌ನ ಸಹ ಪಾಲುದಾರನಾಗಿದ್ದ ಅಜಯ್ ಗುಪ್ತಾ ಅವರನ್ನು ಪಣಜಿ ನ್ಯಾಯಾಲಯ 7 ದಿನ ಪೊಲೀಸ್ ಕಸ್ಟಡಿಗೆ ನೀಡಿದೆ. ಗುಪ್ತಾ ಅವರನ್ನು ಬುಧವಾರ ದೆಹಲಿಯಲ್ಲಿ ಬಂಧಿಸಿ ಗೋವಾಕ್ಕೆ ಕರೆತರಲಾಗಿತ್ತು. ಗುರುವಾರ ಬೆಳಿಗ್ಗೆ ಇಲ್ಲಿನ ಮಾಪುಸಾ ಕೋರ್ಟ್‌ಗೆ ಅವರನ್ನು ಹಾಜರುಪಡಿಸಲಾಯಿತು. ಕೋರ್ಟ್ ಒಂದು ವಾರ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಗುಪ್ತಾ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಅಂಜುನಾ ಪೊಲೀಸ್ ಠಾಣೆಗೆ ಕರೆದೊಯ್ಯಲಾಗುವುದು ಎಂದು ಮೂಲಗಳು ತಿಳಿಸಿವೆ.

ತಮ್ಮ ಕಕ್ಷಿದಾರ ತನಿಖೆಗೆ ಸಂಪೂರ್ಣ ಸಹಕಾರ ನೀಡಲಿದ್ದಾರೆ ಎಂದು ಗುಪ್ತಾ ಪರ ವಕೀಲ ರೋಹನ್ ದೇಸಾಯಿ ಹೇಳಿದರು. 'ನೈಟ್‌ಕ್ಲಬ್ ಅಗ್ನಿ ಅವಘಡದಲ್ಲಿ ನನ್ನ ಪಾತ್ರ ಏನಿಲ್ಲ. ನನಗೇನೂ ತಿಳಿದಿಲ್ಲ' ಎಂದು ಗುಪ್ತಾ ಕೋರ್ಟ್ ಆವರಣದಲ್ಲಿ ಸುದ್ದಿಗಾರರ ಎದುರು ಹೇಳಿದರು. 20 ಸಿಬ್ಬಂದಿ, ಐವರು ಪ್ರವಾಸಿಗರು ಸೇರಿ 25 ಮಂದಿ ಡಿ.6ರ ಮಧ್ಯರಾತ್ರಿ ನಡೆದ ಅಗ್ನಿ ಅವಘಡದಲ್ಲಿ ಮೃತಪಟ್ಟಿದ್ದರು.

'ಬಂಧನ ಭೀತಿಯಿಂದ ದೇಶ ತೊರೆದವರಲ್ಲ'

'ಲೂಥ್ರಾ ಸಹೋದರರು ಉದ್ಯಮಿಗಳು. ಅನೇಕರಿಗೆ ಅವರು ಉದ್ಯೋಗ ನೀಡಿದ್ದಾರೆ. ₹5 ಸಾವಿರ ಕೋಟಿ ವಂಚನೆ ಎಸಗಿ ದೇಶದಿಂದ ಓಡಿ ಹೋದವರ ಪಟ್ಟಿಗೆ ಅವರು ಸೇರುವುದಿಲ್ಲ. ಆರ್ಥಿಕ ಅಪರಾಧ ಎಸಗಿ, ಬ್ಯಾಂಕ್‌ಗಳಿಗೆ ಸಾಲ ಮರುಪಾವತಿಸಲಾಗದೆ, ಬಂಧನದ ಭೀತಿಯಿಂದ ದೇಶ ತೊರೆದವರಲ್ಲ. ಅವರೂ ಮನುಷ್ಯರೇ, ಘಟನೆ ನಡೆದಾಗ ಅವರು ನೂರಾರು ಕಿ.ಮೀ ದೂರದಲ್ಲಿದ್ದರು' ಎಂದು ನಿರೀಕ್ಷಣಾ ಜಾಮೀನು ಕೋರಿ ಇಲ್ಲಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ವಕೀಲ ತನ್ವೀರ್ ಅಹಮದ್ ಮಿರ್ ಕೋರ್ಟ್‌ಗೆ ತಿಳಿಸಿದ್ದರು.

ಪಶ್ಚಿಮ ಬಂಗಾಳ: ಗಡುವು ವಿಸ್ತರಣೆ ಇಲ್ಲ

ಆಯಾ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳ ಮನವಿಯಂತೆ ಗಡುವು ವಿಸ್ತರಣೆ; ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಿದ ಆಯೋಗ

ಎಸ್‌ಐಆರ್: ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಐದು ರಾಜ್ಯಗಳಲ್ಲಿ ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ವಿವಿಧ ಹಂತಗಳ ಅಂತಿಮ ಗಡುವನ್ನು ಕೇಂದ್ರ ಚುನಾವಣಾ ಆಯೋಗವು ವಿಸ್ತರಿಸಿದೆ.

ತಮಿಳುನಾಡು, ಗುಜರಾತ್, ಮಧ್ಯಪ್ರದೇಶ, ಛತ್ತೀಸಗಢ, ಉತ್ತರ ಪ್ರದೇಶ ಹಾಗೂ ಅಂಡಮಾನ್ ಮತ್ತು ನಿಕೋಬಾರ್‌ಗೆ ಸಂಬಂಧಿಸಿದಂತೆ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಲಾಗಿದೆ ಎಂದು ಆಯೋಗವು ಗುರುವಾರ ಪ್ರಕಟಣೆಯಲ್ಲಿ ತಿಳಿಸಿದೆ. ಆಯಾ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳ ಮನವಿಯಂತೆ ಗಡುವು ವಿಸ್ತರಿಸಲಾಗಿದೆ ಎಂದು ಹೇಳಿದೆ.

ತಮಿಳುನಾಡು ಮತ್ತು ಗುಜರಾತ್‌ನಲ್ಲಿ ಪಟ್ಟಿಗೆ ಹೆಸರು ಸೇರ್ಪಡೆಯ ಅರ್ಜಿ ನಮೂನೆ ವಿತರಣೆ ಗಡುವನ್ನು ಡಿ.14ರವರೆಗೆ ವಿಸ್ತರಿಸಲಾಗಿದೆ. ಮತದಾರರ ಕರಡು ಪಟ್ಟಿಯನ್ನು ಡಿ.19ಕ್ಕೆ ಪ್ರಕಟಿಸಲಾಗುವುದು ಎಂದಿದೆ.

ಮಧ್ಯಪ್ರದೇಶ, ಛತ್ತೀಸಗಢ ಹಾಗೂ ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಅರ್ಜಿ ನಮೂನೆ ವಿತರಣೆ ಗಡುವನ್ನು ಡಿ.18ರವರೆಗೆ ವಿಸ್ತರಿಸಲಾಗಿದ್ದು, ಕರಡು ಪಟ್ಟಿಯನ್ನು ಡಿ.23ಕ್ಕೆ ಪ್ರಕಟಿಸಲಾಗುವುದು. ಉತ್ತರ ಪ್ರದೇಶದಲ್ಲಿ ಅರ್ಜಿ ವಿತರಣೆಗೆ ಡಿ.26ರವರೆಗೂ ಕಾಲಾವಕಾಶ ನೀಡಲಾಗಿದ್ದು, ಡಿ.31ರಂದು ಕರಡು ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಹೇಳಿದೆ.

ಗೋವಾ, ಪುದುಚೇರಿ, ಲಕ್ಷದ್ವೀಪ, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಗಡುವು ವಿಸ್ತರಿಸಿಲ್ಲ. ಇಲ್ಲಿ ಅರ್ಜಿ ವಿತರಣೆ ಗುರುವಾರ ಕೊನೆಗೊಂಡಿದ್ದು, ಕರಡು ಪಟ್ಟಿಯನ್ನು ಇದೇ 16ರಂದು ಪ್ರಕಟಿಸಲಾಗುತ್ತದೆ.

ಕೇರಳದಲ್ಲಿ ನಡೆಯುತ್ತಿರುವ ಪ್ರಕ್ರಿಯೆಯ ಗಡುವನ್ನು ಈ ಹಿಂದೆಯೇ ವಿಸ್ತರಿಸಲಾಗಿತ್ತು. ಡಿ.18ರವರೆಗೆ ಅರ್ಜಿ ವಿತರಣೆ ನಡೆಯಲಿದ್ದು, ಕರಡು ಪಟ್ಟಿಯನ್ನು 23ರಂದು ಪ್ರಕಟಿಸಲಾಗುತ್ತದೆ.

ಚಟಿಕೆ ಸುದ್ದಿ

'ಕುಲಪತಿ ನೇಮಕ ಸಮಿತಿಯೇ ಹೆಸರು ಸೂಚಿಸಲಿ'

ನವದೆಹಲಿ (ಪಿಟಿಐ): ಕೇರಳದ 'ಎಪಿಜೆ ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯ' ಮತ್ತು 'ಯೂನಿವರ್ಸಿಟಿ ಆಫ್ ಡಿಜಿಟಲ್ ಸೈನ್ಸ್, ಇನ್ನೋವೇಷನ್ ಮತ್ತು ಟೆಕ್ನಾಲಜಿ' ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಿಸಲು ತಲಾ ಒಂದೊಂದು ಹೆಸರು ನೀಡಿ ಎಂದು ನಿವೃತ್ತ ನ್ಯಾಯಮೂರ್ತಿ ಸುಧಾಂಶು ಧೂಲಿಯಾ ಅವರ ನೇತೃತ್ವದ ಸಮಿತಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ಕುಲಪತಿ ನೇಮಕದ ಕುರಿತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹಾಗೂ ರಾಜ್ಯಪಾಲರ ನಡುವಿನ ಭಿನ್ನಾಭಿಪ್ರಾಯದ ಕುರಿತು ಅಂತಿಮ ನಿರ್ಧಾರವಾಗದ ಕಾರಣ ನ್ಯಾಯಾಲಯವು ಈ ಸೂಚನೆ ನೀಡಿದೆ. ಮುಂದಿನ ಬುಧವಾರದ ಒಳಗೆ ಮುಚ್ಚಿದ ಲಕೋಟೆಯಲ್ಲಿ ಹೆಸರು ಶಿಫಾರಸು ಮಾಡುವಂತೆ ನ್ಯಾಯಾಲಯ ಹೇಳಿದೆ.

ಉಮರ್‌ಗೆ ಜಾಮೀನು

ನವದೆಹಲಿ (ಪಿಟಿಐ): ದೆಹಲಿಯಲ್ಲಿ 2020ರಲ್ಲಿ ನಡೆದಿದ್ದ ಗಲಭೆಗೆ ಪಿತೂರಿ ನಡೆಸಿದ ಆರೋಪದಡಿ ಬಂಧಿತರಾಗಿರುವ ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಅವರಿಗೆ ದೆಹಲಿಯ ನ್ಯಾಯಾಲಯವೊಂದು ಗುರುವಾರ ಮಧ್ಯಂತರ ಜಾಮೀನು ನೀಡಿದೆ.

ಸಹೋದರಿಯ ಮದುವೆಯಲ್ಲಿ ಭಾಗವಹಿಸಲು ಉಮರ್‌ಗೆ ಡಿಸೆಂಬರ್ 16ರಿಂದ 29ರವರೆಗೆ ಮಧ್ಯಂತರ ಜಾಮೀನು ನೀಡಲಾಗಿದೆ.

ಐದು ರಾಜ್ಯಗಳಿಗೆ ₹6.2 ಕೋಟಿ

ನವದೆಹಲಿ(ಪಿಟಿಐ): ಕರ್ನಾಟಕ ಸೇರಿದಂತೆ ಐದು ರಾಜ್ಯಗಳಲ್ಲಿ ಅಳಿವಿನಂಚಿನಲ್ಲಿರುವ ರಕ್ತ ಚಂದನದ ಸಂರಕ್ಷಣೆ ಮತ್ತು ರೈತರು ಹಾಗೂ ಅರಣ್ಯ ಅವಲಂಬಿತ ಸಮುದಾಯಗಳ ಬದುಕು ಸದೃಢಗೊಳಿಸಲು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ₹6.2 ಕೋಟಿ ಬಿಡುಗಡೆ ಮಾಡಿದೆ ಎಂದು ಪರಿಸರ ಇಲಾಖೆ ಗುರುವಾರ ತಿಳಿಸಿದೆ.

₹6.2 ಕೋಟಿಯಲ್ಲಿ ತೆಲಂಗಾಣದ ರೈತರಿಗೆ ₹ 17.8 ಲಕ್ಷ, ಆಂಧ್ರದ ರೈತರಿಗೆ ₹1.1 ಕೋಟಿ, ತಮಿಳುನಾಡು ಅರಣ್ಯ ಇಲಾಖೆಗೆ ₹2.98 ಕೋಟಿ, ಕರ್ನಾಟಕ ಅರಣ್ಯ ಇಲಾಖೆಗೆ ₹1.05 ಕೋಟಿ, ಮಹಾರಾಷ್ಟ್ರ ಅರಣ್ಯ ಇಲಾಖೆಗೆ ₹ 69.2 ಲಕ್ಷ ಮತ್ತು ತೆಲಂಗಾಣ ಅರಣ್ಯ ಇಲಾಖೆಗೆ ₹ 5.8 ಲಕ್ಷ ಲಭಿಸಲಿದೆ.

ಅಮಿತ್ ಶಾ ಅಪಾಯಕಾರಿ: ಮಮತಾ

ಕೃಷ್ಣನಗರ (ಪಶ್ಚಿಮ ಬಂಗಾಳ) (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ವಾಗ್ದಾಳಿ ಮುಂದುವರಿಸಿದ್ದು, ಅವರು 'ಅಪಾಯಕಾರಿ' ಎಂದು ಕರೆದಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಯಾವನೇ ಒಬ್ಬ ಅರ್ಹ ಮತದಾರನ ಹೆಸರನ್ನು ಪಟ್ಟಿಯಿಂದ ಕೈಬಿಟ್ಟರೆ ಧರಣಿ ನಡೆಸುವುದಾಗಿ ಅವರು ಎಚ್ಚರಿಸಿದರು.

ನಾದಿಯಾ ಜಿಲ್ಲೆಯ ಕೃಷ್ಣನಗರದಲ್ಲಿ ಗುರುವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಶಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಮಮತಾ, 'ದೇಶದ ಗೃಹ ಸಚಿವರು ಅಪಾಯಕಾರಿ ವ್ಯಕ್ತಿ. ನೀವು ಅದನ್ನು ಅವರ ಕಣ್ಣುಗಳಲ್ಲಿ ನೋಡಲು ಸಾಧ್ಯ. ಅವರ ಒಂದು ಕಣ್ಣಿನಲ್ಲಿ ನಿಮಗೆ 'ದುರ್ಯೋಧನ'ನನ್ನು ಹಾಗೂ ಇನ್ನೊಂದರಲ್ಲಿ 'ದುಶ್ಯಾಸನ'ನನ್ನು ನೋಡಬಹುದು' ಎಂದರು.

ಎಸ್‌ಐಆರ್‌ಗೆ ಸಂಬಂಧಿಸಿದ ಅರ್ಜಿ ನಮೂನೆಯನ್ನು ತಾನು ಇಲ್ಲಿಯವರೆಗೆ ಭರ್ತಿ ಮಾಡಿಲ್ಲ ಎಂದ ಅವರು, 'ಗಲಭೆಕೋರ ಪಕ್ಷದವರಿಗೆ ನನ್ನ ಪೌರತ್ವವನ್ನು ಸಾಬೀತುಪಡಿಸಬೇಕೇ' ಎಂದು ಬಿಜೆಪಿಯನ್ನು ಪರೋಕ್ಷವಾಗಿ ಪ್ರಶ್ನಿಸಿದರು.

ಕೇಂದ್ರ ಸರ್ಕಾರವು ಬಂಗಾಳಿ ಭಾಷೆ ಮಾತನಾಡುವವರನ್ನು ಗುರಿಯಾಗಿಸಿಕೊಂಡಿದೆ ಎಂದು ಅವರು ಆರೋಪಿಸಿದರು. 'ಬಂಗಾಳಿ ಭಾಷಿಕರಿಗೆ ಬಾಂಗ್ಲಾದೇಶೀಯರು ಎಂಬ ಹಣೆಪಟ್ಟಿ ಕಟ್ಟಿ ಜೈಲಿಗೆ ಕಳುಹಿಸಲು ಕೇಂದ್ರ ಗೃಹ ಸಚಿವರು ಏನು ಬೇಕಾದರೂ ಮಾಡಬಹುದು. ಆದರೆ, ಪಶ್ಚಿಮ ಬಂಗಾಳದಿಂದ ಯಾರನ್ನೂ ಹೊರಹಾಕಲು ನಾವು ಬಿಡುವುದಿಲ್ಲ. ಯಾರನ್ನಾದರೂ ಬಲ ಪ್ರಯೋಗಿಸಿ ಹೊರ ಹಾಕಿದರೆ ಅವರನ್ನು ಹೇಗೆ ಮರಳಿ ಕರೆತರಬೇಕು ಎಂಬುದು ನಮಗೆ ಚೆನ್ನಾಗಿ ತಿಳಿದಿದೆ' ಎಂದರು. ಚುನಾವಣಾ ಆಯೋಗವು ಎಸ್‌ಐಆರ್ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಲು ಬಿಜೆಪಿಯೊಂದಿಗೆ ನಂಟು ಹೊಂದಿರುವ ಕೆಲವು ವ್ಯಕ್ತಿಗಳನ್ನು ನಿಯೋಜಿಸುತ್ತಿದೆ. ಅವರು ಜಿಲ್ಲಾಧಿಕಾರಿಗಳ ಕಾರ್ಯವೈಖರಿ ಮೇಲೆ ನಿಗಾ ಇಡುತ್ತಿದ್ದಾರೆ ಎಂದು ಆರೋಪಿಸಿದರು.

ಕೃಷ್ಣನಗರದಲ್ಲಿ ಸಾರ್ವಜನಿಕ ಸಭೆಗೂ ಮುನ್ನ ಮಮತಾ ಬ್ಯಾನರ್ಜಿ ಅವರು ಕಲಾವಿದರೊಂದಿಗೆ ಕಾಣಿಸಿಕೊಂಡರು ಪಿಟಿಐ ಚಿತ್ರ

'ಇದು ಉತ್ತರ ಪ್ರದೇಶ ಅಲ್ಲ'

ಭಗವದ್ಗೀತೆಯ ಸಾಮೂಹಿಕ ಪಠಣ ಕಾರ್ಯಕ್ರಮದ ತಾಣದಲ್ಲಿ ಇಬ್ಬರು ವ್ಯಾಪಾರಿಗಳ ಮೇಲಿನ ಹಲ್ಲೆ ಘಟನೆಯನ್ನು ಮಮತಾ ಖಂಡಿಸಿದ್ದು, 'ರಾಜ್ಯದಲ್ಲಿ ಇಂತಹ ಬೆದರಿಕೆ ಕೃತ್ಯಗಳನ್ನು ಸಹಿಸೆವು' ಎಂದಿದ್ದಾರೆ.

'ವ್ಯಾಪಾರಿಗಳ ಮೇಲೆ ಹಲ್ಲೆ ನಡೆಸಿದ ಎಲ್ಲ ಆರೋಪಿಗಳನ್ನು ಬಂಧಿಸಲಾಗಿದೆ. ಇದು ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಅಲ್ಲ' ಎಂದು ಹೇಳಿದರು. ಭಗವದ್ಗೀತೆ ಪಠಣ ಕಾರ್ಯಕ್ರಮ ಡಿಸೆಂಬರ್ 7ರಂದು ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದಿತ್ತು. ಈ ತಾಣದಲ್ಲಿ ಮಾಂಸಾಹಾರಿ ಖಾದ್ಯ ಮಾರಾಟಕ್ಕೆ ಬಂದಿದ್ದ ಇಬ್ಬರು ವ್ಯಾಪಾರಿಗಳ ಮೇಲೆ ಗುಂಪೊಂದು ಹಲ್ಲೆ ನಡೆಸಿತ್ತು.

'ಆಯೋಗ ಸರ್ಕಾರದ ಕೈಗೊಂಬೆ'

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು 'ಸರ್ಕಾರದ ಕೈಗೊಂಬೆ'ಯಾಗಿದೆ ಎಂದು ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ಅಜಯ್ ಮಾಕನ್ ಗುರುವಾರ ಆರೋಪಿಸಿದರು.

ಮಾಕೆನ್

ಚುನಾವಣಾ ವ್ಯವಸ್ಥೆ ಸುಧಾರಣೆ ಕುರಿತು ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, 'ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆ ಇಲ್ಲದಿದ್ದರೆ ಪ್ರಜಾಪ್ರಭುತ್ವವು ಹೇಗೆ ಉಳಿಯುತ್ತದೆ' ಎಂದು ಪ್ರಶ್ನಿಸಿದರು.

ಜನರ 'ವಿಶ್ವಾಸ' ಗಳಿಸುವುದು ಚುನಾವಣಾ ಆಯೋಗ ಮಾಡಬೇಕಿರುವ ಕೆಲಸ. ಆದರೆ ಇಂದು ಅದು ಜನರಲ್ಲಿ 'ಅನುಮಾನ' ಹುಟ್ಟುಹಾಕುವ ಕೆಲಸದಲ್ಲಿ ನಿರತವಾಗಿದೆ ಎಂದು ಟೀಕಿಸಿದರು.

ಹರಿಯಾಣ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಳ್ಳುವುದಕ್ಕಿಂತ ಎರಡು ದಿನ ಮುನ್ನ ಬಿಡುಗಡೆ ಮಾಡಿದ ಮತದಾನದ ಅಂಕಿ–ಅಂಶ ಮತ್ತು ಫಲಿತಾಂಶದ ದಿನ ಬಿಡುಗಡೆ ಮಾಡಿದ ಮತದಾನದ ಅಂಕಿ–ಅಂಶದಲ್ಲಿ ವ್ಯತ್ಯಾಸ ಕಂಡುಬಂದಿದೆ ಎಂಬುದನ್ನು ವಿವರಿಸಿದ ಅವರು ಇದು ಜನರಲ್ಲಿ ಅನುಮಾನ ಮೂಡುವಂತೆ ಮಾಡಿದೆ ಎಂದರು.

ಹೆಚ್ಚುವರಿ ಮತಗಳು ಎಲ್ಲಿಂದ ಬಂದವು ಮತ್ತು ಪ್ರತಿ ಬೂತ್‌ನಲ್ಲಿ ದಾಖಲಾದ ಮತಗಳ ಬಗ್ಗೆ ಮಾಹಿತಿ ಕೇಳಿದಾಗ ಅಯೋಗದ ಅಧಿಕಾರಿಗಳು ಮೌನ ವಹಿಸಿದ್ದಾರೆ ಎಂದು ದೂರಿದರು.

ಕರ್ನಾಟಕದ ಆಳಂದ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಕಳವು ಪ್ರಕರಣದ ತನಿಖೆ ನಡೆಸುತ್ತಿರುವ ತನಿಖಾ ತಂಡದವರು ಕೇಳಿದ ಮಾಹಿತಿಯನ್ನು ಕೂಡಾ ಆಯೋಗವು ಒದಗಿಸುತ್ತಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್ ತನ್ನ ಅನುಮಾನಗಳನ್ನು ಪರಿಹರಿಸಲು ಲಭ್ಯವಿರುವ ಮಾರ್ಗಗಳನ್ನು ಬಳಸಿಕೊಳ್ಳುವ ಬದಲು ಗೊಂದಲ ಸೃಷ್ಟಿಸುತ್ತಿದೆ
ಸುಧಾಂಶು ತ್ರಿವೇದಿ
ಬಿಜೆಪಿ ರಾಜ್ಯಸಭಾ ಸದಸ್ಯ

ಇಂದು ಶರಣಾಗಲು ಎಸ್‌ಐಬಿ ಮಾಜಿ ಮುಖ್ಯಸ್ಥಗೆ ಸೂಚನೆ

ನವದೆಹಲಿ(ಪಿಟಿಐ): ತೆಲಂಗಾಣದ ಫೋನ್ ಕದ್ದಾಲಿಕೆ ಪ್ರಕರಣಕ್ಕೆ ಸಂಬಂಧಿಸಿ, ಇದೇ ಶುಕ್ರವಾರ (ಡಿ.12) ಬೆಳಿಗ್ಗೆ 11ರೊಳಗೆ ಪೊಲೀಸರ ಮುಂದೆ ಶರಣಾಗುವಂತೆ ವಿಶೇಷ ಗುಪ್ತಚರ ಬ್ಯೂರೊ (ಎಸ್‌ಐಬಿ) ಮಾಜಿ ಮುಖ್ಯಸ್ಥ ಟಿ.ಪ್ರಭಾಕರ ರಾವ್ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶಿಸಿದೆ.

'ಜುಬಿಲಿ ಹಿಲ್ಸ್ ಪೊಲೀಸ್ ಠಾಣೆಯಲ್ಲಿ, ತನಿಖಾಧಿಕಾರಿ ಮುಂದೆ ಶುಕ್ರವಾರ ಬೆಳಿಗ್ಗೆ 11ರ ಹೊತ್ತಿಗೆ ಅರ್ಜಿದಾರ (ಟಿ.ಪ್ರಭಾಕರ ರಾವ್) ಶರಣಾಗಬೇಕು. ಕಾಯ್ದೆ ಅನುಸಾರವೇ ಅವರನ್ನು ವಿಚಾರಣೆಗೆ ಒಳಪಡಿಸಬೇಕು' ಎಂದು ಹೇಳಿದ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಹಾಗೂ ಆರ್. ಮಹದೇವನ್ ಅವರು ಇದ್ದ ಪೀಠ, ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಿತು. 'ರಾವ್ ಎಸಗಿದ್ದಾರೆ ಎನ್ನಲಾದ ಅಪರಾಧಗಳ ಕುರಿತು ಹೆಚ್ಚಿನ ತನಿಖೆ ಅಗತ್ಯ ಇದೆ. ಹೀಗಾಗಿ, ಈ ಆದೇಶ ಹೊರಡಿಸಲಾಗಿದೆ' ಎಂದು ಪೀಠ ಹೇಳಿದೆ.

ದಾವಣಗೆರೆಯಲ್ಲಿ ಗುರುವಾರ ನಡೆದ ವಲಯ ಮಟ್ಟದ 'ಪ್ರಜಾವಾಣಿ ರಸಪ್ರಶ್ನೆ ಚಾಂಪಿಯನ್‌ಶಿಪ್' ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆಯ ಚಿನ್ಮಯ್ ಕಲಾಲ್ ಹಾಗೂ ಇಶಾನ್ ಎಸ್. ಅವರಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರೇಣುಕಾದೇವಿ ₹5,000 ಮೊತ್ತದ ಚೆಕ್ ಹಾಗೂ ಪ್ರಮಾಣಪತ್ರ ವಿತರಿಸಿದರು. ಶಿಕ್ಷಣ ಇಲಾಖೆಯ ಯೋಜನಾ ಸಂಯೋಜಕ ಕೆ.ಎಸ್. ದೀಪಕ್, ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಇದ್ದಾರೆ —ಪ್ರಜಾವಾಣಿ ಚಿತ್ರ

'ಉಚಿತ ಬಸ್ ಪ್ರಯಾಣ ಕೇಳಿದವರಾರು?'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಬಸ್ ಪ್ರಯಾಣವನ್ನು ಉಚಿತವಾಗಿ ಒದಗಿಸಲು ನಿಮ್ಮನ್ನು ಯಾರು ಕೇಳಿದ್ದರು' ಎಂದು ಹೈಕೋರ್ಟ್, ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲ ಜನೌಷಧ ಕೇಂದ್ರಗಳನ್ನು ನಿಷೇಧಿಸಿ ರಾಜ್ಯ ಆರೋಗ್ಯ ಇಲಾಖೆ ಹೊರಡಿಸಿದ್ದ ಆದೇಶವನ್ನು ಸಾರಾಸಗಟಾಗಿ ರದ್ದುಗೊಳಿಸಿರುವ ಹೈಕೋರ್ಟ್, ಈ ಪ್ರಕರಣಗಳ ವಿಚಾರಣೆ ವೇಳೆ ರಾಜ್ಯ ಸರ್ಕಾರದ ನಿಲುವನ್ನು ಕಟುವಾಗಿ ಖಂಡಿಸಿದೆ.

ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಜನೌಷಧಿ ಕೇಂದ್ರ ಮುಚ್ಚಬೇಕೆಂಬ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಹಾವೇರಿ ಜಿಲ್ಲೆ ಕುಸನೂರಿನ ಎಂ.ರಾಕೇಶ್ ಸೇರಿದಂತೆ ಒಟ್ಟು 34 ಜನರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಮಹತ್ವದ ಆದೇಶ ನೀಡಿದೆ.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಜೆ.ಎಂ.ಗಂಗಾಧರ ಅವರು, 'ರಾಜ್ಯ ಸರ್ಕಾರದ ನೀತಿಗಳು ಜನಪರವಾಗಿಯೇ ಇವೆ. ಜನೌಷಧಿ ಕೇಂದ್ರಗಳು ಸಬ್ಸಿಡಿ ದರದಲ್ಲಿ ಔಷಧಿ ವಿತರಿಸಿದರೆ ರಾಜ್ಯ ಸರ್ಕಾರ ಸಂಪೂರ್ಣ ಪುಕ್ಕಟೆಯಾಗಿ ಔಷಧಿಗಳನ್ನು ಪೂರೈಸುತ್ತಿದೆ' ಎಂದರು.

ಇದನ್ನು ಆಕ್ಷೇಪಿಸಿದ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಅನಿರುದ್ಧ ಎ.ಕುಲಕರ್ಣಿ, ಸರ್ಕಾರದ ನೀತಿ ಹೇಗೆ ಜನವಿರೋಧಿ ನಿಲುವಿನಿಂದ ಕೂಡಿದೆ ಎಂದರು.

ಒಂದು ಹಂತದಲ್ಲಿ ಸರ್ಕಾರದ ಸಮರ್ಥನೆಯನ್ನು ತಳ್ಳಿಹಾಕಿದ ನ್ಯಾಯಪೀಠ, 'ಕೇಂದ್ರ ಸರ್ಕಾರವೂ ಜನರ ಕಲ್ಯಾಣಕ್ಕಾಗಿಯೇ ಅಲ್ಲವೇ ಜನೌಷಧಿ ಯೋಜನೆ ಜಾರಿಗೆ ತಂದಿರುವುದು?, ಜನೌಷಧಿ ಕೇಂದ್ರಗಳನ್ನು ತೆರವುಗೊಳಿಸಬೇಕು ಎಂದು ಯಾರಾದರೂ ನಿಮಗೆ ದೂರು ಕೊಟ್ಟಿದ್ದರಾ? ಇಲ್ಲವಲ್ಲಾ? ಹಾಗೆಯೇ, ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕೊಡಿ ಎಂದು ಯಾರಾದರೂ ಕೇಳಿದ್ದರಾ? ಇಲ್ಲವಲ್ಲಾ?... ಎಂದು ಪ್ರಶ್ನಿಸಿತು.

'ಕ್ಯಾನ್ಸರ್‌ನಂತಹ ಔಷಧಗಳು ದುಬಾರಿ ಎಂಬುದಕ್ಕಾಗಿ ಸಬ್ಸಿಡಿ ನೀಡಲಾಗುತ್ತಿದೆ. ಇವೆಲ್ಲಾ ಜನಕಲ್ಯಾಣ ಕಾರ್ಯಕ್ರಮ. ಅದನ್ನು ರಾಜ್ಯವೇ ಮಾಡಲಿ ಕೇಂದ್ರವೇ ಮಾಡಲಿ ಅದರಲ್ಲಿ ಸಣ್ಣತನ ಸಲ್ಲದು. ನೀವು ಶಿಕ್ಷಣ, ಔಷಧಗಳನ್ನು ಉಚಿತವಾಗಿ ನೀಡಬೇಕಿತ್ತು. ಅದು ಬಿಟ್ಟು ಬಸ್ ಫ್ರೀ... ಅದು ಫ್ರೀ, ಇದು ಫ್ರೀ ಎಂದು ಎಲ್ಲವನ್ನೂ ಫ್ರೀ ಮಾಡುವ ಯೋಚನೆ ಹೊಂದಿದ್ದೀರಿ' ಎಂದು ಕುಟುಕಿತು.

ಸರ್ಕಾರಿ ನೌಕರರಿಗೆ ಸಂಬಳ ಕೊಡಲು ರಾಜ್ಯದ ಬಳಿ ದುಡ್ಡಿಲ್ಲದಂತಾಗಿದೆ. ಕೇಂದ್ರ ಸರ್ಕಾರದ ಜನಕಲ್ಯಾಣ ಕಾರ್ಯಕ್ರಮದಲ್ಲಿ ರಾಜಕೀಯ ಮಾಡಲು ಬಯಸುತ್ತಿದ್ದೀರಾ. ಜನರ ಹಿತ ಕಾಪಾಡುವ ಕಡೆ ಗಮನ ಕೊಡಿ
ನ್ಯಾಯಮೂರ್ತಿ ಎಂ.ನಾಗಪ್ರಸನ್ನ

ನಿಧನ ವಾರ್ತೆ

ಚನ್ನಬಸವ ಸ್ವಾಮೀಜಿ

ವಿಜಯಪುರ: ಬಸವನಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರದ ವಚನ ಶಿಲಾಮಂಟಪದ ಸ್ಥಾಪಕರಾಗಿದ್ದ ಚನ್ನಬಸವ ಸ್ವಾಮೀಜಿ (94) ಗುರುವಾರ ಶ್ರೀಮಠದಲ್ಲಿ ನಿಧನರಾದರು.

ಸ್ವಾಮೀಜಿಯವರ ಅಂತಿಮ ಧಾರ್ಮಿಕ ವಿಧಿ ವಿಧಾನವು ಶುಕ್ರವಾರ (ಡಿ. 12) ನೆರವೇರಲಿದ್ದು, ಮಧ್ಯಾಹ್ನ 2 ಗಂಟೆಗೆ ವಚನಶಿಲಾ ಮಂಟಪದಲ್ಲಿ ಕ್ರಿಯಾ ಸಮಾಧಿ ಮಾಡಲಾಗುವುದು ಎಂದು ಬಸವನಬಾಗೇವಾಡಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ತಿಳಿಸಿದ್ದಾರೆ.

ವಚನಶಿಲಾ ಮಂಟಪದ ಸ್ಥಾಪಕ: ಬಸವಣ್ಣನವರ ತಾಯಿ ತವರೂರು ಇಂಗಳೇಶ್ವರ ಗ್ರಾಮದ ವಿರಕ್ತಮಠದಲ್ಲಿ ಚನ್ನಬಸವ ಸ್ವಾಮೀಜಿಯವರು ವಚನ ಶಿಲಾಮಂಟಪ ನಿರ್ಮಿಸಿದ್ದಾರೆ. ಕಲ್ಲಿನಲ್ಲಿ ಬರೆದ ವಚನಗಳು ಶಾಶ್ವತವಾಗಿ ಉಳಿದು, ಓದಲು ಸಾಧ್ಯವಾಗುವಂತೆ ಮಾಡಿದ್ದಾರೆ. ಬಸವಣ್ಣನವರ 1,300 ವಚನಗಳು ಸೇರಿ 1,700ಕ್ಕೂ ಅಧಿಕ ಬಸವಾದಿ ಶರಣರ ವಚನಗಳನ್ನು ಶಿಲೆಗಳಲ್ಲಿ ಕೆತ್ತಿಸಿದ್ದಾರೆ. ಚನ್ನಬಸವ ಸ್ವಾಮೀಜಿ ಅವರು ಜೋಳಿಗೆ ಹಿಡಿದು ನಾಡಿನಾದ್ಯಂತ ಪಾದಯಾತ್ರೆ ಮೂಲಕ ಸಂಚರಿಸಿ, ಸಂಗ್ರಹವಾದ ಹಣದಲ್ಲಿ ಈ ಮಹತ್ಕಾರ್ಯ ನೆರವೇರಿಸಿದ್ದಾರೆ. ಇದು ಗಿನ್ನಿಸ್ ದಾಖಲೆಗೆ ಸೇರ್ಪಡೆಯಾಗಿದೆ.

ಮುಂಡಗೋಡಿಗೆ ದಲೈಲಾಮಾ ಇಂದು

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ಟಿಬೆಟಿಯನ್ನರ ಧಾರ್ಮಿಕ ನಾಯಕ ದಲೈಲಾಮಾ ಶುಕ್ರವಾರ (ಡಿ.12) ಬೆಳಿಗ್ಗೆ 11ಗಂಟೆಗೆ ತಾಲ್ಲೂಕಿಗೆ ಭೇಟಿ ನೀಡುವರು. ಸುಮಾರು 45 ದಿನ ಟಿಬೆಟಿಯನ್ನರ ಕ್ಯಾಂಪ್‌ನಲ್ಲಿ ವಾಸವಿದ್ದು, ವಿಶ್ರಾಂತಿ ಪಡೆಯುವರು.

'ಹುಬ್ಬಳ್ಳಿಯಿಂದ ತಡಸ ಮಾರ್ಗವಾಗಿ ದಲೈಲಾಮಾ ಅವರು ಟಿಬೆಟನ್ ಕ್ಯಾಂಪ್‌ಗೆ ಬರುವರು. ಅವರನ್ನು ಭೇಟಿಯಾಗಲು ಬಯಸುವವರು ಮುಂಚಿತವಾಗಿ ಸಂಘಟಕರಿಂದ ಅನುಮತಿ ಪಡೆದಿರಬೇಕು. ಅನುಮತಿಯಿಲ್ಲದೇ ಯಾರನ್ನೂ ಒಳಗಡೆ ಬಿಡುವುದಿಲ್ಲ. ಬೆಳಿಗ್ಗೆ 8 ರಿಂದ 10ರವರೆಗೆ ಮಾತ್ರ ಸಂದರ್ಶಕರು ಭೇಟಿಯಾಗಬಹುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ಸುದ್ದಿಗಾರರಿಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

19 ಮಂದಿಗೆ ಸಮನ್ಸ್ ಜಾರಿ

ಹೆತ್ತೂರು (ಹಾಸನ ಜಿಲ್ಲೆ): ಸಕಲೇಶಪುರ ತಾಲ್ಲೂಕಿನ ಯಸಳೂರು ಹೋಬಳಿಯ ದಬ್ಬಳಿಕಟ್ಟೆಯಲ್ಲಿ ಕಾಡಾನೆಯನ್ನು ಹಿಡಿಯುವ ಕಾರ್ಯಾಚರಣೆ ವೇಳೆ ಮೃತಪಟ್ಟ ಸಾಕಾನೆ ಅರ್ಜುನನ ಸಮಾಧಿ ಸ್ಥಳದ ಕುರಿತು 2023 ಡಿಸೆಂಬರ್ 5ರಂದು ನಡೆದಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡ 19 ಮಂದಿಗೆ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

ಪರಿಸರ ಪ್ರೇಮಿ ಹುರುಡಿ ವಿಕ್ರಂ, ಕೆಪಿಸಿಸಿ ಸದಸ್ಯ ಯಡೇಹಳ್ಳಿ ಮಂಜುನಾಥ್, ಉದಯ, ನವೀನ, ನಾಗರಾಜು, ಶೋಧನ್, ರವಿ, ಆಕಾಶ, ರತನ್, ಕಿರಣ್, ಆನಂದ, ದೇವರಾಜು, ತ್ರಿವೇಣಿಗೌಡ, ಜಯಪ್ಪ, ಸಂತೋಷ, ಸಚಿನ್, ಜಗದೀಶ, ಮನು, ಮಿಥುನ್ ಸೇರಿ 19 ಮಂದಿಗೆ ಡಿ. 30 ರಂದು ಹಾಜರಾಗುವಂತೆ ಸಮನ್ಸ್ ಜಾರಿ ಮಾಡಲಾಗಿದೆ.

2023 ರ ಡಿಸೆಂಬರ್ 4 ರಂದು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಸಾಕಾನೆ ಅರ್ಜುನ ಮೃತಪಟ್ಟ ಮಾರನೇ ದಿನ ಅಂತ್ಯಸಂಸ್ಕಾರದ ವೇಳೆ, 'ಮೀಸಲು ಅರಣ್ಯದಲ್ಲಿ ಅಂತ್ಯಸಂಸ್ಕಾರ ಮಾಡಬಾರದು, ಬೇರೆಡೆ ಮಾಡಿ ಪ್ರತಿಮೆ ನಿರ್ಮಿಸಬೇಕು' ಎಂದು ಕೆಲವರು ಆಗ್ರಹಿಸಿ ಪ್ರತಿಭಟಿಸಿದ್ದರು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರವನ್ನೂ ನಡೆಸಿದ್ದರು.

'ಅರ್ಜುನನನ್ನು ಹೂಳಲು ಗುಂಡಿ ತೆಗೆಯುತ್ತಿದ್ದ ಜೆಸಿಬಿ ತಡೆದಿದ್ದಲ್ಲದೇ ಕರ್ತವ್ಯಕ್ಕೂ ಅಡ್ಡಿಪಡಿಸಿದ್ದಾರೆ' ಎಂದು ಪೊಲೀಸ್ ಕಾನ್‌ಸ್ಟೆಬಲ್ ಗಿರೀಶ್ ಬಿ.ಎಂ. ಎಂಬವರು ಪ್ರತಿಭಟನೆಯ ದಿನವೇ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಾಗಿತ್ತು.

ಕಣ್ಣಿಗೆ ಬಟ್ಟೆ ಕಟ್ಟಿ ಪರೀಕ್ಷೆ ಬರೆದ 'ಗಾಂಧಾರಿ ವಿದ್ಯೆ' ವಿದ್ಯಾರ್ಥಿನಿ

ಬಳ್ಳಾರಿ: ಇಲ್ಲಿನ ಖಾಸಗಿ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಹಿಮಾಬಿಂಧು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು 'ಗಾಂಧಾರಿ ವಿದ್ಯೆ' ನೆರವಿನಿಂದ ಪರೀಕ್ಷೆ ಬರೆಯುತ್ತಾಳೆ.

ನಗರದ ಕೋರ್ಲಗೊಂದಿ ನಿವಾಸಿಯಾದ ಆಕೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬರೆಯುತ್ತಾಳೆ, ವಸ್ತುಗಳನ್ನೂ ಗುರುತಿಸುತ್ತಾಳೆ. 'ಹಿಮಾ 11ನೇ ವಯಸ್ಸಿನಲ್ಲೇ ಗಾಂಧಾರಿ ವಿದ್ಯೆ ಕಲಿತಿದ್ದು, ಈಗ ಅದರ ಎರಡನೇ ಹಂತ ಕಲಿಯುತ್ತಿದ್ದಾಳೆ. ಈ ಹಿಂದೆಯೂ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಸೈಕಲ್ ಕೂಡ ಚಲಾಯಿಸಿದ್ದಳು' ಎಂದು ತಂದೆ ರಾಮಾಂಜಿನಿ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ವಿದ್ಯೆಯ ಮೊದಲ ಹಂತದಲ್ಲಿ ವ್ಯಕ್ತಿಯು ಕಣ್ಣುಗಳನ್ನು ಮುಚ್ಚಿಕೊಂಡೇ ತನ್ನ ಮುಂದಿನ ವಸ್ತುಗಳನ್ನು ಗುರುತಿಸುವುದನ್ನು ಕಲಿತರೆ, ಎರಡನೇ ಹಂತದಲ್ಲಿ ಬೆನ್ನ ಹಿಂದೆ ನಡೆಯುವ ವಿಷಯಗಳನ್ನು ಗ್ರಹಿಸುತ್ತಾರೆ. ಮೂರನೇ ಹಂತದಲ್ಲಿ ಅಕ್ಕಪಕ್ಕದ ಸಂಗತಿಗಳು ಗೊತ್ತಾಗುತ್ತವೆ' ಎಂದರು.

'ಚಿಕ್ಕಮಗಳೂರಿನ ಸತೀಶ್ ಪದ್ಮನಾಭ ಅವರಿಂದ 3 ವರ್ಷಗಳ ಹಿಂದೆ ಆನ್‌ಲೈನ್‌ನಲ್ಲಿ ಹಿಮಾ 20 ದಿನಗಳ ಅವಧಿಯಲ್ಲಿ ಈ ವಿದ್ಯೆ ಕಲಿತಿದ್ದಳು. 6 ರಿಂದ 18 ವರ್ಷದ ಮಕ್ಕಳು ಇದನ್ನು ಕಲಿಯಬಹುದು. ಇದರಿಂದ ಮಕ್ಕಳ ಆಲೋಚನೆ, ಆತ್ಮವಿಶ್ವಾಸ, ಏಕಾಗ್ರತೆ ಹೆಚ್ಚುತ್ತದೆ' ಎಂದರು.

ಹಿಮಾಬಿಂಧು

ಶಿರೂರು ಪರ್ಯಾಯ 14ಕ್ಕೆ ಧಾನ್ಯ ಮುಹೂರ್ತ

ಉಡುಪಿ: ಶಿರೂರು ಮಠಾಧೀಶ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯವು 2026ರ ಜನವರಿ 18 ರಂದು ನಡೆಯಲಿದ್ದು, ಪರ್ಯಾಯದ ನಾಲ್ಕನೇ ಮುಹೂರ್ತವಾದ 'ಧಾನ್ಯ ಮುಹೂರ್ತ' ಇದೇ 14 ರಂದು ಬೆಳಿಗ್ಗೆ 7.45ಕ್ಕೆ ನಡೆಯಲಿದೆ ಎಂದು ಮಠದ ದಿವಾನ ಉದಯ ಕುಮಾರ್ ಸರಳತ್ತಾಯ ತಿಳಿಸಿದರು.

ವೇದವರ್ಧನ ತೀರ್ಥ ಸ್ವಾಮೀಜಿ

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಪರ್ಯಾಯ ಪೂರ್ವ ಮುಹೂರ್ತಗಳಲ್ಲಿ ಇದು ಕೊನೆಯ ಮುಹೂರ್ತವಾಗಿದೆ ಎಂದರು.

ಅಭ್ಯರ್ಥಿ ಮನೆ ಬಳಿ ಬಾಂಬ್ ಸ್ಫೋಟ

ಕಾಸರಗೋಡು: ಕೇರಳದ ಸ್ಥಳೀಯ ಸಂಸ್ಥೆ ಚುನಾವಣೆಯ ಮತದಾನ ನಡೆದ ಗುರುವಾರ ಕಾಸರಗೋಡು ಜಿಲ್ಲಾ ಪಂಚಾಯಿತಿಯ ಬದಿಯಡ್ಕ ಕ್ಷೇತ್ರದ ಎಡರಂಗ ಅಭ್ಯರ್ಥಿ ಪ್ರಕಾಶ್ ಅವರ ಕಾಡ್ರಬೆಳ್ಳಿಯಲ್ಲಿರುವ ಮನೆ ಬಳಿ ನಾಡ ಬಾಂಬ್ ಸ್ಫೋಟವಾಗಿದೆ.

ಬೆಳಿಗ್ಗೆ 7 ಗಂಟೆಯ ವೇಳೆ ಸ್ಫೋಟದ ಸದ್ದು ಕೇಳಿ ಆತಂಕಗೊಂಡ ಸುತ್ತಮುತ್ತಲ ನಿವಾಸಿಗಳು ಬಂದು ನೋಡಿದಾಗ ನಾಯಿ ಸತ್ತುಬಿದ್ದಿರುವುದು ಕಾಣಿಸಿದೆ. ಸ್ಥಳದಲ್ಲಿ ಪರಿಶೀಲನೆ ನಡೆಸಿದ ಬದಿಯಡ್ಕ ಪೊಲೀಸರು 3 ನಾಡ ಬಾಂಬ್ ಪತ್ತೆ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿವಿಧ ಬೇಡಿಕೆಗಳ ಈಡೇರಿಕೆಗೂ ರೈತ ಮುಖಂಡರ ಒತ್ತಾಯ

ಕಬ್ಬಿಗೆ ದರ: ಕಾಲಾವಕಾಶ ಕೇಳಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಬ್ಬಿಗೆ ಸಕ್ಕರೆ ಕಾರ್ಖಾನೆಯವರು ₹3,500, ಕೇಂದ್ರ ಮತ್ತು ರಾಜ್ಯ ಸರ್ಕಾರ ತಲಾ ₹1,000 ಸೇರಿಸಿ ಒಟ್ಟು ₹5,500 ದರ ನೀಡಬೇಕು' ಎಂದು ಆಗ್ರಹಿಸಿ ಇಲ್ಲಿನ ರೈತರು ಗುರುವಾರ ಬೃಹತ್ ಪ್ರತಿಭಟನೆ ಮಾಡಿದರು. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತುಸು ಕಾಲಾವಕಾಶ ಕೇಳಿದ್ದರಿಂದ ಪ್ರತಿಭಟನೆ ಹಿಂಪಡೆದರು.

ರಾಜ್ಯದ ವಿವಿಧೆಡೆಯಿಂದ ಬಂದಿದ್ದ ರೈತರು ಸುವರ್ಣ ವಿಧಾನಸೌಧದ ಬಳಿ ಇಡೀ ದಿನ ಪ್ರತಿಭಟಿಸಿದರು. ಸ್ಥಳಕ್ಕೆ ಬಂದು ಮನವಿ ಪಡೆದ ಸಕ್ಕರೆ ಸಚಿವ ಶಿವಾನಂದ ಪಾಟೀಲ, 'ನಿಮ್ಮ ಬೇಡಿಕೆಗಳ ಕುರಿತಾಗಿ ಸಿ.ಎಂ ಸಿದ್ದರಾಮಯ್ಯ ಚರ್ಚಿಸುವರು. ಸೌಧಕ್ಕೆ ಬನ್ನಿ' ಎಂದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆಯ ಅಧ್ಯಕ್ಷ ಚೂನಪ್ಪ ಪೂಜೇರಿ, ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ನೇತೃತ್ವದಲ್ಲಿ ಹಲವು ಮುಖಂಡರು ಮುಖ್ಯಮಂತ್ರಿ ಬಳಿ ಹೋಗಿ, ಚರ್ಚಿಸಿದರು.

'ನಮ್ಮ ಬೇಡಿಕೆಗಳಿಗೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಧಿಕಾರಿಗಳೊಂದಿಗೆ ಚರ್ಚಿಸುವೆ. ಶೀಘ್ರವೇ ಒಂದು ನಿರ್ಧಾರಕ್ಕೆ ಬರುವೆ. ಸ್ವಲ್ಪ ಕಾಲಾವಕಾಶ ಕೊಡಿ ಎಂದು ಕೇಳಿದ್ದಾರೆ' ಎಂದು ಚೂನಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜ್ಯದ ಎಲ್ಲ ಕಾರ್ಖಾನೆಗಳಲ್ಲಿ ಸರ್ಕಾರವೇ ಡಿಜಿಟಲ್ ತೂಕದ ಯಂತ್ರ ಅಳವಡಿಸಬೇಕು. ಬೆಳಗಾವಿಯ ಸಕ್ಕರೆ ಆಯುಕ್ತರ ಕಚೇರಿಗೆ ಮುಖ್ಯಸ್ಥರಾಗಿ ಐಎಎಸ್ ಅಧಿಕಾರಿ ನೇಮಿಸಬೇಕು. ನೀರಾವರಿ ಪಂಪ್‌ಸೆಟ್‌ಗಳಿಗೆ ಹಗಲಿನಲ್ಲೇ 12 ತಾಸು ತ್ರಿಫೇಸ್ ವಿದ್ಯುತ್ ನೀಡಬೇಕು. ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಬೇಕು. ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆಜೋಳ ಖರೀದಿ ಪ್ರಕ್ರಿಯೆಯಲ್ಲಿ ರೈತರಿಗೆ ಆಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸಬೇಕು. ಖರೀದಿಗೆ ನಿಗದಿಪಡಿಸಿರುವ ಮಿತಿ ಪ್ರಮಾಣ ಹೆಚ್ಚಿಸಬೇಕು. ರಾಜ್ಯದಲ್ಲಿ ಹೆಚ್ಚಿನ ರೈತರು ಹೈನುಗಾರಿಕೆ ಅವಲಂಬಿಸಿದ್ದಾರೆ. ಹಾಗಾಗಿ ಹಾಲಿನ ಖರೀದಿ ದರ ಹೆಚ್ಚಿಸಬೇಕೆಂದು ಕೋರಿದ್ದೇವೆ' ಎಂದರು.


ಬೆಳಗಾವಿಯ ಅಲಾರವಾಡ ಸೇತುವೆ ಬಳಿ ರೈತರು ಗುರುವಾರ ಪ್ರತಿಭಟಿಸಿದರು – ಪ್ರಜಾವಾಣಿ ಚಿತ್ರ

ಸೂರ್ಯ ಪಡೆಗೆ ಸೋಲಿನ ಕಹಿ

ಕ್ವಿಂಟನ್ ಡಿ ಕಾಕ್ ಅಬ್ಬರ • ದಕ್ಷಿಣ ಆಫ್ರಿಕಾ ಬೌಲರ್‌ಗಳ ದಾಳಿ • ತಿಲಕ್ ಅರ್ಧಶತಕ

ಮುಲ್ಲನಪುರ(ಪಿಟಿಐ): ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಹತ್ತು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಆದರೆ ಅವರ ಬ್ಯಾಟಿಂಗ್ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಗುರುವಾರ ಇಲ್ಲಿ ನಡೆದ ಟಿ20 ಪಂದ್ಯದಲ್ಲಿ ಭಾರತದ ಎದುರು ಭರ್ಜರಿ ಜಯ ದಾಖಲಿಸಿತು.

ಕ್ವಿಂಟನ್ ಅವರ ಅಬ್ಬರಕ್ಕೆ ಆತಿಥೇಯ ಬೌಲರ್‌ಗಳು ಬಸವಳಿದರು. ಅವರು ಏಳು ಸಿಕ್ಸರ್‌ಗಳನ್ನು ಬಾರಿಸಿದರು. ಅದರಲ್ಲಿ ಬಹುತೇಕ ಎಲ್ಲವೂ ಡೀಪ್ ಸ್ಕ್ವೇರ್ ಲೆಗ್‌ಗೆ ಎತ್ತಿದ್ದ ಸಿಕ್ಸರ್‌ಗಳಾಗಿದ್ದವು. ಒಟ್ಟು 46 ಎಸೆತಗಳಲ್ಲಿ 90 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 213 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡಕ್ಕೆ 19.1 ಓವರ್‌ಗಳಲ್ಲಿ 162 ರನ್ ಗಳಿಸಲಷ್ಟೇ ಸಾಧ್ಯವಾಯಿತು. 51 ರನ್‌ಗಳಿಂದ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಐದು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು. ವೇಗಿ ಲುಂಗಿ ಎನ್‌ಗಿಡಿ (26ಕ್ಕೆ2), ಮಾರ್ಕೊ ಯಾನ್ಸೆನ್ (25ಕ್ಕೆ2), ಲುಥೊ ಸಿಪಾಮ್ಲಾ (46ಕ್ಕೆ2) ಹಾಗೂ ಒಟ್ನಿಲ್ ಬಾರ್ತ್‌ಮನ್ (24ಕ್ಕೆ4) ಅವರ ಬೌಲಿಂಗ್ ದಾಳಿಗೆ ಜಯ ಒಲಿಯಿತು.

ಭಾರತ ತಂಡದ ತಿಲಕ್ ವರ್ಮಾ (62 ರನ್) ಅವರ ಹೋರಾಟವು ತಂಡದ ಗೆಲುವಿಗೆ ಸಾಕಾಗಲಿಲ್ಲ. ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಮತ್ತು ನಾಯಕ ಸೂರ್ಯಕುಮಾರ್ ಯಾದವ್ ಅವರ ವೈಫಲ್ಯ ಈ ಪಂದ್ಯದಲ್ಲಿಯೂ ಮುಂದುವರಿಯಿತು.

ಕ್ವಿಂಟನ್ ಬೀಸಾಟ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯ ಮಿನಿ ಹರಾಜು ಪ್ರಕ್ರಿಯೆಗೆ ಇನ್ನು ಕೆಲವೇ ದಿನಗಳು ಬಾಕಿ ಇವೆ. ಬಿಡ್ ಪಟ್ಟಿಯಲ್ಲಿರುವ ಕ್ವಿಂಟನ್ ಅವರು ಇಲ್ಲಿ ತೋರಿಸಿದ ಆಟವು ಫ್ರಾಂಚೈಸಿಗಳ ಗಮನ ಸೆಳೆದಿರಬಹುದು. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಭಾರತದ ನಿರ್ಧಾರವು ತಪ್ಪು ಎಂದು ಸಾಬೀತು ಮಾಡುವಲ್ಲಿ 32 ವರ್ಷದ ಕ್ವಿಂಟನ್ ಯಶಸ್ವಿಯಾದವರು.

ಸರಣಿಯ ಮೊದಲ ಪಂದ್ಯದಲ್ಲಿ ಕ್ವಿಂಟನ್ ವಿಕೆಟ್ ಪಡೆಯುವಲ್ಲಿ ಎಡಗೈ ವೇಗಿ ಅರ್ಷದೀಪ್ ಸಿಂಗ್ ಯಶಸ್ವಿಯಾಗಿದ್ದರು. ಆದರೆ ಈ ಪಂದ್ಯದಲ್ಲಿ ಅವರು ಬಹಳಷ್ಟು ದಂಡನೆಗೆ ಒಳಗಾದರು.

ಮುಖ್ಯಾಂಶಗಳು

- ಒಂದೇ ಓವರ್‌ನಲ್ಲಿ ಅತಿ ಹೆಚ್ಚು ಎಸೆತ; ಅರ್ಷದೀಪ್ ಅನಪೇಕ್ಷಿತ ದಾಖಲೆ
- ಏಳು ವೈಡ್ ಸೇರಿದಂತೆ 13 ಎಸೆತ ಹಾಕಿದ ವಿಶ್ವದ ಎರಡನೇ ಬೌಲರ್
- ಅಫ್ಗಾನಿಸ್ತಾನದ ನವೀನ್ ಉಲ್ ಹಕ್ ಮೊದಲ ಬೌಲರ್

ಅರ್ಧಶತಕ ದಾಖಲಿಸಿದ ಭಾರತ ತಂಡದ ತಿಲಕ್ ವರ್ಮಾ

ಅರ್ಷದೀಪ್ ಅವರ ಎಸೆತವನ್ನು ಸಿಕ್ಸರ್‌ಗೆ ಎತ್ತುವ ಮೂಲಕ ಕ್ವಿಂಟನ್ ತಮ್ಮ ಬೀಸಾಟಕ್ಕೆ ಚಾಲನೆ ನೀಡಿದರು.

ಜಸ್‌ಪ್ರೀತ್ ಬೂಮ್ರಾ ಕೂಡ ತಮ್ಮ ಎರಡನೇ ಓವರ್‌ನಲ್ಲಿ 16 ರನ್ ಕೊಟ್ಟರು. ಅವರ ಒಂದು ಎಸೆತವನ್ನು ರೀಜಾ ಹೆನ್ರಿಕ್ಸ್ ಸಿಕ್ಸರ್‌ಗೆತ್ತಿದರು. ನಂತರದ ಓವರ್‌ನಲ್ಲಿ ವರುಣ್ ಚಕ್ರವರ್ತಿಯ ಚುರುಕಿನ ವೇಗದ ಎಸೆತದಲ್ಲಿ ರೀಜಾ ಔಟಾದರು. ಆದರೆ ಇನ್ನೊಂದು ಬದಿಯಲ್ಲಿದ್ದ ಕ್ವಿಂಟನ್ ಮಾತ್ರ ತಮ್ಮ ಬಿರುಸಿನ ಆಟ ಮುಂದುವರಿಸಿದ್ದರು. ಅದರಿಂದಾಗಿ ಪವರ್‌ಪ್ಲೇ ಅವಧಿಯಲ್ಲಿ ತಂಡದ ಮೊತ್ತವು 1 ವಿಕೆಟ್‌ಗೆ 53 ರನ್‌ಗಳಾಗಿದ್ದವು.

11ನೇ ಓವರ್‌ನಲ್ಲಿ ಎರಡನೇ ಸ್ಪೆಲ್ ಹಾಕಲು ಬಂದ ಎಡಗೈ ವೇಗಿ ಅರ್ಷದೀಪ್ ಮತ್ತೆ ಕ್ವಿಂಟನ್ ಪ್ರತಾಪಕ್ಕೆ ನಡುಗಿದರು. ಅವರ ಓವರ್‌ನಲ್ಲಿ ಸಿಕ್ಸರ್ ಹೊಡೆದ ಡಿಕಾಕ್ ಅವರು ಅರ್ಷದೀಪ್ ಲಯ ತಪ್ಪಲು ಕಾರಣರಾದರು.

ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್ ಅವರ ಆಟದ ವೈಖರಿ — ಎಎಫ್‌ಪಿ/ಪಿಟಿಐ ಚಿತ್ರಗಳು

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ: 4ಕ್ಕೆ 213 (20 ಓವರ್‌ಗಳಲ್ಲಿ)

ಡಿ ಕಾಕ್ ರನ್‌ಔಟ್ (ಜಿತೇಶ್) 90 (46ಎ, 4x5, 6x7)
ಹೆನ್ರಿಕ್ಸ್ ಬಿ ವರುಣ್ 8 (10ಎ, 6x1)
ಮರ್ಕರಂ ಸಿ ಪಟೇಲ್ ಬಿ ವರುಣ್ 29 (26ಎ, 4x1, 6x2)
ಬ್ರೆವಿಸ್ ಸಿ ತಿಲಕ್ ಬಿ ಪಟೇಲ್ 14 (10ಎ, 4x1, 6x1)
ಡೊನವಾನ್ ಫೆರೀರಾ ಔಟಾಗದೇ 30 (16ಎ, 4x1, 6x3)
ಡೇವಿಡ್ ಮಿಲ್ಲರ್ ಔಟಾಗದೇ 20 (12ಎ, 4x2, 6x1)
ಇತರೆ: 22 (ಬೈ 1, ಲೆಗ್‌ಬೈ 5, ವೈಡ್ 16)
ವಿಕೆಟ್ ಪತನ: 1-38 (ರೀಜಾ ಹೆನ್ರಿಕ್ಸ್, 4.1), 2-121 (ಏಡನ್ ಮರ್ಕರಂ, 11.6), 3-156 (ಕ್ವಿಂಟನ್ ಡಿ ಕಾಕ್, 15.1), 4-160 (ಡೆವಾಲ್ಡ್ ಬ್ರೆವಿಸ್, 16.1)
ಬೌಲಿಂಗ್: ಅರ್ಷದೀಪ್ 4–0–54–0, ಜಸ್‌ಪ್ರೀತ್ ಬೂಮ್ರಾ 4–0–45–0, ವರುಣ್ ಚಕ್ರವರ್ತಿ 4–0–29–2, ಅಕ್ಷರ್ ಪಟೇಲ್ 3–0–27–1, ಹಾರ್ದಿಕ್ ಪಾಂಡ್ಯ 3–0–34–0, ಶಿವಂ ದುಬೆ 2–0–18–0

ಭಾರತ: 162 (19.1 ಓವರ್‌ಗಳಲ್ಲಿ)

ಅಭಿಷೇಕ್ ಸಿ ಡಿಕಾಕ್ ಬಿ ಯಾನ್ಸೆನ್ 17 (8ಎ, 6x2)
ಶುಭಮನ್ ಸಿ ಹೆನ್ರಿಕ್ಸ್ ಬಿ ಎನ್‌ಗಿಡಿ 0 (1ಎ)
ಅಕ್ಷರ್ ಸಿ ಹೆನ್ರಿಕ್ಸ್ ಬಿ ಬಾರ್ತ್‌ಮನ್ 21 (21ಎ, 4x1, 6x1)
ಸೂರ್ಯಕುಮಾರ್ ಸಿ ಡಿಕಾಕ್ ಬಿ ಯಾನ್ಸೆನ್ 5 (4ಎ, 4x1)
ತಿಲಕ್ ಸಿ ಮರ್ಕರಂ ಬಿ ಎನ್‌ಗಿಡಿ 62 (34ಎ, 4x2, 6x5)
ಹಾರ್ದಿಕ್ ಪಾಂಡ್ಯ ಸಿ ಬ್ರೆವಿಸ್ ಬಿ ಸಿಪಾಮ್ಲಾ 20 (23ಎ, 6x1)
ಜಿತೇಶ್ ಸಿ ಬಾರ್ತ್‌ಮನ್ ಬಿ ಸಿಪಾಮ್ಲಾ 27 (17ಎ, 4x2, 6x2)
ಶಿವಂ ಬಿ ಬಾರ್ತ್‌ಮನ್ 1 (2ಎ)
ಅರ್ಷದೀಪ್ ಸಿ ಮಿಲ್ಲರ್ ಬಿ ಬಾರ್ತ್‌ಮನ್ 4 (3ಎ, 4x1)
ವರುಣ್ ಸಿ ಮರ್ಕರಂ ಬಿ ಬಾರ್ತ್‌ಮನ್ 0 (2ಎ)
ಜಸ್‌ಪ್ರೀತ್ ಬೂಮ್ರಾ ಔಟಾಗದೇ 0 (0)
ಇತರೆ: 5 (ಬೈ 3, ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1-9 (ಶುಭಮನ್ ಗಿಲ್, 0.5), 2-19 (ಅಭಿಷೇಕ್ ಶರ್ಮಾ, 1.6), 3-32 (ಸೂರ್ಯಕುಮಾರ್ ಯಾದವ್, 3.5), 4-67 (ಅಕ್ಷರ್ ಪಟೇಲ್, 7.3), 5-118 (ಹಾರ್ದಿಕ್ ಪಾಂಡ್ಯ, 14.2), 6-157 (ಜಿತೇಶ್ ಶರ್ಮಾ, 17.5), 7-158 (ಶಿವಂ ದುಬೆ, 18.1), 8-162 (ಅರ್ಷದೀಪ್ ಸಿಂಗ್, 18.4), 9-162 (ವರುಣ್ ಚಕ್ರವರ್ತಿ, 18.6), 10-162 (ತಿಲಕ್ ವರ್ಮಾ, 19.1)
ಬೌಲಿಂಗ್: ಲುಂಗಿ ಎನ್‌ಗಿಡಿ 3.1–0–26–2, ಮಾರ್ಕೊ ಯಾನ್ಸೆನ್ 4–0–25–2, ಲುಥೊ ಸಿಪಾಮ್ಲಾ 4–0–46–2, ಡೊನವಾನ್ ಫೆರೀರಾ 1–0–14–0, ಒಟ್ನಿಲ್ ಬಾರ್ತ್‌ಮನ್ 4–0–24–4, ಜಾರ್ಜ್ ಲಿಂಡೆ 3–0–23–0
ಪಂದ್ಯದ ಆಟಗಾರ: ಕ್ವಿಂಟನ್ ಡಿಕಾಕ್

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 51 ರನ್‌ಗಳ ಜಯ, ಸರಣಿ 1–1 ಸಮ

ಸಿಂಗ್ ಅದೊಂದೇ ಓವರ್ ನಲ್ಲಿ ಏಳು ವೈಡ್‌ಗಳನ್ನು ಹಾಕಿದರು. ಆ ಓವರ್‌ನಲ್ಲಿ ಒಟ್ಟು 18 ರನ್ ಕೊಟ್ಟರು.

ಶತಕದತ್ತ ಸಾಗಿದ್ದ ಕ್ವಿಂಟನ್ ಒಂಟಿ ರನ್ ಗಳಿಸುವ ಧಾವಂತದಲ್ಲಿ ರನ್ ಔಟ್ ಆದರು. ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರ ಚುರುಕಿನ ಫೀಲ್ಡಿಂಗ್‌ನಿಂದಾಗಿ ಕ್ವಿಂಟನ್ ನಿರ್ಗಮಿಸಿದರು. ಬೂಮ್ರಾ ಅವರು ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿಯೂ 18 ರನ್ ಕೊಟ್ಟರು. ಅವರ ಎಸೆತಗಳಲ್ಲಿ ಫೆರೀರಾ ಅವರು ಎರಡು ಸಿಕ್ಸರ್ ಸಿಡಿಸಿದರು. ಇನಿಂಗ್ಸ್‌ನ ಕೊನೆಯ 10 ಓವರ್‌ಗಳಲ್ಲಿ 123 ರನ್‌ಗಳು ಪ್ರವಾಸಿ ಬಳಗದ ಖಾತೆ ಸೇರಿದವು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ನಡೆಸಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದ ನಂತರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯ ನಡೆಸಲು ಹೇರಿದ್ದ ನಿರ್ಬಂಧವನ್ನು ವಾಪಸ್ ಪಡೆದು, ಐಪಿಎಲ್ ಪಂದ್ಯಗಳನ್ನು ನಡೆಸುವುದಕ್ಕೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಗುರುವಾರ ಇಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದಿದ್ದು, ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾಲ್ತುಳಿತದಲ್ಲಿ 11 ಜನ ಅಸುನೀಗಿದ ನಂತರ ರಾಜ್ಯ ಸರ್ಕಾರವು ಜನಸಂದಣಿ ನಿಯಂತ್ರಣ ಕಾಯ್ದೆಯನ್ನು ರೂಪಿಸಿತ್ತು. ಜತೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ನಡೆಸಲು ನಿರ್ಬಂಧ ಹೇರಿತ್ತು. ಈಗ ಈ ಕಾಯ್ದೆಯ ನಿಯಮಗಳಿಗೆ ಒಳಪಟ್ಟು ಕ್ರಿಕೆಟ್ ಪಂದ್ಯಗಳನ್ನು ನಡೆಸಲು ಒಪ್ಪಿಗೆ ನೀಡಿದೆ.

ಕಾಲ್ತುಳಿತ ಪ್ರಕರಣದ ತನಿಖೆ ನಡೆಸಿದ್ದ ನ್ಯಾಯಮೂರ್ತಿ ಮೈಕಲ್ ಡಿ ಕುನ್ಹ ಆಯೋಗದ ವರದಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ಮತ್ತು ಅದರಂತೆ ಕ್ರಮ ತೆಗೆದುಕೊಳ್ಳುವ ಹೊಣೆಗಾರಿಕೆಯನ್ನು ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಸಚಿವ ಸಂಪುಟವು ನೀಡಿದೆ.

ಮನವಿ ಸಲ್ಲಿಸಿದ್ದ ಕೆಎಸ್‌ಸಿಎ: ಕೆಎಸ್‌ಸಿಎ ನೂತನ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ, ಪಂದ್ಯ ನಡೆಸಲು ಅವಕಾಶ ನೀಡುವಂತೆ ಕೋರಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುವುದು ಕರ್ನಾಟಕ ಮತ್ತು ಬೆಂಗಳೂರಿನ ಗೌರವದ ವಿಚಾರ. ಕೆಎಸ್‌ಸಿಎ ಮನವಿಯನ್ನು ಪರಿಶೀಲಿಸಿ, ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಡಿ.ಕೆ.ಶಿವಕುಮಾರ್ ಅವರು ಹೇಳಿದ್ದರು.

ಅಥರ್ವ ನವರಂಗೆ, ತನಿಷ್ಕಾ ಕಾಲಭೈರವ

ಟಿಟಿ: ಅಥರ್ವ, ತನಿಷ್ಕಾಗೆ ಕಂಚು

ಬೆಂಗಳೂರು: ಕರ್ನಾಟಕದ ಅಥರ್ವ ನವರಂಗೆ ಮತ್ತು ತನಿಷ್ಕಾ ಕಾಲಭೈರವ ಅವರು ರಾಂಚಿಯಲ್ಲಿ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 17 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗೆದ್ದರು.

15 ವರ್ಷದ ಅಥರ್ವ ಸೆಮಿಫೈನಲ್‌ನಲ್ಲಿ 1-3ರಿಂದ ಒಡಿಶಾದ ಸಾರ್ಥಕ್ ಅವರಿಗೆ ಮಣಿದು, ಕಂಚಿನ ಪದಕದೊಂದಿಗೆ ಅಭಿಯಾನ ಮುಗಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಅಥರ್ವ 3-1ರಿಂದ ರೈಲ್ವೆಯ ರೊನಾಲ್ಡ್ ಶಂಕರ್ ಅವರನ್ನು ಮಣಿಸಿದ್ದರು.

14 ವರ್ಷದ ತನಿಷ್ಕಾ ನಾಲ್ಕರ ಘಟ್ಟದ ಪಂದ್ಯದಲ್ಲಿ 1-3 ರಿಂದ ಪಶ್ಚಿಮ ಬಂಗಾಳದ ಸಿಂಡ್ರೆಲಾ ವಿರುದ್ಧ ಸೋತು, ಕಂಚಿನ ಪದಕ ತಮ್ಮದಾಗಿಸಿಕೊಂಡರು. ಕ್ವಾರ್ಟರ್ ಫೈನಲ್‌ನಲ್ಲಿ ತನಿಷ್ಕಾ 3–1ರಿಂದ ಪಶ್ಚಿಮ ಬಂಗಾಳದ ಮತ್ತೊಬ್ಬ ಅಂಕೋಲಿಕಾ ಚಕ್ರವರ್ತಿ ಅವರನ್ನು ಸೋಲಿಸಿದ್ದರು.

ಏಷ್ಯನ್ ಟೀಮ್ ಚಾಂಪಿಯನ್‌ಷಿಪ್ ಭಾರತ ತಂಡದಲ್ಲಿ ಸಿಂಧು, ಲಕ್ಷ್ಯ ಸೇನ್

ನವದೆಹಲಿ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಮುಂದಿನ ವರ್ಷ ನಡೆಯಲಿರುವ ಏಷ್ಯನ್ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಚೀನಾದ ಕಿಂಗ್‌ದಾವೊನಲ್ಲಿ ಫೆಬ್ರುವರಿ 3 ರಿಂದ 8ರವರೆಗೆ ಟೂರ್ನಿ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ ತಂಡವು ಈ ಬಾರಿಯೂ ಗೆಲುವಿನ ಓಟ ಮುಂದುವರಿಸುವ ವಿಶ್ವಾಸದಲ್ಲಿದೆ. ಈ ತಂಡದಲ್ಲಿ ಪುರುಷರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಆಡಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ, ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್, ಎಚ್.ಎಸ್. ಪ್ರಣಯ್ ಇದ್ದಾರೆ. ಕರ್ನಾಟಕದ ಆಯುಷ್ ಶೆಟ್ಟಿ ಕೂಡ ತಂಡದಲ್ಲಿದ್ದಾರೆ. ಲಕ್ಷ್ಯ ಸೇನ್ ಅವರು 13ನೇ ರ‍್ಯಾಂಕ್‌ನಲ್ಲಿದ್ದಾರೆ. ಅವರೊಂದಿಗೆ ಯುವ ಆಟಗಾರರೂ ಸ್ಥಾನ ಗಿಟ್ಟಿಸಿದ್ದಾರೆ. ಮಹಿಳೆಯರಲ್ಲಿ ಸಿಂಧು ಅವರೊಂದಿಗೆ ಬಹುತೇಕ ಉದಯೋನ್ಮುಖ ಆಟಗಾರ್ತಿಯರು ಸ್ಥಾನ ಪಡೆದಿದ್ದಾರೆ.

‘ರ‍್ಯಾಂಕಿಂಗ್, ಅನುಭವ ಮತ್ತು ಸಾಧನೆಗಳನ್ನು ಪರಾಮರ್ಶಿಸಿದ ನಂತರ ಆಟಗಾರರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ಮಾಜಿ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಯನ್ ಸಿಂಧು ಅವರು ಮಹಿಳಾ ತಂಡವನ್ನು ಮುನ್ನಡೆಸುವರು’ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಪ್ರಕಟಣೆಯಲ್ಲಿ ತಿಳಿಸಿದೆ.

ಪಿ.ವಿ. ಸಿಂಧು

ತಂಡಗಳು: ಪುರುಷರು: ಲಕ್ಷ್ಯ ಸೇನ್, ಆಯುಷ್ ಶೆಟ್ಟಿ, ಕಿದಂಬಿ ಶ್ರೀಕಾಂತ್, ಎಚ್.ಎಸ್. ಪ್ರಣಯ್, ತರುಣ್ ಮನ್ನೆಪಲ್ಲಿ, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ, ಪೃಥ್ವಿ ಕೃಷ್ಣಮೂರ್ತಿ ರಾಯ್, ಸಾಯಿ ಪ್ರತೀಕ್ ಕೆ. ಹರಿಹರನ್ ಅಮೃತಕರುಣನ್.

ಮಹಿಳೆಯರು: ಪಿ.ವಿ. ಸಿಂಧು, ಉನ್ನತಿ ಹೂಡಾ, ತನ್ವಿ ಶರ್ಮಾ, ರಕ್ಷಿತಾಶ್ರೀ ಸಂತೋಷ್ ರಾಮರಾಜ್, ಮಾಳವಿಕಾ ಬನ್ಸೋಡ್, ತ್ರಿಶಾ ಜೋಳಿ, ಗಾಯತ್ರಿ ಗೋಪಿಚಂದ್, ಪ್ರಿಯಾ ಕಾಂಜೆಂಗ್‌ಬಾಮ್ ಶ್ರುತಿ ಮಿಶ್ರಾ, ತನಿಷಾ ಕ್ರಾಸ್ಟೊ.

19 ವರ್ಷದೊಳಗಿನವರ ಏಷ್ಯಾ ಕಪ್ ಇಂದಿನಿಂದ: ಭಾರತಕ್ಕೆ ಯುಎಇ ಸವಾಲು

ಆಯುಷ್, ವೈಭವ್ ಮೇಲೆ ಚಿತ್ತ

ದುಬೈ (ಪಿಟಿಐ): ಚಿಗುರುಮೀಸೆಯ ಹುಡುಗ ಆಯುಷ್ ಮ್ಹಾತ್ರೆ ಅವರು 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತದ ಯುವ ತಂಡವನ್ನು ಮುನ್ನಡೆಸಲಿದ್ದಾರೆ. 14ರ ಪೋರ ವೈಭವ್ ಸೂರ್ಯವಂಶಿ ಈ ತಂಡದ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಶುಕ್ರವಾರದಿಂದ ಆರಂಭವಾಗಲಿರುವ ಈ ಟೂರ್ನಿಯಲ್ಲಿ ಆಡಲಿರುವ ಪಾಕಿಸ್ತಾನ ತಂಡದ ಆಟಗಾರರೊಂದಿಗೆ ಭಾರತ ತಂಡದವರು ಹಸ್ತಲಾಘವ ಮಾಡುವರೇ ಎಂಬ ಕುತೂಹಲ ಕೂಡ ಗರಿಗೆದರಿದೆ.

ಮುಂಬೈ ತಂಡದಲ್ಲಿ ಆಡುವ ಆಯುಷ್ ನಾಯಕತ್ವದ ಭಾರತ ತಂಡವು ಉದ್ಘಾಟನೆ ಪಂದ್ಯದಲ್ಲಿ ಆತಿಥೇಯ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತಂಡವನ್ನು ಎದುರಿಸಲಿದೆ. ಭಾನುವಾರ ಪಾಕಿಸ್ತಾನದ ಎದುರು ಕಣಕ್ಕಿಳಿಯಲಿದೆ. ಈಚೆಗೆ ಸೀನಿಯರ್ ಏಷ್ಯಾ ಕಪ್ ಟೂರ್ನಿಯಲ್ಲಿ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡವು ಪಾಕ್ ಆಟಗಾರರ ಕೈಕುಲುಕಿರಲಿಲ್ಲ. ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿಯೂ ಭಾರತದ ವನಿತೆಯರು ಪಾಕ್ ಆಟಗಾರ್ತಿಯರೊಂದಿಗೆ ಹಸ್ತಲಾಘವ ಮಾಡಿರಲಿಲ್ಲ. ರೈಸಿಂಗ್ ಸ್ಟಾರ್ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿಯೂ ಇದೇ ಪದ್ಧತಿ ಮುಂದುವರಿದಿತ್ತು.

‘ಆಟಗಾರರಿಗೆ ಇದುವರೆಗೆ ಯಾವುದೇ ರೀತಿಯ ಮಾಹಿತಿ ನೀಡಲಾಗಿಲ್ಲ. ಆದರೆ ಒಂದೊಮ್ಮೆ ಆಟಗಾರರು ಹಸ್ತಲಾಘವ ಮಾಡದಿರಲು ನಿರ್ಧರಿಸಿದರೆ ಮ್ಯಾಚ್ ರೆಫರಿಗೆ ಮೊದಲೇ ತಿಳಿಸುವುದು ಕಡ್ಡಾಯ ಎಂದು ತಂಡದ ಮ್ಯಾನೇಜರ್ ಆನಂದ್ ದಾತಾರ್ ಅವರಿಗೆ ಬಿಸಿಸಿಐ ಸೂಚನೆ ನೀಡಿದೆ. ಕ್ರಿಕೆಟ್‌ನಲ್ಲಿ ರಾಜಕೀಯ ವಿಷಯಗಳನ್ನು ಮುನ್ನೆಲೆಗೆ ತರುವುದು ಐಸಿಸಿಗೆ ಇಷ್ಟವಿಲ್ಲ. ಇದು ಜನರಿಗೆ ಭಾವನಾತ್ಮಕ ಸಂಗತಿಯೂ ಹೌದು’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಟೂರ್ನಿಯ ಎ ಗುಂಪಿನಲ್ಲಿ ಭಾರತ ಮತ್ತು ಪಾಕ್ ಆಡಲಿವೆ. ಇನ್ನುಳಿದಂತೆ ಮಲೇಷ್ಯಾ ಹಾಗೂ ಯುಎಇ ತಂಡಗಳಿವೆ. ಆದ್ದರಿಂದ ಸೆಮಿಫೈನಲ್‌ಗೆ ಅರ್ಹತೆ ಗಿಟ್ಟಿಸುವ ಸಮರ್ಥ ತಂಡಗಳೂ ಭಾರತ ಮತ್ತು ಪಾಕ್ ಆಗಿವೆ. ಇದರಿಂದಾಗಿ ಕನಿಷ್ಠ ಎರಡು ಪಂದ್ಯಗಳಲ್ಲಿ ಉಭಯ ತಂಡಗಳು ಮುಖಾಮುಖಿಯಾಗುವುದು ಬಹುತೇಕ ಖಚಿತ.

ವೈಭವ ಸೂರ್ಯವಂಶಿ ಮತ್ತು ಆಯುಷ್ ಮ್ಹಾತ್ರೆ

ನಾಯಕ ಆಯುಷ್ ಅವರು ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಅಮೋಘವಾಗಿ ಆಡಿದ್ದರು. ಎರಡು ಶತಕ ಮತ್ತು ಒಂದು ಅರ್ಧಶತಕ ಗಳಿಸಿದ್ದರು. ಸೂರ್ಯವಂಶಿ ಅವರು ಈ ಟೂರ್ನಿಯ ಇತಿಹಾಸದಲ್ಲಿಯೇ ಶತಕ ಗಳಿಸಿದ ಕಿರಿಯ ವಯಸ್ಸಿನ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು. ಇಲ್ಲಿಯೂ ತಮ್ಮ ಅಬ್ಬರ ಮುಂದುವರಿಸುವ ಛಲದಲ್ಲಿದ್ದಾರೆ.

ಭಾರತ ತಂಡ: ಆಯುಷ್ ಮ್ಹಾತ್ರೆ (ನಾಯಕ), ವಿಹಾನ್ ಮಲ್ಹೋತ್ರಾ (ಉಪನಾಯಕ), ವೈಭವ್ ಸೂರ್ಯವಂಶಿ, ವೇದಾಂತ ತ್ರಿವೇದಿ, ಅಭಿಗ್ಯಾನ್ ಕುಂದು (ವಿಕೆಟ್‌ಕೀಪರ್), ಹರವಂಶ್ ಸಿಂಗ್ (ವಿಕೆಟ್‌ಕೀಪರ್), ಯುವರಾಜ್ ಗೋಹಿಲ್, ಕನಿಷ್ಕ ಚೌಹಾಣ, ಖಿಲಾನ್ ಎ ಪಟೇಲ್, ನಮನ್ ಪುಷ್ಪಕ್, ಡಿ. ದೀಪೇಶ್, ಹೆನಿಲ್ ಪಟೇಲ್, ಕಿಶನ್ ಕುಮಾರ್ ಸಿಂಗ್, ಉಧವ್ ಮೋಹನ್, ಆರನ್ ಜಾರ್ಜ್.

ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ಯುವಿ, ಹರ್ಮನ್‌ಪ್ರೀತ್ ಹೆಸರು

ಮುಲ್ಲನಪುರ (ಪಿಟಿಐ): ವಿಶ್ವಕಪ್ ವಿಜೇತ ಕ್ರಿಕೆಟಿಗರಾದ ಯುವರಾಜ್ ಸಿಂಗ್ ಮತ್ತು ಹರ್ಮನ್‌ಪ್ರೀತ್ ಕೌರ್ ಅವರ ಹೆಸರುಗಳನ್ನು ನವಚಂಡೀಗಡ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ಇಡಲಾಯಿತು.

ಪಂಜಾಬ್ ರಾಜ್ಯದ ಯುವರಾಜ್ ಸಿಂಗ್ ಅವರು 2011ರಲ್ಲಿ ವಿಶ್ವಕಪ್ ಜಯಿಸಿದ ತಂಡದಲ್ಲಿ ಆಡಿದ್ದರು. ಟೂರ್ನಿಯ ಶ್ರೇಷ್ಠ ಆಟಗಾರನ ಗೌರವ ಗಳಿಸಿದ್ದರು. ಹರ್ಮನ್‌ಪ್ರೀತ್ ಕೌರ್ ಅವರು ಈಚೆಗೆ ಚೊಚ್ಚಲ ಮಹಿಳಾ ವಿಶ್ವಕಪ್ ಜಯಿಸಿದ್ದ ತಂಡದ ನಾಯಕಿಯಾಗಿದ್ದರು.

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಸ್ಟ್ಯಾಂಡ್ ನಾಮಫಲಕಗಳನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಯುವರಾಜ್ ಮತ್ತು ಹರ್ಮನ್ ಅವರ ಕುಟುಂಬಗಳ ಸದಸ್ಯರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾ ಎದುರು ಆಡಲು ಸಿದ್ಧವಾಗಿದ್ದ ಭಾರತ ತಂಡದ ಆಟಗಾರರೊಂದಿಗೆ ಯುವರಾಜ್ ಚುಟುಕು ಸಂವಾದ ನಡೆಸಿದರು.

ಯುವರಾಜ್

ಹರ್ಮನ್‌ಪ್ರೀತ್

ವಿಶ್ವಕಪ್: ಕಡಿಮೆ ದರದಲ್ಲಿ ಟಿಕೆಟ್

ಮುಂಬೈ (ಪಿಟಿಐ): ಭಾರತ ಮತ್ತು ಶ್ರೀಲಂಕಾ ಆತಿಥ್ಯದಲ್ಲಿ 2026ರ ಫೆಬ್ರುವರಿ 7ರಿಂದ ಮಾರ್ಚ್ 8ರವರೆಗೆ ನಡೆಯಲಿರುವ ಐಸಿಸಿ ಪುರುಷರ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯಗಳ ಟಿಕೆಟ್ ಮಾರಾಟವನ್ನು ಗುರುವಾರ ಆರಂಭಿಸಲಾಗಿದೆ.

ಪಂದ್ಯಗಳಿಗೆ ಹೆಚ್ಚಿನ ಕ್ರೀಡಾಭಿಮಾನಿಗಳನ್ನು ಆಕರ್ಷಿಸಲು ಆರಂಭಿಕ ಹಂತದಲ್ಲಿ ಟಿಕೆಟ್ ದರವನ್ನು ಕಡಿಮೆ ಮಾಡಲಾಗಿದೆ. ಭಾರತದಲ್ಲಿ ₹ 100 ಹಾಗೂ ಶ್ರೀಲಂಕಾದಲ್ಲಿ 1,000 ಎಲ್‌ಕೆಆರ್‌ನಲ್ಲಿ ಟಿಕೆಟ್ ದರ ಆರಂಭವಾಗಲಿದೆ ಎಂದು ಐಸಿಸಿ ತಿಳಿಸಿದೆ.

10ನೇ ಆವೃತ್ತಿಯ ಟೂರ್ನಿಯಲ್ಲಿ ಒಟ್ಟು 20 ತಂಡಗಳು ಪ್ರಶಸ್ತಿಗಾಗಿ ಸೆಣಸಲಿದ್ದು, ಭಾರತದ ಐದು ಹಾಗೂ ಶ್ರೀಲಂಕಾದ ಮೂರು ತಾಣಗಳಲ್ಲಿ ಪಂದ್ಯಗಳು ನಡೆಯಲಿವೆ. ಭಾರತದ ಅಹಮದಾಬಾದ್, ಚೆನ್ನೈ, ನವದೆಹಲಿ, ಮುಂಬೈ ಮತ್ತು ಕೋಲ್ಕತ್ತದಲ್ಲಿ ಪಂದ್ಯಗಳು ಆಯೋಜನೆಗೊಂಡಿವೆ.

ಉದ್ಘಾಟನಾ ದಿನ ಮೂರು ಪಂದ್ಯಗಳು ನಡೆಯಲಿವೆ. ಹಾಲಿ ಚಾಂಪಿಯನ್ ಭಾರತ ತಂಡವು ಫೆ.7ರಂದು ಅಮೆರಿಕ ತಂಡ ವಿರುದ್ಧ ಅಭಿಯಾನ ಆರಂಭಿಸಲಿದೆ.

ಹಾಕಿ ಕೋಚ್ ಬ್ರಿಂಟ್ ನಿಧನ

ಬೆಂಗಳೂರು: ಕರ್ನಾಟಕ ಹಾಕಿ ಕ್ರೀಡೆಯ ವಲಯದಲ್ಲಿ ಚಿರಪರಿಚಿತ ತರಬೇತುದಾರರಾಗಿದ್ದ ಎ.ಇ. ಬ್ರಿಂಟ್ ಗುರುವಾರ ಬೆಳಿಗ್ಗೆ ಹೃದಯ ಸ್ತಂಭನದಿಂದ ನಿಧನರಾದರು.

1970–80ರ ಅವಧಿಯಲ್ಲಿ ಕರ್ನಾಟಕ ಹಾಕಿ ತಂಡದ ಪ್ರಮುಖ ಆಟಗಾರರಾಗಿದ್ದರು. ನಿವೃತ್ತಿಯ ನಂತರ ಅವರು ಭಾರತ ಜೂನಿಯರ್ ಪುರುಷರ ತಂಡ ಹಾಗೂ ಸೀನಿಯರ್ ಮಹಿಳಾ ತಂಡದ ಸಹಾಯಕ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

‘2001ರಲ್ಲಿ ಸಬ್ ಜೂನಿಯರ್ ಏಷ್ಯಾ ಕಪ್ ಗೆದ್ದ ಭಾರತ ತಂಡಕ್ಕೆ ಬ್ರಿಂಟ್ ಅವರು ಸಹಾಯಕ ಕೋಚ್ ಆಗಿದ್ದರು’ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ತಿಳಿಸಿದೆ.

ರಾಷ್ಟ್ರೀಯ ತಂಡದಿಂದ ಮರಳಿದ ನಂತರ ಅವರು ಬೆಂಗಳೂರಿನಲ್ಲಿ ರಾಜ್ಯ ಆಟಗಾರರಿಗೆ ಮಾರ್ಗದರ್ಶನ ನೀಡಿದ್ದರು.

‘ಬ್ರಿಂಟ್ ಅವರಿಗೆ ಹಾಕಿ ಕ್ರೀಡೆಯೇ ಸರ್ವಸ್ವವಾಗಿತ್ತು. ಏನೇ ಆಗಲಿ ಪ್ರತಿದಿನ ಮುಂಜಾನೆ 5.30ಕ್ಕೆ ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ಹಾಜರಾಗಿರುತ್ತಿದ್ದರು. ಮಕ್ಕಳಿಗೆ ಹಾಕಿ ಆಟದ ಮಾರ್ಗದರ್ಶನ ನೀಡುತ್ತಿದ್ದರು’ ಎಂದು ಕೆಎಸ್‌ಎಚ್‌ಎ ಪದಾಧಿಕಾರಿ ಕೆ. ಕೃಷ್ಣಮೂರ್ತಿ ಹೇಳಿದರು.

ರತನ್, ಅನ್ವಯ್ ಮಿಂಚು

ಬೆಂಗಳೂರು: ಎಡಗೈ ಸ್ಪಿನ್ನರ್ ರತನ್ ಬಿ.ಆರ್. (46ಕ್ಕೆ4) ಅವರ ಕೈಚಳಕದ ನೆರವಿನಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ (19 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಒಡಿಶಾ ವಿರುದ್ಧ ಗೆಲುವಿನತ್ತ ಹೆಜ್ಜೆಯಿಟ್ಟಿದೆ.

ಒಡಿಶಾದ ಬಲಾಂಗಿರ್‌ನಲ್ಲಿ ನಡೆಯುತ್ತಿರುವ ಸಿ ಗುಂಪಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 299 ರನ್‌ಗಳ ಹಿನ್ನಡೆ ಅನುಭವಿಸಿದ್ದ ಆತಿಥೇಯ ತಂಡವು ಗುರುವಾರ ಎರಡನೇ ಇನಿಂಗ್ಸ್‌ನಲ್ಲಿ ರತನ್ ಸ್ಪಿನ್ ದಾಳಿಗೆ ಕುಸಿದಿದೆ. ಮೂರನೇ ದಿನದಾಟದ ಮುಕ್ತಾಯಕ್ಕೆ 63 ಓವರ್‌ಗಳಲ್ಲಿ 7 ವಿಕೆಟ್‌ಗೆ 211 ರನ್ ಗಳಿಸಿದೆ. ಕೊನೆಯ ದಿನದ ಆಟ ಬಾಕಿ ಉಳಿದಿದ್ದು, ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 88 ರನ್ ಬೇಕಿದೆ.

ಒಡಿಶಾದ ಸ್ವಾಗತ್ ಸೌರವ್ ಮಿಶ್ರಾ (50;54ಎ) ಕೊಂಚ ಹೋರಾಟ ತೋರಿದರು. ಸಂಬಿತ್ ಕೆ. ಬೇಜಾ 38 ರನ್, ಅಭಿರೂಪ್ ದಾಸ್ 28 ರನ್ ಗಳಿಸಿದ್ದಾರೆ. ಅರ್ಪಿತ್ ಮೊಹಾಂತಿ ಔಟಾಗದೇ 29 ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಎರಡನೇ ದಿನದಾಟದಲ್ಲಿ ಮಣಿಕಾಂತ್ ಶಿವಾನಂದ ಅವರ ದ್ವಿಶತಕ (227) ಹಾಗೂ ಧ್ರುವ್ ಕೃಷ್ಣನ್ (105) ಅವರ ಶತಕದ ನೆರವಿನಿಂದ 3 ವಿಕೆಟ್‌ಗಳಿಗೆ 412 ರನ್ ಗಳಿಸಿದ್ದ ಕರ್ನಾಟಕ ತಂಡವು 8 ವಿಕೆಟ್‌ಗೆ 469 ರನ್ ಸೇರಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಬುಧವಾರ 62 ರನ್ ಗಳಿಸಿ ಅಜೇಯವಾಗಿದ್ದ ನಾಯಕ ಅನ್ವಯ್ ದ್ರಾವಿಡ್ 82 ರನ್ (148ಎ) ಶತಕದ ಅವಕಾಶವನ್ನು ತಪ್ಪಿಸಿಕೊಂಡರು. ಒಡಿಶಾದ ಪ್ರಿಯಾಂಶು ಮೊಹಾಂತಿ ಮತ್ತು ಸೈಯದ್ ತುಫೈಲ್ ಅಹ್ಮದ್ ಕ್ರಮವಾಗಿ ನಾಲ್ಕು ಮತ್ತು ಮೂರು ವಿಕೆಟ್ ಪಡೆದರು.

ಅನ್ವಯ್ ದ್ರಾವಿಡ್

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಒಡಿಶಾ: 58.4 ಓವರ್‌ಗಳಲ್ಲಿ 170; ಕರ್ನಾಟಕ: 126.4 ಓವರ್‌ಗಳಲ್ಲಿ 8 ವಿಕೆಟ್‌ಗೆ 469 (ಅನ್ವಯ್ ದ್ರಾವಿಡ್ 82; ರಿಯಾಂಶು ಮೊಹಾಂತಿ 87ಕ್ಕೆ 4, ಸೈಯದ್ ತುಫೈಲ್ ಅಹ್ಮದ್ 111ಕ್ಕೆ 3). ಎರಡನೇ ಇನಿಂಗ್ಸ್: ಒಡಿಶಾ: 63 ಓವರ್‌ಗಳಲ್ಲಿ 7 ವಿಕೆಟ್‌ಗೆ 211 (ಅಭಿರೂಪ್ ದಾಸ್ 28, ಸ್ವಾಗತ್ ಸೌರವ್ ಮಿಶ್ರಾ 50, ಸಂಬಿತ್ ಕೆ. ಬೇಜಾ 38, ಅರ್ಪಿತ್ ಮೊಹಾಂತಿ ಔಟಾಗದೇ 29, ಸೈಯದ್ ತುಫೈಲ್ ಅಹ್ಮದ್ 26; ರತನ್ ಬಿ.ಆರ್. 46ಕ್ಕೆ 4).

ಆಸ್ಟ್ರೇಲಿಯಾ ಯುವ ತಂಡದಲ್ಲಿ ಭಾರತ ಮೂಲದ ಆಟಗಾರರು

ಮೆಲ್ಬರ್ನ್ (ಪಿಟಿಐ): ಭಾರತ ಮೂಲದ ಇಬ್ಬರು ಆಟಗಾರರು ಆಸ್ಟ್ರೇಲಿಯಾದ 19 ವರ್ಷದೊಳಗಿನವರ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯು ಜನವರಿ 15ರಿಂದ ಫೆಬ್ರುವರಿ 6ರವರೆಗೆ ನಮಿಬಿಯಾ ಮತ್ತು ಜಿಂಬಾಬ್ವೆಯಲ್ಲಿ ನಡೆಯಲಿದೆ. ಅದರಲ್ಲಿ ಭಾಗವಹಿಸುವ ಆಸ್ಟ್ರೇಲಿಯಾ ತಂಡದಲ್ಲಿ ಸ್ಥಾನ ಪಡೆದಿರುವ ಆರ್ಯನ್ ಶರ್ಮಾ ಮತ್ತು ಜಾನ್ ಜೇಮ್ಸ್ ಅವರು ಭಾರತದ ಮೂಲದವರಾಗಿದ್ದಾರೆ.

ಆರ್ಯನ್ ಶರ್ಮಾ

ಆರ್ಯನ್ ಬ್ಯಾಟರ್ ಆಗಿದ್ದು, ಎಡಗೈ ಸ್ಪಿನ್ ಬೌಲಿಂಗ್ ಮಾಡುತ್ತಾರೆ. ಜೇಮ್ಸ್ ಅವರು ಬಲಗೈ ಮಧ್ಯಮವೇಗಿ–ಆಲ್‌ರೌಂಡರ್ ಆಗಿದ್ದಾರೆ. ಹೋದ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಯೂತ್ ಟೆಸ್ಟ್ ಮತ್ತು ಏಕದಿನ ಪಂದ್ಯಗಳಲ್ಲಿ ಇವರಿಬ್ಬರೂ ಭಾರತ ತಂಡದ ಎದುರು ಆಡಿದ್ದರು.

ಪ್ರಸ್ತುತ ತಂಡದಲ್ಲಿ ಶ್ರೀಲಂಕಾ ಮೂಲದ ನಾದೆನ್ ಕೂರೇ ಮತ್ತು ನಿತೀಶ್ ಸ್ಯಾಮುಯೆಲ್ ಹಾಗೂ ಚೀನಾದ ಅಲೆಕ್ಸ್ ಲೀ ಯಂಗ್ ಕೂಡ ಇದ್ದಾರೆ.

ಹೋದ ಸಲದ ಟೂರ್ನಿಯಲ್ಲಿ ಆಸ್ಟ್ರೇಲಿಯಾ ಯುವ ತಂಡವು ಚಾಂಪಿಯನ್ ಆಗಿತ್ತು.

ನಾಮಧಾರಿ ಕಪ್ ಹಾಕಿ: ಪವನ್ ಹ್ಯಾಟ್ರಿಕ್ ಗೋಲು

ಬೆಂಗಳೂರು: ಪವನ್ ಡಿ.ಆರ್. ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತೀಯ ಕ್ರೀಡಾ ಪ್ರಾಧಿಕಾರದ ತರಬೇತಿ ಕೇಂದ್ರ (ಸಾಯ್ ಎಸ್‌ಟಿಸಿ) ‘ಬಿ’ ತಂಡವು ನಾಮಧಾರಿ ಕಪ್ ಟೂರ್ನಿಯ ಪಂದ್ಯದಲ್ಲಿ 5–0ಯಿಂದ ಪೋಸ್ಟಲ್ ತಂಡವನ್ನು ಮಣಿಸಿತು.

ಶಾಂತಿನಗರದ ಕೆಎಸ್‌ಎಚ್‌ಎ ಕ್ರೀಡಾಂಗಣದಲ್ಲಿ ಕೂಟದ ಆರನೇ ದಿನವಾದ ಗುರುವಾರ ನಡೆದ ಪಂದ್ಯದಲ್ಲಿ ಸಾಯ್ ಎಸ್‌ಟಿಸಿ ಪರ ಪವನ್ (18ನೇ, 44ನೇ ಮತ್ತು 48ನೇ) ಮೂರು ಗೋಲು ಗಳಿಸಿದರೆ, ಬೋಪಣ್ಣ ಜಿ.ಎನ್. (2ನೇ) ಮತ್ತು ಹೃತಿಕ್ ಅಯ್ಯಪ್ಪ ಕೆ.ಡಿ. (45ನೇ) ತಲಾ ಒಂದು ಗೋಲು ಬಾರಿಸಿದರು.

ಮತ್ತೊಂದು ಪಂದ್ಯದಲ್ಲಿ ಕೆನರಾ ಬ್ಯಾಂಕ್ ತಂಡವು 1–1 ಗೋಲಿನೊಂದಿಗೆ ಡಿವೈಇಎಸ್ ಎ ತಂಡದೊಂದಿಗೆ ಡ್ರಾ ಸಾಧಿಸಿತು. ಡಿವೈಇಎಸ್ ಪರ ಶಿವಕುಮಾರಯ್ಯ ವಿ ಪೂಜಾರ್ (44ನೇ) ಮತ್ತು ಕೆನರಾ ಬ್ಯಾಂಕ್ ತಂಡದ ನಿತೇಶ್ ಶರ್ಮಾ (48ನೇ) ಗೋಲು ಗಳಿಸಿದರು.

ನಿಜವಾಗಿದೆ, ಆರೋಗ್ಯಕ್ಕೆ ಒಳ್ಳೆಯದಾಗಿದೆ
ಬೈದ್ಯನಾಥ್ ಚ್ಯವನ್‌ಪ್ರಾಶ್ ಸ್ಪೆಷಲ್

ಚ್ಯವನ್–ಫಿಟ್–ಶುಗಾಫ್ರೀ ಕೂಡ ದೊರೆಯುತ್ತದೆ
ಬೈದ್ಯನಾಥ್ ಚ್ಯವನ್‌ಪ್ರಾಶ್ ಅನ್ನು ಪರಿಶುದ್ಧ ತುಪ್ಪದಲ್ಲಿ ತಯಾರಿಸಲಾಗಿದೆ
Available in all Medical Stores & Ayurvedic Stores 844 844 4935

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ
ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ), ಇದರ ಅಂಗ ಸಂಸ್ಥೆ ಮೂಡುಬಿದಿರೆ, ದ.ಕ.-574227
ಉಚಿತ ಶಿಕ್ಷಣ ಸೌಲಭ್ಯ - ಅರ್ಜಿ ಆಹ್ವಾನ
ಶೈಕ್ಷಣಿಕ ವರ್ಷ 2026-27 ಸಾಲಿನ 6, 7, 8 ಮತ್ತು 9ನೇ ತರಗತಿಗಳಿಗೆ ಉಚಿತ ಶಿಕ್ಷಣ ಸೌಲಭ್ಯದಡಿಯಲ್ಲಿ ಅರ್ಹವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಶಾಲಾ ವೆಬ್ಸೈಟ್ www.alvasschools.com ನಲ್ಲಿ ಅರ್ಜಿ ಲಿಂಕ್ ಲಭ್ಯವಿರುತ್ತದೆ. ಸೂಚನೆಗಳನ್ನು ಓದಿಕೊಂಡು ಅರ್ಜಿ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15-01-2026 ಆಗಿರುತ್ತದೆ.
ಡಾ| ಎಂ. ಮೋಹನ ಆಳ್ವ
ಅರ್ಜಿ ಸಲ್ಲಿಸಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
APPLY HERE
ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳ ಮತ್ತು ದಿನಾಂಕ
01 ಮಾರ್ಚ್ 2026 ಆದಿತ್ಯವಾರದಂದು
ಮೂಡುಬಿದಿರೆಯ ಆಳ್ವಾಸ್ ವಿದ್ಯಾಗಿರಿ ಆವರಣ
ಸಂಪೂರ್ಣ ಉಚಿತ ಶಿಕ್ಷಣ, ವಸತಿ ಹಾಗೂ ಊಟೋಪಚಾರಗಳ ಸೌಲಭ್ಯ ದೊರಕಲಿದೆ
+91 7026530137, +91 7026530263